TEXT FLY WITHIN
THE BOOK ONLY

TEXT PROBLEM
WITHIN THE
BOOK ONLY

UNIVERSAL LIBRARY
OU_198485
UNIVERSAL LIBRARY

# ಬ್ರಹ್ಮಚರ್ಯೆಯೊ ಕಾಮಸಾಧನೆಯೊ

(ಅಥವಾ ಇಂದ್ರಿಯ ನಿಗ್ರಹ)

(ಮಹಾತ್ಮಾ ಗಾಂಧಿಯವರ ಮೂಲಗ್ರಂಥದ ಅನುವಾದ)

ಅನುವಾದಕ

**ಶ್ರೀ. ದ. ಕೃ. ಭಾರದ್ವಾಜ**

ಸಂಪಾದಕ, ರಂಗಭೂಮಿ, ಶ್ರೀ ತುಳಸೀದಾಸ ರಾಮಾಯಣ; ದಾಂಪತ್ಯವಿಜ್ಞಾನ
ಭೀಷ್ಮ, ಸೀತಾ, ಶ್ರೀಕೃಷ್ಣಜನ್ಮಾಷ್ಟಮಿ ಇತ್ಯಾದಿ ಗ್ರಂಥಕರ್ತೃ.

ಪ್ರಕಾಶಕರು:

**ಟಾಗೋರ್ ಕಂಪನಿ**

**ಬೆಂಗಳೂರು ಸಿಟಿ ಮತ್ತು ಮದ**

ದ್ವಿತೀಯ ಮುದ್ರಣ] **ಬೆಲೆ ೦—೮—೦** [ಹಕ್ಕು ಕಾದಿಡಲಾಗಿದೆ.

# ಸ ಮ ರ್ಪ ಣೆ

ಕರ್ಣಾಟಕದ

ದ ಂ ಪ ತಿ ಗ ಳಿ ಗೆ

---

ಪ್ರಥಮ ಮುದ್ರಣ ೧೯೨೮.

ದ್ವಿತೀಯ ಮುದ್ರಣ ೧೯೩೦.

# ಮೊದಲಿನ ಮಾತುಗಳು

ಈ ಪುಸ್ತಕವು ಮಹಾತ್ಮ ಗಾಂಧಿಯವರ „ ಸೆಲ್ಫ್ ರೆಸ್ಟ್ರೇಂಟ್ ವರ್ಸಸ್ ಸೆಲ್ಫ್-ಇಂಡಲ್ಜನ್ಸ್" ಎಂಬ ಇಂಗ್ಲಿಷು ಪುಸ್ತಕದ ಅನುವಾದವಾಗಿರುವುದು. ಇತ್ತೀಚೆಗೆ ದಾಂಪತ್ಯ ವಿಜ್ಞಾನ ಬೋಧಕ ಗ್ರಂಥಗಳು ಬೇರೆ ಭಾಷೆಗಳಲ್ಲಿ ಅನೇಕವಾಗಿ ಬರೆಯಲ್ಪಟ್ಟಿರುವವು. ಆದರೆ ಕನ್ನಡದಲ್ಲಿ ಮೊನ್ನೆತಾನೆ ಈ ಪುಸ್ತಕದ ಪ್ರಕಾಶಕರಿಂದ ಪ್ರಕಟಿತವಾಗಿ, ಕೆಲವು ದಿನಗಳೊಳಗಾಗಿ ಮೊದಲನೆಯ ಮುದ್ರಣದ ಪ್ರತಿಗಳೆಲ್ಲ ಮುಗಿದುಹೋದ 'ದಾಂಪತ್ಯ ವಿಜ್ಞಾನ' ವೆಂಬ ನನ್ನಿಂದ ರಚಿತವಾದ ಪುಸ್ತಕದ ವಿನಾ ಬೇರೆ ಶಾಸ್ತ್ರೀಯ ಗ್ರಂಥಗಳು ಇರಲಿಲ್ಲ. ನಮ್ಮ ಸಮಾಜದ ಪ್ರಕೃತ ಹೀನದೆಸೆಗೆ, ಪ್ರಾಚೀನಾರ್ಯರ ಧರ್ಮಸೂತ್ರಗಳನ್ನು ನಾವು ಪೂಜಿಸುತ್ತ, ಆಚರಣೆಯಲ್ಲಿ ಮಾತ್ರ ಪಶ್ಚಾಚರಣೆಯನ್ನು ಮಾಡುತ್ತಿರುವುದೇ ಕಾರಣವಾಗಿದೆಯೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಈ ವಿಚಾರವು ಮಹಾತ್ಮಾ ಗಾಂಧಿಯವರ ಈ ಪುಸ್ತಕದ ಅನುವಾದದಲ್ಲಿ ಸ್ಪಷ್ಟವಾಗಿ ಕಂಡುಬರುವುದು. ಕನ್ನಡಿಗರಿಗೆ ಈ ಗ್ರಂಥಾವಲೋಕನದಿಂದ ಲಾಭವಾಗಿ, ಸಮಾಜೋನ್ನತಿಗೆ ಸಹಾಯವಾಗುವುದಾದರೆ ನನ್ನ ಈ ಶ್ರಮವು ಸಾರ್ಥಕವಾಯಿತೆಂದೆಣಿಸುವೆನು.

# ದ್ವಿತೀಯ ಮುದ್ರಣದ ಮುನ್ನುಡಿ

'ದಾಂಪತ್ಯ ವಿಜ್ಞಾನ' ದಂತೆಯೆ ಈ ಪುಸ್ತಕದ ಮೊದಲನೆಯ ಮುದ್ರಣದ ಪ್ರತಿಗಳು ಕೆಲವು ದಿನಗಳಲ್ಲಿ ಮುಗಿದು ಹೋದವು. ಇದರಿಂದ ತಮ್ಮ ಆತ್ಮದ ಬೀಡೆನಿಸಿದ ಶರೀರ ವಿಚಾರವಾಗಿ ಸರಿಯಾದ ಜ್ಞಾನವನ್ನು ಹೊಂದಬೇಕೆಂಬ ಲಾಲಸೆಯು ಜನತೆಯಲ್ಲಿ ಹೇಗೆ ಹೆಚ್ಚುತ್ತಿದೆಯೆಂಬುದು ವ್ಯಕ್ತವಾಗುವುದು. ಇದರಿಂದ ಪ್ರೇರಿತನಾಗಿ ಹಲವು ಸುಪ್ರಸಿದ್ಧ ಪಾಶ್ಚಾತ್ಯ ಪೌರ್ವಾತ್ಯ ಗ್ರಂಥಗಳಾಧಾರದಿಂದ ಬೇರೊಂದು ದೊಡ್ಡ ಗ್ರಂಥವನ್ನು ಬರೆಯುತ್ತಿರುವೆನು. ಸಾಧ್ಯವಿದ್ದಷ್ಟು ಶೀಘ್ರವಾಗಿ ಅದನ್ನು ವಾಚಕರ ಮುಂದಿರಿಸುವೆನು.

ಈ ಪುಸ್ತಕದ ಪ್ರತಿಗಳು ಮುಗಿದು ಕೆಲವು ತಿಂಗಳುಗಳಾದವು. ಆದರೆ ಕೆಲವು ಅಡಚಣೆಗಳಿಂದ ದ್ವಿತೀಯ ಮುದ್ರಣದ ಈ ಪ್ರತಿಯನ್ನು ಇದಕ್ಕೂ ಮುಂಚಿತವಾಗಿ ಹೊರಗೆಡಹಲಾಗದಿದ್ದುದಕ್ಕೆ ವಾಚಕರ ಕ್ಷಮೆ ಬೇಡುವೆನು.

ಈ ಮುದ್ರಣದಲ್ಲಿ ಯಾವ ಬದಲಾವಣೆಯನ್ನೂ ಮಾಡಿಲ್ಲ. ಆದರೆ ಮುದ್ರಾರಾಕ್ಷಸನ ಕಾಟವು ಕರ್ಣಾಟಕದಿಂದ ದೂರವಾಗುವ ಕಾಲವಿನ್ನೂ ಬಂದಿಲ್ಲ. ಆದುದರಿಂದ ಎಷ್ಟು ಜಾಗರೂಕವಾಗಿದ್ದರೂ ಅಲ್ಲಲ್ಲಿ ಬಂದಿರುವ ಅಕ್ಷರ ಸ್ಖಾಲಿತ್ಯಗಳಿಗಾಗಿ ವಾಚಕರು ಕ್ಷಮಿಸಬೇಕು.

ವಿಶ್ವೇಶ್ವರಪುರ
ಬೆಂಗಳೂರು ನಗರ
೨೪-೨-೧೯೩೦

ಕನ್ನಡಿಗರ ಅಡಿಯಾಳು

ದ. ಕೃ. ಭಾರದ್ವಾಜ

# ವಿಷಯಾನುಕ್ರಮಣಿಕೆ.


| | | | | |
|---|---|---|---|---|
| | ಮುನ್ನುಡಿ (ಮ. ಗಾಂಧಿಯವರದು) | .... | .... | I-IV |
| ೧. | ನೀತಿಯ ದಿವಾಳಿ (ಲಾಭಗಳು) | .... | .... | ೧-೬೦ |
| ೨. | ಗರ್ಭನಿರೋಧ | .... | .... | ೬೧-೬೩ |
| ೩. | ಕೆಲವು ವಿತರ್ಕಗಳ ವಿವೇಚನೆ | .... | .... | ೬೪-೮೧ |
| ೪. | ಬ್ರಹ್ಮಚರ್ಯೆಯ ಆವಶ್ಯಕತೆ | .... | .... | ೮೧-೯೨ |
| ೫. | ಆತ್ಮಸಂಯಮ | .... | .... | ೯೩-೯೯ |
| ೬. | ಬ್ರಹ್ಮಚರ್ಯೆ | .... | .... | ೯೯-೧೦೬ |
| ೭. | ಸತ್ಯವೂ ಬ್ರಹ್ಮಚರ್ಯೆಯೂ | .... | .... | ೧೦೬-೧೧೧ |
| ೮. | ಪವಿತ್ರತೆ | .... | .... | ೧೧೧-೧೧೫ |
| ೯. | ಗುಟ್ಟಿನ ಮಾತುಗಳು | .... | .... | ೧೧೫-೧೨೨ |

# ಮುನ್ನುಡಿ

**(ಗಾಂಧಿಜಿಯವರ ಮೂಲ ಲೇಖನದಿಂದ)**

ಈ ಪುಸ್ತಕದ ಮೊದಲನೆಯ ಮುದ್ರಣದ ಪ್ರತಿಗಳೆಲ್ಲ ಒಂದು ವಾರದೊಳಗಾಗಿಯೇ ಮಾರಾಟವಾದುದು ನನಗೆ ಸಂತೋಷವನ್ನುಂಟುಮಾಡಿದೆ. ಈ ಗ್ರಂಥದಲ್ಲಿ ಸಂಗ್ರಹಿಸಲಾಗಿರುವ ಲೇಖನಮಾಲೆಗೆ ಅವಕಾಶವನ್ನಿತ್ತ ಪತ್ರವ್ಯವಹಾರಗಳಿಂದ, ಇಂತಹ ಪುಸ್ತಕವೊಂದರ ಆವಶ್ಯಕತೆಯಿದ್ದಿತೆಂದು ತಿಳಿದುಬರುವುದು. ಯಾರು ಭೋಗಮಗ್ನರಾಗದೇ ಸಾಮಾನ್ಯ ಪರಿಸ್ಥಿತಿಯಲ್ಲಿ ನಮಗೆ ಸಹಜವಾಗಿರಬೇಕಾದ ಆತ್ಮಸಂಯಮನಕ್ಕಾಗಿ ಹೋರಾಡುತ್ತಿರುವರೊ ಅಂತಹರಿಗೆ ಈ ಪುಸ್ತಕದಿಂದ ಸ್ವಲ್ಪಮಟ್ಟಿಗೆ ಸಹಾಯವಾಗಬಹುದು. ಮುಂದೆ ಹೇಳುವ ಉಪದೇಶ ವಾಕ್ಯಗಳು ಅವರ ಮಾರ್ಗದರ್ಶನಕ್ಕೆ ಉಪಯುಕ್ತವಾಗಬಹುದು.

(೧) ನೀವು ವಿವಾಹಿತರಾಗಿದ್ದರೆ ನಿಮ್ಮ ಪತ್ನಿಯು ನಿಮ್ಮ ಸ್ನೇಹಿತೆ, ಸಹವಾಸಿ, ಸಹಕಾರಿ—ಆದರೆ ನಿಮ್ಮ ಕಾಮಸಾಧನೆಯ ಯಂತ್ರವಲ್ಲ—ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

(೨) ಆತ್ಮಸಂಯಮನವು ನಿಮ್ಮ ಜೀವನದ ಕಟ್ಟಳೆಯಾಗಿರಬೇಕು. ಆದುದರಿಂದ, ಕೇವಲ ಪರಸ್ಪರ ಅಭಿಲಾಷೆಯುಂಟಾದಾಗ ಮತ್ತು ಅದರ ನಿಯಮರಹಸ್ಯಗಳನ್ನು ಪರಸ್ಪರ ಸರಿಯಾಗಿ ಗ್ರಹಿಸಿದ್ದಾಗಮಾತ್ರವೇ ಸತಿಪತಿಯರು ಸಂಯೋಗವನ್ನು ಮಾಡಬಹುದು.

(೩) ನೀವು ಅವಿವಾಹಿತರಾಗಿದ್ದರೆ ನಿಮ್ಮ ದೇಹವನ್ನು ಪವಿತ್ರವಾಗಿಟ್ಟುಕೊಳ್ಳುವುದು,-ನಿಮ್ಮ ಆತ್ಮ, ಸಮಾಜ ಮತ್ತು ನಿಮ್ಮ ಭವಿಷ್ಯಪತ್ನಿ—ಇವರ ಹಿತಕ್ಕಾಗಿ ಮಾಡಬೇಕಾದ ಕರ್ತವ್ಯವೆಂದು ತಿಳಿಯ

ಬೇಕು. ಈ ಕರ್ತವ್ಯಭಾವನೆಯನ್ನು ಅನುಷ್ಠಾನಮಾಡುವುದರಿಂದ ಎಲ್ಲಾ ವಿಧವಾದ ಮೋಹಾಕರ್ಷಣಗಳಿಗೆ ಅದು ರಾಮಬಾಣದಂತಾಗುವುದು.

(೪) ಯಾವಾಗಲೂ ನಮ್ಮ ಕಣ್ಣಿಗೆ ಕಾಣಿಸದಿದ್ದರೂ ನಮ್ಮೊಳಗಿದ್ದು ನಮ್ಮ ದುರಾಲೋಚನೆಗಳನ್ನು ತಿಳಿಯುತ್ತಿರುವ ಅದೃಶ್ಯ ಶಕ್ತಿಯ ವಿಚಾರವಾಗಿ ಧ್ಯಾನಮಾಡುತ್ತಿರಿ. ಅದು ನಿಮಗೆ ಯಾವಾಗಲೂ ಸಹಾಯಮಾಡುವುದು.

(೫) ಆತ್ಮಸಂಯಮನದ ನಿಯಮಗಳು ಕಾಮಸಾಧನೆಯ ಜೀವನದ ನಿಯಮಗಳಿಂದ ಬೇರೆಯಾಗುವುದು ಅಗತ್ಯವಾಗಿದೆ. ಆದುದರಿಂದ ನೀವು ನಿಮ್ಮ ಸ್ನೇಹಿತರೂ, ನೀವೂ ಓದತಕ್ಕ ವಿಷಯ, ನಿಮ್ಮ ವಿಶ್ರಾಂತಿಸಾಧನೆ, ನಿಮ್ಮ ಆಹಾರ ಇವುಗಳ ವಿಚಾರದಲ್ಲಿ ನಿಯಮಬದ್ಧರಾಗಿರಬೇಕು.

ನೀವು ಯಾವಾಗಲೂ ಒಳ್ಳೆಯವರ ಮತ್ತು ಪರಿಶುದ್ಧಾತ್ಮರ ಸಹವಾಸವನ್ನೇ ಮಾಡಬೇಕು.

ಕಾಮಾಸಕ್ತಿಯನ್ನು ಹೆಚ್ಚಿಸುವಂತಹ ಕಾದಂಬರಿಗಳನ್ನೂ (ನಾವೆಲುಗಳನ್ನೂ) ಮಾಸಿಕ ಪಹಿಗಳನ್ನೂ ಓದಕೂಡದು. ಮಾನವ ಹಿತಸಾಧಕವಾಗುವಂತಹ ಗ್ರಂಥಗಳನ್ನೇ ಓದಬೇಕು.

ವಿಚಾರನಿರ್ದೇಶಕ್ಕಾಗಿಯೂ ಮಾರ್ಗದರ್ಶನಕ್ಕಾಗಿಯೂ ಒಂದು ಪುಸ್ತಕವನ್ನು ನಿಮ್ಮ ಜತೆಯಲ್ಲಿಟ್ಟುಕೊಳ್ಳುವದು ನಿಮ್ಮ ಕರ್ತವ್ಯವಾಗಿರುವದು.

ನೀವು ನಾಟಕಮಂದಿರಗಳನ್ನೂ ಸಿನೀಮಾ (ಚಿತ್ರಪ್ರದರ್ಶನ) ಮಂದಿರಗಳನ್ನೂ ವರ್ಜಿಸಬೇಕು. ಎಲ್ಲಿ ನಿಮ್ಮ ವಿಚಾರಗಳು ಕರಡಾಗದೆ, ವಿಶ್ರಾಮದೊರೆಯುವುದೋ ಅದೇ ನಿಜವಾದ ವಿಶ್ರಾಂತಿಯೆನಿಸುವುದು. ಆದುದರಿಂದ ಮಾತು ಮತ್ತು ಸಂಗೀತದಿಂದ ಆತ್ಮೋದ್ಧಾರವಾಗುವ ಭಜನಮಂಡಳಿಗಳಿಗೆ ಹೋಗಬೇಕು.

ನಿಮ್ಮ ನಾಲಿಗೆಯನ್ನು ತೃಪ್ತಿಗೊಳಿಸುವುದಕ್ಕಾಗಿ ತಿನ್ನದೆ ಕೇವಲ ಹಸಿವನ್ನು ಹೋಗಲಾಡಿಸುವುದಕ್ಕೆ ಮಾತ್ರ ಆಹಾರ ತೆಗೆದುಕೊಳ್ಳಬೇಕು. ಕಾಮಸಾಧನೆಯ ವೃತ್ತಿಯವನು ತಿನ್ನುವುದಕ್ಕಾಗಿ ಜೀವಿಸುವನು; ಆತ್ಮಸಂಯಮ ಸಾಧಕನು ಕೇವಲ ಜೀವದಿಂದಿರುವುದಕ್ಕಾಗಿ ಆಹಾರ ತೆಗೆದುಕೊಳ್ಳುವನು. ಆದುದರಿಂದ ವಿಷಯಾಸಕ್ತಿಯನ್ನು ಹೆಚ್ಚಿಸುವ ಎಲ್ಲಬಗೆಯ ಮಸಾಲೆ ಪದಾರ್ಥಗಳನ್ನೂ ನಾಡಿನರಗಳನ್ನು ಉದ್ರೇಕಗೊಳಿಸುವ ಮಾದಕ ದ್ರವ್ಯವನ್ನೂ ಸರಿತಪ್ಪುಗಳನ್ನು ವಿಮರ್ಶಿಸುವ ಶಕ್ತಿಯನ್ನು ನಾಶಗೊಳಿಸುವ ಮತ್ತಕಾರಕ ವಸ್ತುಗಳನ್ನೂ ವರ್ಜಿಸಬೇಕು. ನಿಮ್ಮ ಆಹಾರದ ಪರಿಮಾಣ ಮತ್ತು ಸಮಯಗಳನ್ನು ನಿಯಮಬದ್ಧವಾಗಿಟ್ಟುಕೊಳ್ಳಬೇಕು.

(೬) ನಿಮ್ಮ ಇಂದ್ರಿಯಗಳು ನಿಗ್ರಹಕ್ಕೊಳಗಾಗದಂತೆ ಉದ್ರೇಕಗೊಂಡಾಗ, ಮೊಣಕಾಲೂರಿ ದೇವರನ್ನು "ಸಹಾಯಮಾಡು" ಎಂದು ಪ್ರಾರ್ಥಿಸಿರಿ. ರಾಮನಾಮವು ನನಗೆ ಯಾವಾಗಲೂ ತಪ್ಪದೇ ಸಹಾಯಮಾಡುತ್ತಿರುವುದು. ನಿಮ್ಮ ಬಾಹ್ಯಸಹಾಯಕ್ಕಾಗಿ, ನಿತಂಬಸ್ನಾನ (ಹಿಪ್‌ಬಾತ್) ವನ್ನು ಮಾಡಿರಿ. ಎಂದರೆ ನೀರು ತುಂಬಿರುವ ಅಗಲವಾದ ಬಾಯುಳ್ಳ ತಣ್ಣೀರಿನ ತೊಟ್ಟಿಯಲ್ಲಿ ಕುಳಿತು, ನಿಮ್ಮ ಕಾಲನ್ನು ಪಾತ್ರೆಯ ಹೊರಗಿಡಬೇಕು. ಆ ಕೂಡಲೇ ನಿಮ್ಮ ಇಂದ್ರಿಯ ವೃತ್ತಿಗಳು ಶಾಂತವಾಗುವವೆಂಬುದು ನಿಮಗೇ ತಿಳಿದುಬರುವುದು. ನೀವು ನಿರ್ಬಲರಾಗಿದ್ದು, ಚಳಿಯುಂಟಾಗುವುದಾದರೆ ಮಾತ್ರ ಈ ಸಾಧನೆಯನ್ನು ಮಾಡಬೇಡಿರಿ. ಇಲ್ಲವೇ ನೀರಿನಲ್ಲಿ ಕೆಲವು ನಿಮಿಷಗಳವರೆಗೆ ಕುಳಿತಿರಬಹುದು.

(೭) ಬೆಳಿಗ್ಗೆ ಮುಂಚಿತವಾಗಿಯೆ ಎದ್ದು ಮತ್ತು ರಾತ್ರಿ ಮಲಗುವುದಕ್ಕೆ ಮುಂಚೆ ಕೆಲವು ದೂರ ನಡೆಯುವ ಸಾಧನೆಯನ್ನು ಮಾಡಬೇಕು.

(೮) ಬೆಳಿಗ್ಗೆ (ಮುಂಜಾನೆ) ಏಳುವುದರಿಂದಲೂ ರಾತ್ರಿ ಜಾಗ್ರತೆಯಾಗಿ ಮಲಗುವುದರಿಂದಲೂ ಮಾನವನಿಗೆ ಆರೋಗ್ಯ, ಐಶ್ವರ್ಯ,

ಜ್ಞಾನಗಳು ಲಭಿಸುವವು. ರಾತ್ರಿ ೯ ಘಂಟೆಗೆ ಮಲಗಿ ಬೆಳಿಗ್ಗೆ ೪ ಘಂಟೆಗೆ ಏಳುವುದು ಒಳ್ಳೆಯ ನಿಯಮವಾಗಿರುವುದು. ರಾತ್ರಿ ಮಲ ಗುವಾಗ ಉಪವಾಸವಾಗಿ ಮಲಗುವುದು ಒಳ್ಳೆಯದು. ಆದುದರಿಂದ ಸಾಯಂಕಾಲ ೬ ಘಂಟೆಗೆ ಮುಂಚಿತವಾಗಿ ನಿಮ್ಮ ಭೋಜನವನ್ನು ಮುಗಿಸಿಕೊಳ್ಳುವುದೊಳ್ಳೆಯದು.

(೯) ಸೃಷ್ಟಿಯ ಎಲ್ಲ ಜೀವಿಗಳನ್ನೂ ಸೇವಿಸುತ್ತ ದೇವರ ಪೂಜ್ಯತ್ವವನ್ನೂ ಪ್ರೇಮವನ್ನೂ ವ್ಯಕ್ತಪಡಿಸುವುದಕ್ಕಾಗಿ ಮಾನ ವನು ದೇವರ ಪ್ರತಿನಿಧಿಯಾಗಿರುವನೆಂಬುದನ್ನು ಜ್ಞಾಪಕದಲ್ಲಿಟ್ಟು ಕೊಳ್ಳಿರಿ. ಕೇವಲ ಸೇವೆಯಿಂದಲೇ ನಿಮಗೆ ಪರಮಸಂತೋಷವುಂ ಟಾಗುವುದು. ಅದರ ವಿನಾ ಈ ಜೀವನದಲ್ಲಿ ನಿಮಗೆ ಮತ್ತಾವ ಸುಖ ವೂ ಬೇಕಾಗುವುದಿಲ್ಲ.

**ಮೋ. ಕ. ಗಾಂಧಿ.**

|| ಶ್ರೀ ||

# ಬ್ರಹ್ಮಚರ್ಯೆಯೊ ಕಾಮಸಾಧನೆಯೊ!

## ನೀತಿಯ ದಿವಾಳಿ

### (೧)

ನನ್ನ ಪ್ರಿಯಮಿತ್ರರು 'ಕಾಂಟ್ರಾಸೆಪ್ಟಿವ್ಸ್' ಎಂಬ ಗರ್ಭನಿರೋಧಕಸಾಧನಗಳ ಮೂಲಕ ಜನನ ನಿರೋಧವನ್ನು ಮಾಡುವುದಕ್ಕೆ ಒಪ್ಪುವ ವಿಚಾರಗಳಿಂದೊಡಗೂಡಿದ ದೇಶೀಯ ವರ್ತಮಾನ ಪತ್ರಿಕೆಗಳ ಲೇಖನಗಳನ್ನು ಕತ್ತರಿಸಿ ನನ್ನ ಬಳಿ ಕಳುಹಿಸುತ್ತಿರುವರು. ಯುವಕರ ಸ್ವಂತ ನಡತೆಯ ವಿಚಾರವಲ್ಲಿ ನನ್ನ ಪತ್ರವ್ಯವಹಾರವು ದಿನದಿನಕ್ಕೂ ಹೆಚ್ಚಾಗಿ ಬೆಳೆಯುತ್ತಿರುವುದು. ನನ್ನ ಪತ್ರಲೇಖಕರು ಕೇಳಿರುವ ನೂರಾರು ಪ್ರಶ್ನೆಗಳಲ್ಲಿ, ಕೆಲವನ್ನು ಮಾತ್ರ ನಾನು ಇಲ್ಲಿ ವಿವೇಚಿಸಬಲ್ಲವನಾಗಿರುವೆನು. ಅಮೇರಿಕಾದ ಸ್ನೇಹಿತರು ಈ ವಿಷಯವಾಗಿ ಅನೇಕ ಪುಸ್ತಕಗಳನ್ನು ಕಳುಹಿಸುತ್ತಿರುವರು. ಮತ್ತೆ ಅವರಲ್ಲಿ ಕೆಲವರು ಗರ್ಭನಿರೋಧ ಸಾಧನೆಗಳಿಗೆ ವಿರೋಧವಾದ ಲೇಖನಗಳನ್ನು ನಾನು ಬರೆದುದಕ್ಕಾಗಿ ಕೋಪಗೊಂಡಿರುವರು. ಇತರ ಅನೇಕ ವಿಚಾರಗಳಲ್ಲಿ ನಾನು ವಿಶೇಷ ಸುಧಾರಕನೆನಿಸಿದ್ದರೂ ಜನನನಿರೋಧ ವಿಚಾರದಲ್ಲಿ ನಾನಿನ್ನೂ ಹಿಂದಿನ ಯುಗದವನಂತೆ ಮಾತನಾಡುತ್ತಿರುವೆನೆಂದು ಅವರು ವಿಷಾದಿಸುತ್ತಿರುವರು. ಈ ಗರ್ಭನಿರೋಧ ಚಳವಳದಲ್ಲಿ ಬಹು ಮಿತಶೀಲರಾದವರನೇಕ ಪುರುಷರೂ, ಎಲ್ಲ ದೇಶಗಳ ಸ್ತ್ರೀಯರೂ ಸೇರಿರುವರೆಂದು ನನಗೆ ತಿಳಿದುಬಂದಿರುವುದು.

ಆದುದರಿಂದ ಈ ವಿಚಾರ ಸಮರ್ಥನೆಯ ಪರವಾಗಿ ಕೆಲವು ಕಟ್ಟುನಿಟ್ಟುಗಳಿರಬೇಕೆಂದೂ ಈ ವಿಷಯವಾಗಿ ನಾನು ಇದುವರೆಗೆ ಹೇಳಿದುದಕ್ಕಿಂತಲೂ ಹೆಚ್ಚು ವಿಚಾರಗಳನ್ನು ಹೇಳಬೇಕಾಗಿರುವು ದೆಂದೂ ನಾನು ಭಾವಿಸಿದೆನು. ಈ ವಿಚಾರವಾಗಿಯೂ ಈ ಸಮಸ್ಯೆಯ ಸಂಬಂಧವಾಗಿಯೂ ನಾನು ಕೆಲವು ಗ್ರಂಥಗಳನ್ನಾದರೂ ಓದಬೇ ಕೆಂದು ಆಲೋಚಿಸುತ್ತಿರುವಾಗ "ನೈತಿಕ ದಿವಾಳಿಯ ಮಾರ್ಗ (Towards Moral Bankruptcy)" ಎಂಬ ಪುಸ್ತಕ ವೊಂ ದು ನನ್ನ ಕೈಸೇರಿತು. ಅದು ಈ ವಿಷಯವನ್ನೇ ಕುರಿತು ಬರೆದುದಾಗಿದೆ, ಮತ್ತು ಅದು ಶಾಸ್ತ್ರೀಯರೀತಿಯಿಂದ ಬರೆದುದಾಗಿದೆಯೆಂದು ನಾನು ಭಾವಿಸುವೆನು. ಅದರ ಮೂಲ ಗ್ರಂಥವು "D' Indiscipline des moeurs" ಎಂದರೆ "ನೀತಿಯ ಕಟ್ಟಳೆಗಳ ಶಿಸ್ತು ಮೀರಿರು ವುದು" ಎಂಬ ಹೆಸರಿನಿಂದ ಫ್ರೆಂಚ್ ಭಾಷೆಯಲ್ಲಿ ಎಮ್. ಪಾಲ್ ಬ್ಯೂರೋ ಯವರಿಂದ ರಚಿತವಾಗಿರುವುದು. ಅದರ ಇಂಗ್ಲಿಷ್ ಭಾಷಾಂ ತರವು ಲಂಡನ್ನಿನ ಕಾನ್ಸ್‌ಟೇಬಲ್ ಕಂಪನಿಯವರಿಂದ, ಡಾಕ್ಟರ್ ಮೇರಿ ಸ್ಕಾರ್‌ಲೀಬ್, ಸಿ.ಬಿ.ಇ., ಎಮ್. ಡಿ., ಎಂ. ಎಸ್.(ಲಂಡನ್) ಇವರ ಪ್ರಸ್ತಾವನೆಯೊಂದಿಗೆ ಪ್ರಕಟಿಸಲ್ಪಟ್ಟಿರುವುದು. ಅದರಲ್ಲಿ ೧೫ ಪ್ರಕರಣಗಳು ೫೩೮ ಪುಟಗಳಲ್ಲಿ ಅಡಗಿರುವವು.

ಆ ಪುಸ್ತಕವನ್ನು ಓದಿದ ನಂತರ, ಆ ಗ್ರಂಥಕರ್ತನ ಮುಖ್ಯಾ ಭಿಪ್ರಾಯಗಳನ್ನು ಸಂಗ್ರಹಿಸುವ ಮೊದಲು, ಜನನನಿರೋಧದ ಪರ ವಾಗಿ ಬರೆದಿರುವ ಪುಸ್ತಕಗಳನ್ನೂ ಓದಬೇಕಾದುದು ನ್ಯಾಯವೆಂದು ಭಾವಿಸಿದೆನು. ಅನಂತರ ಭಾರತ ಸೇವಕ ಸಮಿತಿ (Servants of India Society) ಯವರಿಂದ ಅವರಲ್ಲಿ ಈ ಸಂಬಂಧವಾಗಿದ್ದ ಪುಸ್ತಕಗಳನ್ನು ಎರವಾಗಿ ಪಡೆದೆನು. ಅವರಬಳಿ ಇದ್ದ ಕೆಲವು ಗ್ರಂ ಥಗಳನ್ನು ದಯೆಯಿಟ್ಟು ಅವರು ನನಗೆ ಕೊಟ್ಟರು. ಈ ವಿಷಯ ವನ್ನು ಅಧ್ಯಯನಮಾಡುತ್ತಿರುವ ಕಾಕಾ ಕಾಲೇಲ್‌ಕರ್ ಅವರು ನನಗೆ ಈ ಸಂಬಂಧವಾಗಿ ಹ್ಯಾವ್‌ಲಕ್ ಎಲ್ಲಿಸರಿಂದ ರಚಿಸಲ್ಪಟ್ಟಿರುವ ಗ್ರಂಥ

ಗಳನ್ನೆಲ್ಲ ಕೊಟ್ಟರು. ಮತ್ತೊಬ್ಬ ಮಿತ್ರರು ಈ ವಿಚಾರದಲ್ಲಿ ಸುಪ್ರಸಿದ್ಧ ವೈದ್ಯಶಾಸ್ತ್ರಜ್ಞರ ಅಭಿಪ್ರಾಯಗಳನ್ನು ಒಳಗೊಂಡಿದ್ದ "ದಿ ಪ್ರಾಕ್ಟಿಷ್‌ನರ್'' ಎಂಬ ವೈದ್ಯಕೀಯ ಪತ್ರಿಕೆಯ ವಿಶೇಷ ಸಂಚಿಕೆಯನ್ನು ನನಗೆ ಕಳುಹಿಸಿಕೊಟ್ಟರು.

ಈ ವಿಷಯಕವಾದ ಗ್ರಂಥಗಳನ್ನು ಸಂಗ್ರಹಿಸುವುದರಲ್ಲಿ ಎಂ. ಬ್ಯೂರೋಯವರ ನಿರ್ಣಯಗಳ ಸತ್ಯವನ್ನು ನನ್ನಂತಹ ಸಾಮಾನ್ಯ ಮನುಷ್ಯನ ದೃಷ್ಟಿಯಿಂದ ಪರೀಕ್ಷಿಸಬೇಕೆಂಬುದೇ ನನ್ನ ಮುಖ್ಯ ಉದ್ದೇಶ್ಯವಾಗಿದ್ದಿತು. ಶಾಸ್ತ್ರಜ್ಞರು ಚರ್ಚಿಸುವ ವಿಷಯಗಳಿಗೆ ಕೂಡ ಎರಡು ಪಕ್ಷಗಳಿರುವವೆಂಬುದನ್ನೂ ಎರಡುಪಕ್ಷಗಳ ಸಮರ್ಥನೆಗೂ ಬೇಕಾದಷ್ಟು ವಾದಗಳಿರುವುದೆಂಬುದನ್ನೂ ಸಾಮಾನ್ಯವಾಗಿ ಎಲ್ಲರೂ ಬಲ್ಲರು. ಆದುದರಿಂದ ವಾಚಕರ ದೃಷ್ಟಿಯನ್ನು ಎಂ. ಬ್ಯೂರೋಯವರ ಗ್ರಂಥದಕಡೆ ತಿರುಗಿಸುವುದಕ್ಕೆ ಮೊದಲು ಗರ್ಭನಿರೋಧಕ ಸಾಮಗ್ರಿಗಳ ವಿಚಾರವನ್ನು ಸಮರ್ಥಿಸುವವರ ಅಭಿಪ್ರಾಯವನ್ನು ತಿಳಿದುಕೊಳ್ಳಲು ನಾನು ಕುತೂಹಲವುಳ್ಳವನಾಗಿದ್ದೆನು. ಅನಂತರ ಹಿಂದೂದೇಶದ ಮಟ್ಟಿಗೆ ಗರ್ಭನಿರೋಧಕ ಸಾಮಗ್ರಿಗಳ ಉಪಯೋಗಕ್ಕೆ ಆವಶ್ಯಕತೆಯೇ ಇಲ್ಲವೆಂಬೂ ನಾನು ಮನಗಂಡಿರುವೆನು. ಹಿಂದೂಸ್ಥಾನಕ್ಕೂ ಇದು ಬೇಕಾಗಿದೆಯೆಂದು ವಾದಿಸುವವರು ಇವರ ವಿಚಾರವನ್ನು ಸರಿಯಾಗಿ ತಿಳಿದಿಲ್ಲ, ಅಥವಾ ತಿಳಿದಿದ್ದರೂ (ಅದರ ದುಷ್ಪರಿಣಾಮಗಳ ವಿಚಾರವನ್ನು) ದುರ್ಲಕ್ಷಿಸಿರುವರೆಂದು ಹೇಳಬಹುದು. ಆದರೆ ಪಾಶ್ಚಾತ್ಯ ದೇಶದಲ್ಲಿ ಕೂಡ ಇದರ ಉಪಯೋಗದಿಂದ ದುಷ್ಪರಿಣಾಮವುಂಟಾದರೆ, ಹಿಂದೂಸ್ಥಾನದ ವಿಚಾರದಲ್ಲಿ ಅದರ ಆವಶ್ಯಕತೆಯನ್ನು ಕುರಿತು ಚರ್ಚಿಸುವುದೇ ಅನಾವಶ್ಯಕವಾಗಿರುವುದು.

ಆದುದರಿಂದ ಈ ವಿಚಾರದಲ್ಲಿ ಎಂ. ಬ್ಯೂರೋಯವರು ಏನು ಹೇಳಲಿರುವರೆಂಬುದನ್ನು ನೋಡುವಾ. ಅವರ ಅಧ್ಯಯನ ವಿಚಾರಗಳೆಲ್ಲವೂ ಫ್ರಾನ್ಸ್ ದೇಶಕ್ಕೆಮಾತ್ರವೇ ಸಂಬಂಧಪಟ್ಟವಾಗಿರುವವು. ಆದರೆ ಫ್ರಾನ್ಸ್ ದೇಶವೆಂದರೆ ಸಾಮಾನ್ಯವಲ್ಲ. ಅದು ಪ್ರಪಂಚದಲ್ಲೆಲ್ಲ

ವಿಶೇಷ ನಾಗರಿಕತೆಯನ್ನು ಹೊಂದಿದ ದೇಶಗಳಲ್ಲೊಂದಾಗಿದೆಯೆಂದು ಪ್ರಸಿದ್ಧವಾಗಿದೆ. ಈ ವಿಧಾನಗಳಿಗೆ ಅಲ್ಲಿಯೇ ಯಶಸ್ಸು ದೊರೆಯದಿರುವಾಗ, ಅವುಗಳು ಬೇರೆ ದೇಶದಲ್ಲಿ ಫಲಕಾರಿಯಾಗುವ ಸಂಭವವಿಲ್ಲ.

'ಫಲಕಾರಿಯಾಗಲಾರವು' ಎಂಬ ಶಬ್ದದ ಅರ್ಥದ ವಿಚಾರದಲ್ಲಿ ಅಭಿಪ್ರಾಯ ಭೇಧಗಳು ಹುಟ್ಟಬಹುದು. ಆದುದರಿಂದ ಇಲ್ಲಿ ಅದರ ವಿಚಾರದಲ್ಲಿ ನನ್ನ ಅರ್ಥವನ್ನು ಸ್ಪಷ್ಟವಾಗಿ ತಿಳಿಸಬೇಕಾಗಿದೆ. ಈ ವಿಧಾನಗಳಿಂದ ನೈತಿಕ ನಡಾವಳಿಗಳು ಸಡಿಲವಾಗಿರುವವು, ಲಂಪಟ ವೃತ್ತಿಯು ಹೆಚ್ಚಿರುವುದು; ಕೇವಲ ಆರೋಗ್ಯ ಮತ್ತು ಆರ್ಥಿಕದೃಷ್ಟಿಯಿಂದ ಸಂಸಾರಗಳ ಬೆಳವಣಿಗೆಯನ್ನು ನಿಲ್ಲಿಸುವುದಕ್ಕೆ ಬದಲಾಗಿ ಈ ಸಾಧನೆಗಳನ್ನು ಸ್ತ್ರೀ ಪುರುಷರು ಕೇವಲ ತಮ್ಮ ಕಾಮ ಪ್ರವೃತ್ತಿಗಳನ್ನು ಹೆಚ್ಚಿಸುವುದಕ್ಕಾಗಿ ಉಪಯೋಗಿಸುತ್ತಿರುವರು-ಎಂಬಿವುಗಳನ್ನು ಸಿದ್ಧಾಂತಗೊಳಿಸುವುದರಿಂದ ಈ ವಿಧಾನಗಳು ಫಲಕಾರಿಯಾಗಿಲ್ಲವೆಂದು ಹೇಳಬಹುದು. ಇದು ಮಿತವಾದಿಗಳ ಅಭಿಪ್ರಾಯವಾಯಿತು. ಕೇವಲ ದೇಹರಕ್ಷಣೆಗಾಗಿ ಮಾತ್ರ ಸ್ತ್ರೀಪುರುಷರು ಆಹಾರವನ್ನು ತೆಗೆದುಕೊಳ್ಳುವುದು ಅತ್ಯಾವಶ್ಯಕವಾಗಿರುವಂತೆ, ಕೇವಲ ಸಂತಾನ ಪ್ರಾಪ್ತಿಗೆ ಹೊರ್ತು ಇತರ ಸಂದರ್ಭಗಳಲ್ಲಿ ಸ್ತ್ರೀಪುರುಷರು ಇಂದ್ರಿಯ ತೃಪ್ತಿಯನ್ನು ಹೊಂದಲಪೇಕ್ಷಿಸುವ ಆವಶ್ಯಕತೆಯೆ ಇಲ್ಲದಿರುವುದರಿಂದ ಎಂತಹ ಸಂದರ್ಭದಲ್ಲಿಯಾದರೂ ಗರ್ಭನಿರೋಧಕ ಸಾಮಗ್ರಿಗಳನ್ನು ಉಪಯೋಗಿಸುವುದನ್ನು ನಿಷೇಧಿಸಬೇಕೆಂಬುದು ನೈತಿಕ ವೀರರ ಮತ. ಇವೆರಡಲ್ಲದೆ ಮೂರನೆಯ ಅಭಿಪ್ರಾಯವೊಂದಿರುವುದು. ಆ ಅಭಿಪ್ರಾಯದವರು ಹೇಳುವುದೇನೆಂದರೆ-"ನೀತಿಯೆಂಬ ವಸ್ತುವಾವುದೂ ಇಲ್ಲ, ಅಥವಾ ಇದ್ದರೂ ಕೇವಲ ಇಂದ್ರಿಯ ನಿಗ್ರಹವನ್ನು ಮಾಡದೆ, ಯಾವ ವಿಷಯಸಾಧನೆಗಾಗಿ ಇಂದ್ರಿಯಗಳು ಸೃಷ್ಟಿಸಲ್ಪಟ್ಟವೆಯೋ ಆ ವಿಷಯಗಳನ್ನು ತೃಪ್ತಿಗೊಳಿಸಬೇಕು. ಆದರೆ ಹಾಗೆ ತೃಪ್ತಿಗೊಳಿಸುವಾಗ, ಆ ಇಂದ್ರಿಯಗಳು ಪುನಃ ಭೋಗೋಪಯುಕ್ತವಾಗಿರುವಂತೆ ಉಪಯೋಗಿಸುವುದರಲ್ಲಿ ಜಾಗರೂಕತೆಯನ್ನು ವಹಿಸಿರುವುದೇ ನೀತಿ."

ಈ ಅಮಿತ ಶೀಲರಿಗಾಗಿ ಎಂ. ಬ್ಯೂರೋಯವರು ತಮ್ಮ ಪುಸ್ತಕ ವನ್ನು ಬರೆದಿಲ್ಲವೆಂದು ನನ್ನ ಭಾವನೆ. ಏಕೆಂದರೆ ಅವರು ತಮ್ಮ ಗ್ರಂಥದ ಕೊನೆಯಲ್ಲಿ "ಯಾವ ಜನಾಂಗಗಳು ಪವಿತ್ರವಾಗಿರುವವೋ ಆ ಜನಾಂಗಗಳಿಗೆ ಭವಿಷ್ಯವು ಸೇರಿದುದಾಗಿರುವುದು'' ಎಂಬ ಟಾಮ್ ವ್ಯಾನ್ ಎಂಬವರ ವಾಕ್ಯವನ್ನು ಬರೆದಿರುವರು.

ಮಿ॥ ಬ್ಯೂರೊ ಅವರು ತಮ್ಮ ಪುಸ್ತಕದ ಮೊದಲನೆಯ ಭಾಗ ದಲ್ಲಿ ಹಲವು ಸಂಗತಿಗಳನ್ನು ಸಂಗ್ರಹಿಸಿರುವರು. ಅವು ಓದುವುದಕ್ಕೆ ಭಯಂಕರವಾಗಿರುವವು. ಅದರಿಂದ ಕೇವಲ ಮಾನವನ ನೀಚವಾಸನೆ ಗಳ ತೃಪ್ತಿಗಾಗಿ ಫ್ರಾನ್ಸ್ ದೇಶದಲ್ಲಿ ಎಂತೆಂತಹ ದೊಡ್ಡ ಸಂಸ್ಥೆ ಗಳು ಸ್ಥಾಪಿಸಲ್ಪಟ್ಟಿರುವುವೆಂದು ತಿಳಿದುಬರುವುದು. ಈ ಗರ್ಭನಿರೋ ಧನೆಗಳಿಂದ ಗರ್ಭಪಾತವು ಕಡಿಮೆಯಾಗುವುದೆಂಬ ಗರ್ಭನಿರೋಧ ವಾದಿಗಳ ಮತವೂ ಆಧಾರವಿಲ್ಲದುದಾಗಿರುವುದು. "ಕಳೆದ ೨೫ ವರು ಷಗಳಿಂದ ಫ್ರಾನ್ಸ್‌ದೇಶದಲ್ಲಿ ಗರ್ಭನಿರೋಧಕ ಚಳವಳವು ಹಬ್ಬುತ್ತಿ ದ್ದರೂ, ಕಾನೂನಿಗೆ ವಿರೋಧವಾದ ಗರ್ಭಪಾತಗಳ ಸಂಖ್ಯೆಯು ಹೆಚ್ಚುತ್ತಿರುವುದೆಂದೇ ಅವರ ಅಭಿಪ್ರಾಯವಾಗಿದೆ. ಅವರ ಹೇಳಿಕೆಯ ಪ್ರಕಾರ ಆ ದೇಶದಲ್ಲಿ ವರುಷವೊಂದಕ್ಕೆ ೨,೭೫,೦೦೦ ದಿಂದ ೩,೨೫,೦೦೦ ವರೆಗೆ ಗರ್ಭಪಾತಗಳಾಗುತ್ತಿರುವವೆಂದು ತಿಳಿದು ಬರು ವುದು. ಮುಂಚೆ ಜನರಿಗೆ ಈ ಸಂಖ್ಯೆಯು ಭಯಂಕರವಾಗಿ ತೋರು ತ್ತಿತ್ತು, ಈಗ ಹಾಗೆ ತೋರುತ್ತಿಲ್ಲ!

(೨)

"ಗರ್ಭಪಾತದೊಂದಿಗೆ ಶಿಶುಹತ್ಯೆ, ವೇಶ್ಯಾವೃತ್ತಿ ಮತ್ತು ಪ್ರಕೃ ತಿವಿರುದ್ಧವಾದ ಅತ್ಯಾಚಾರಗಳು ಇಲ್ಲಿ ಹೆಚ್ಚುತ್ತಿರುವವು. ಮೊದಲಿನ ವಿಷಯವಾಗಿ ಹೆಚ್ಚು ಹೇಳಬೇಕಾದ್ದೇನೂ ಇಲ್ಲ. ಗರ್ಭನಿರೋಧಕ ಅತ್ಯಾಚಾರಗಳೂ ಗರ್ಭಪಾತಗಳೂ ಹೆಚ್ಚುತ್ತಿದ್ದರೂ, ಅವಿವಾಹಿತ ರಾದ ಗರ್ಭಿಣಿಯರಿಗೆ ಬೇಕಾದ ಅನುಕೂಲತೆಗಳನ್ನು ಒದಗಿಸಿ ಕೊಡು ತ್ತಿದ್ದರೂ ಶಿಶುಹತ್ಯಾಚಾರವು ಹೆಚ್ಚುತ್ತಿರುವುದು. ಈಗ 'ಗೌರವಾರ್ಹ'

ರೆಂದು ಹೇಳಿಸಿಕೊಳ್ಳುವ ಜನರುಕೂಡ ಈ ಕೃತ್ಯವನ್ನು ನಿಂದ್ಯವೆಂದು ತಿಳಿಯುತ್ತಿಲ್ಲ. ಹಲವು ನ್ಯಾಯಸ್ಥಾನಗಳ ಪಂಚಾಯತರು ಈ ಬಗೆಯ ಅಪರಾಧಿಯು 'ದೋಷಿಯಲ್ಲ'ವೆಂಬ ತೀರ್ಮಾನವನ್ನೇ ಹೇಳುವರು'' ಎಂದು ಮಿ. ಬ್ಯೂರೋ ಅವರು ಹೇಳುವರು.

ಮಿ. ಬ್ಯೂರೊ ಅವರು ಲಂಪಟವೃತ್ತಿಯನ್ನು ಹೆಚ್ಚಿಸುವ ಗ್ರಂಥಗಳು ಹೇಗೆ ದಿನದಿನಕ್ಕೂ ಹೆಚ್ಚುತ್ತಿರುವುವೆಂಬುದರ ವಿಚಾರಕ್ಕೆ ಒಂದು ಸಮಗ್ರಪ್ರಕರಣವನ್ನೆ ಬರೆದಿರುವರು. ಆದರಲ್ಲಿ ಅವರು ಈ ರೀತಿಯಾಗಿ ಬರೆದಿರುವರು.—"ಇದೊಂದು ಬಗೆಯಿಂದ ಜನರನ್ನು ಲೂಟಿಮಾಡುವುದಾಗಿರುವುದು. ಅದಕ್ಕಾಗಿ ಜನರ ಮನಸ್ಸಿಗೆ ಸುಖಪ್ರದವೂ ವಿಶ್ರಾಂತಿದಾಯಕವೂ ಆದ ಸಾಹಿತ್ಯವೆಂಬ ಹೆಸರಿನಿಂದ ವಿಷಯಾಸಕ್ತಿಯನ್ನು ಉದ್ವೇಗಗೊಳಿಸುವ ಒಂದು ಉದ್ದೇಶದಿಂದ ಬರೆದಿರುವ ಅನೇಕ ನಾಟಕಗಳೂ ಚಿತ್ರಗಳೂ ವಿಕ್ರಯವಾಗುತ್ತಿರುವವು. ಈ ವ್ಯಾಪಾರವು ಚೆನ್ನಾಗಿ ಆಗುತ್ತಿದೆ. ಇದರ ಸಂಸ್ಥೆಗಳು ಬಹು ಸುವ್ಯವಸ್ಥಿತವಾಗಿ, ವಿಶೇಷ ಬಂಡವಾಳದ ಆಧಾರದಿಂದ ಸ್ಥಾಪಿಸಲ್ಪಟ್ಟಿವೆ. ಇದರಿಂದ ಜನರ ಮನಸ್ಸಿನಮೇಲೆ ಒಂದುಬಗೆಯ ಬಲವಾದ ಪರಿಣಾಮವುಂಟಾಗಿರುವುದು. ಅದರಿಂದ ಅವರ ಮಾನಸಿಕ ಜೀವನಕ್ರಮವೇ ಅವ್ಯವಸ್ಥಿತವಾಗಿರುವುದು. ಮತ್ತೆ ಒಂದು ಬಗೆಯ, ಕೇವಲ ಭ್ರಮಾಪೂರ್ಣವಾದ, ನೈಸರ್ಗಿಕವಲ್ಲದ, ವಿಷಯಮಗ್ನವಾದ, ಜೀವನಕ್ರಮವು ಸೃಷ್ಟಿಸಲ್ಪಟ್ಟಿರುವುದು.''

ಕೊನೆಗೆ ಮಿ. ಬ್ಯೂರೋ ಅವರು ವಿಶೇಷ ವಿಷಾದದಿಂದ ಎಮ್ ರೂಲ್‌ಸ್ಸನ್ ಎಂಬವರ ಲೇಖನದಿಂದ ಮುಂದಿನ ಭಾಗವನ್ನು ಉದ್ಧರಿಸಿರುವರು.

"ಮನಶ್ಶಾಸ್ತ್ರದ ನಿಯಮಾನುಸಾರವಾಗಿ ಈ ಬಗೆಯ ವಿಷಯೋದ್ರೇಕವನ್ನುಂಟುಮಾಡುವ ಅವಾಚ್ಯಗ್ರಂಥಗಳು·ಬಹುಜನ ವಾಚಕರನ್ನು ವಶೀಕರಿಸಿಕೊಳ್ಳುವವು. ಈ ಬಗೆಯ ಗ್ರಂಥಗಳ ಸಂಖ್ಯೆಯು ದಿನದಿನಕ್ಕೂ ಬೆಳೆಯುತ್ತಿರುವುದನ್ನು ನೋಡಿದರೆ, ಹುಚ್ಚರ ಆಸ್ಪತ್ರೆ

ಯಲ್ಲಿ ಮಾತ್ರವಲ್ಲದೆ, ಹೊರಗಣ ಪ್ರಪ್ರಂಚದಲ್ಲಿ ಕೂಡ ಕೇವಲ ನಿಸರ್ಗವಿರುದ್ಧವಾದ ವಿಷಯಮಗ್ನತೆಯನ್ನು ಮಾನಸಿಕ ಪ್ರಪಂಚದಲ್ಲಿ ಭೋಗಿಸುತ್ತಿರುವ ಜನರನೇಕರಿರುವರೆಂದು ತಿಳಿದುಬರುವುದು. ಅದರಲ್ಲಿಯೂ ಈಗಿನ ಕಾಲದಲ್ಲಿ ಎಂದರೆ ವರ್ತಮಾನ ಪತ್ರಿಕೆಗಳ ಮತ್ತು ಗ್ರಂಥಗಳ ನಿಂದ್ಯ ವೃತ್ತಿಯಿಂದ ಪ್ರತಿಯೊಬ್ಬ ಮಾನವನ ಸುತ್ತಲೂ ಡಬ್ಲ್ಯೂ. ಜೇಮ್ಸ್ ಎಂಬಾತನು ಹೇಳುವ 'ಅಂಧಕಾರಮಯವಾದ ದ್ವಿವಿಧ ಜೀವನ ಪ್ರಪಂಚವು ಸೃಷ್ಟಿಸಲ್ಪಡುತ್ತಿರುವುದು. ಪ್ರತಿಯೊಬ್ಬ ಮಾನವನು ಅದರಲ್ಲಿಯೆ ಮಗ್ನನಾಗಿ, ತನ್ನ ನಾಶವನ್ನು ಮಾಡಿಕೊಳ್ಳುತ್ತಿರುವುದಲ್ಲದೆ, ತನ್ನೊಂದಿಗೆ ವರ್ತಮಾನ ಕಾಲದ ಕರ್ತವ್ಯಗಳನ್ನು ಕೂಡ ಮರೆಯುತ್ತಲಿರುವನು."

ಕಾಮಭೋಗವು ಮಾನವ ಜಾತಿಗೆ ಅತ್ಯಾವಶ್ಯಕವಾಗಿದೆ. ಮತ್ತು ಆ ಭೋಗವಿಲ್ಲದೆ ಯಾವ ಸ್ತ್ರೀಯಾಗಲಿ ಪುರುಷನಾಗಲಿ ಪೂರ್ಣತ್ವವನ್ನು ಹೊಂದಲಾಗುವುದಿಲ್ಲವೆಂಬ ತಪ್ಪು ಅಭಿಪ್ರಾಯವೇ ಈ ವಿನಾಶಕ ಪರಿಣಾಮಗಳ ಮೂಲಕಾರಣವೆಂಬುದನ್ನು ಮರೆಯಲಾಗದು. ಈ ಅಭಿಪ್ರಾಯವು ಒಬ್ಬ ವ್ಯಕ್ತಿಯಲ್ಲಿ ತಲೆದೋರಿ, ಒಂದಾನೊಂದು ಕಾಲದಲ್ಲಿ ದುಶ್ಶೀಲವೆನಿಸಿದುದೇ ಈಗ ಸದ್ಗುಣವೆನಿಸುವುದೆಂಬ ಭಾವನೆಯು ನೆಲೆಸಿದರೆ ಇಂದ್ರಿಯಗಳನ್ನು ಉದ್ರೇಕಗೊಳಿಸಿ ಮಾನವನನ್ನು ವಿಷಯಾಸಕ್ತನನ್ನಾಗಿ ಮಾಡುವ ಸಾಮಗ್ರಿಗಳು ಮಿತಿಮೀರಿ ಬೆಳೆಯಲಾರಂಭಿಸುವವು. ಅನಂತರ ಮಿ. ಬ್ಯೂರೋ ಅವರು ನಿತ್ಯಪತ್ರಿಕೆಗಳು, ಮಾಸಪತ್ರಿಕೆಗಳು, ಕಾದಂಬರಿಗಳು, ಭಾವಚಿತ್ರಗಳು ಮತ್ತು ನಾಟಕ ಮಂದಿರಗಳು ಹೇಗೆ ಮಾನವನಲ್ಲಿ ಹೇಯವಾದ ವೃತ್ತಿಯನ್ನು ಉದ್ವೇಗಗೊಳಿಸುವವೆಂಬುದನ್ನೂ ಆಧಾರ ಸಹಿತವಾಗಿ ತೋರಿಸಿರುವರು

ಆದರೆ ಇದುವರೆಗೆ ಹೇಳಿದುದು ಅವಿವಾಹಿತರ ವಿಚಾರವಾಯಿತು. ವಿವಾಹಿತ ಸ್ಥಿತಿಯಲ್ಲಿ ಕೂಡ ನೀತಿಯ ಶಿಸ್ತು ಹೇಗೆ ಉಲ್ಲಂಘಿಸಲ್ಪಟ್ಟಿದೆಯೆಂದು ಮಿ. ಬ್ಯೂರೋ ಅವರು ಮುಂದೆ ಉಲ್ಲೇಖಿಸಿರುವರು. ಅವರು ಬರೆದಿರುವುದೇನಂದರೆ—"ಕುಲೀನ ಪ್ರಭುತ್ವ ವರ್ಗ

ದವರಲ್ಲಿಯೂ ರೈತಾಪಿ ಜನರಲ್ಲಿಯೂ ಆಗುವ ಅನೇಕ ವಿವಾಹಗಳಿಗೆ ದುರಹಂಕಾರವೂ ಹಣದಾಸೆಯೂ ಕಾರಣವಾಗುತ್ತಿವೆ. ಯಾವುದಾದರೊಂದು ಮುಂಚಿನ ಸಂಬಂಧವನ್ನಾಗಲಿ, ಸಂತಾನದ ಔರಸತ್ವವನ್ನು ಕಾಪಾಡುವುದಕ್ಕಾಗಲಿ, ಎರಡು ಆಸ್ತಿಗಳನ್ನು, ಅದರಲ್ಲಿಯೂ ಮುಖ್ಯವಾಗಿ ಎರಡು ಭೂಮಿಯ ಆಸ್ತಿಯನ್ನು ಒಟ್ಟುಗೂಡಿಸುವುದಕ್ಕಾಗಲಿ, ಒಂದು ಲಾಭದಾಯಕವಾದ ಉದ್ಯೋಗವನ್ನು ದೊರಕಿಸಿಕೊಳ್ಳುವುದಕ್ಕಾಗಲಿ ಜನರು ವಿವಾಹಮಾಡಿಕೊಳ್ಳುವರು. ಅಷ್ಟುಮಾತ್ರವಲ್ಲದೆ, ವೃದ್ಧಾವಸ್ಥೆಯ ರುಗ್ಣಶಯ್ಯೆಯಲ್ಲಿ ಆದರೋಪಚಾರಗಳನ್ನು ಹೊಂದಲನುಕೂಲವಿರಬೇಕೆಂಬ ಉದ್ದೇಶದಿಂದಲೂ, ತನ್ನ ಮೃತ್ಯುಶಯ್ಯೆಯ ಸ್ಥಳವನ್ನು ನಿರ್ಣಯಿಸುವುದಕ್ಕಾಗಿಯೂ ಇದುವರೆಗೆ ಆಚರಿಸಿದ್ದ ವ್ಯಭಿಚಾರಮಯ ಜೀವನದಿಂದ ಬೇಸರವಾಗಿ, ತಮ್ಮ ಜೀವನಭೋಗದ ಸ್ವರೂಪವನ್ನು ಬದಲಾಯಿಸಬೇಕೆಂಬ ಲವಲವಿಕೆಯಿಂದಲೂ ಜನರು ವಿವಾಹಿತರಾಗುತ್ತಿರುವರು.''

ಕೊನೆಗೆ ಈ ಬಗೆಯ ಮದುವೆಗಳು ಲಂಪಟವೃತ್ತಿಯನ್ನು ಕುಗ್ಗಿಸುವುದರ ಬದಲಾಗಿ ಅದನ್ನು ಹೇಗೆ ಹೆಚ್ಚಿಸುತ್ತಿರುವವೆಂಬ ವಿಚಾರವನ್ನು ತೋರಲು ಬೇಕಾದಷ್ಟು ಸಂಗತಿಗಳನ್ನೂ ಸಂಖ್ಯೆಯನ್ನೂ ಮಿ. ಬ್ಯೂರೋ ಅವರು ಸಂಗ್ರಹಿಸಿರುವರು. ಇಂದ್ರಿಯ ಭೋಗಕಾರ್ಯವನ್ನು ನಿರೋಧಿಸದೇ, ಆ ಕಾರ್ಯದ ಪರಿಣಾಮವನ್ನು ನಿರೋಧಿಸುವುದಕ್ಕಾಗಿ ಸೃಷ್ಟಿಸಲ್ಪಡುತ್ತಿರುವ ಶಾಸ್ತ್ರೀಯ ಅಥವಾ ಯಾಂತ್ರಿಕ ಸಾಧನೆಗಳು ಈ ಹೇಯವೃತ್ತಿಯನ್ನು ಹೆಚ್ಚಿಸುತ್ತಲಿರುವವು. ಕಳೆದ ಇಪ್ಪತ್ತು ವರ್ಷಗಳಲ್ಲಿ ಅದರಿಂದ ಫ್ರಾನ್ಸ್ ದೇಶದಲ್ಲಿ ವ್ಯಭಿಚಾರವೃತ್ತಿಯೂ, ದಾಂಪತ್ಯವಿಚ್ಛೇದನಗಳೂ ಕಾನೂನಿನ ಪ್ರಕಾರವಾಗಿ ನಡೆದ ವಿವಾಹ ವಿಚ್ಛೇದನಗಳೂ ಮೊದಲಿಗಿಂತ ಎರಡರಷ್ಟು ಹೆಚ್ಚಿರುವವೆಂಬ ವಿಷಾದವನ್ನೂ ಭಯವನ್ನೂ ಉಂಟುಮಾಡುವ ಸಂಗತಿಗಳನ್ನೂ ಸಂಖ್ಯೆಯನ್ನೂ ನಾನು ಇಲ್ಲಿ ಉದಾಹರಿಸಲಾರೆನು. "ಸ್ತ್ರೀಪುರುಷರಿಬ್ಬರಿಗೂ ಏಕಪ್ರಕಾರವಾದ ನೈತಿಕ ನಿಯಮವಿರಬೇಕೆಂಬ'' ತತ್ತ

ವನ್ನನುಸರಿಸಿ, ವಿಷಯ ಭೋಗ ವಿಚಾರದಲ್ಲಿ ಆ ದೇಶದ ಸ್ತ್ರೀಯರಿಗೆ
ಕೊಡಲ್ಪಟ್ಟಿರುವ ಅಳವಿಲ್ಲದ ಸ್ವಾತಂತ್ರ್ಯದ ಸಂಬಂಧವಾಗಿ ಒಂದೆರಡು
ಮಾತುಗಳನ್ನು ನಾನು ಹೇಳದಿರಲಾರೆನು. ಗರ್ಭನಿರೋಧಕ ಸಾಧನ
ಗಳ ಪೂರ್ಣತ್ವದಿಂದಲೂ, ಗರ್ಭಪಾತವನ್ನುಂಟುಮಾಡುವ ವಿಧಾನಗ
ಳಿಂದಲೂ ಸ್ತ್ರೀ ಪುರುಷರಿಬ್ಬರೂ ನೈತಿಕ ಮಾರ್ಗದಿಂದ ದೂರಾಗುತ್ತಿ
ರುವರು. ಇಂತಹ ಪರಿಸ್ಥಿತಿಯಲ್ಲಿ ಮದುವೆಯೆಂದರೆ ಅವರು ನಗುವು
ದರಲ್ಲಿ ಆಶ್ಚರ್ಯವೇನೂ ಇಲ್ಲ. ಆ ದೇಶದ ಜನರ ಮನಸ್ಸಿನಮೇಲೆ
ಪ್ರಭುತ್ವವನ್ನು ನಡೆಯಿಸುತ್ತಿರುವ ಪ್ರಸಿದ್ಧ ಗ್ರಂಥಕಾರರ ವಾಕ್ಯಗ
ಗಳನ್ನು ಮಿ. ಬ್ಯೂರೊ ಅವರು ಹೀಗೆ ಉದಹರಿಸಿರುವರು.—"ನನ್ನ
ಅಭಿಪ್ರಾಯದಲ್ಲಿ ಈ ವಿವಾಹಪದ್ಧತಿಯು ಊಹನಾತೀತವಾದ ಕ್ರೂರ
ಪದ್ಧತಿಗಳಲ್ಲೊಂದಾಗಿದೆ. ನ್ಯಾಯ ಮತ್ತು ವಿವೇಕ ಮಾರ್ಗದಲ್ಲಿ
ಮಾನವ ಜಾತಿಯು ಮುಂದುವರಿದಂತೆ ಈ ಪದ್ಧತಿಯು ನಾಶವಾಗು
ವುದೆಂದು ನಾನು ದೃಢವಾಗಿ ನಂಬಿರುವೆನು........ಆದರೆ ತಮ್ಮನ್ನು
ಅಂಕೆಯಲ್ಲಿಟ್ಟುಕೊಂಡಿರುವ ಆಚಾರಕ್ಕಿಂತಲೂ ಘನತರವಾದ ಕಾನೂ
ನನ್ನು ಮಾಡಿಕೊಳ್ಳಲು ಪುರುಷರು ಸ್ಥೂಲ ಬುದ್ಧಿಯಿಂದಲೂ ಸ್ತ್ರೀಯ
ರು ಭೀತಿಯಿಂದಲೂ ಅಶಕ್ತರಾಗಿರುವರು."

ಮೇಲೆ ಹೇಳಿರುವ ಆಚಾರಗಳ ಪರಿಣಾಮಗಳನ್ನೂ ಆ ಆಚಾರ
ಗಳನ್ನು ಸಮರ್ಥಿಸುವ ಸಿದ್ಧಾಂತಗಳನ್ನೂ ಮಿ. ಬ್ಯೂರೊ ಅವರು
ಚೆನ್ನಾಗಿ ಪರೀಕ್ಷಿಸಿ ನೋಡಿ ಕೊನೆಗೆ ನಿರಾಸೆಯಿಂದ ಹೀಗೆ ಬರೆದಿರು
ವರು. "ನೀತಿಯ ಕಟ್ಟುಬೆಟ್ಟುಗಳಿಲ್ಲದ ಈ ಚಳವಳವು ನಮ್ಮನ್ನು
ಹೊಸ ಮಾರ್ಗಗಳಲ್ಲಿ ಕೊಂಡೊಯ್ಯುತ್ತಿರುವುದು. ಆ ಮಾರ್ಗಗಳಾ
ವವು? ನಮಗೆ ಕಾಣಲಿರುವ ಮಾರ್ಗವು ಪುರೋವೃದ್ಧಿ ಮತ್ತು ಪ್ರಕಾ
ಶವನ್ನೂ ಸೌಂದರ್ಯ ಮತ್ತು ನೆಲೆಯಾದ ಆತ್ಮ ಭಾವತ್ವವನ್ನೂ
ತೋರುವುದಾಗಿದೆಯೊ? ಅಥವಾ ಅಮ ಪುರೋವೃದ್ಧಿ ಮಾರ್ಗದಿಂದ
ಹಿಮ್ಮೆಟ್ಟುವಿಕೆಯನ್ನೂ ಅಂಧಕಾರವನ್ನೂ, ಕುರೂಪವನ್ನೂ, ದಿನದಿ
ನಕ್ಕೆ ಹೆಚ್ಚುತ್ತಿರುವ ಪಾಶವಿಕ ವೃತ್ತಿಯನ್ನೂ ತೋರುವುದೋ? ಈಗ

ಸ್ಥಾಪಿತವಾಗಿರುವ ಸ್ವೈರ ಪ್ರವೃತ್ತಿಯು ಮುಂದಣ ಪೀಳಿಗೆಯು ತನ್ನ ಪುರೋವೃದ್ಧಿ ಮತ್ತು ಉನ್ನತಿಯದೆಸೆಗೆ ಅತ್ಯಾವಶ್ಯಕವಾಗಿದ್ದ ಜೀವನ ಸೋಪಾನವೆಂದು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತ ಪ್ರಾಚೀನ ಕಾಲದ ವಿಧಿನಿಯಮ ವಿರುದ್ಧವಾಗಿ ಹೂಡಿದ ದಂಗೆಯೆಂದೂ ಅದರಿಂದ ಲಾಭವುಂಟಾಗುವುದೆಂದೂ ನಾವು ಭಾವಿಸಬೇಕೇನು? ಅಥವಾ ಆ ಕಾಮವೃತ್ತಿಯ ವೇಗವನ್ನು ನಾವು ತಡೆಯಬೇಕಾದರೆ ಆ ನಿಯಮಗಳ ಉಗ್ರಾಚರಣೆಯು ಅತ್ಯಾವಶ್ಯಕವೆಂಬುದನ್ನು ಕಂಡು, ನಮ್ಮಲ್ಲಿ ಬಹುಕಾಲದಿಂದಲೂ ಅಡಗಿರುವ ಮದನನು ಈಗ ದಂಗೆಯೆದ್ದಿರುವನೆಂದು ತಿಳಿಯಬೇಕೊ?'' ಅನಂತರ ಮಿ. ಬ್ಯೂರೊ ಅವರು ಇದುವರೆಗೆ ಎಲ್ಲ ವಿಚಾರಗಳಲ್ಲಿಯೂ ಪರಿಣಾಮವು ಮಾತ್ರವಿನಾಶಕರವಾಗಿದೆಯೆಂದು ತೋರಲು ಬಹು ಪಕ್ಷದ ಅಭಿಪ್ರಾಯಗಳನ್ನು ಉದಾಹರಿಸಿರುವರು. ಅವುಗಳನ್ನು ನೋಡಿದರೆ ಜೀವನದ ಮೂಲವೇ ನಾಶವಾಗುವಂತಿದೆ.

**(೩)**

ವಿವಾಹಿತರು ತಮ್ಮಿಂದ ಸಾಧ್ಯವಾದಮಟ್ಟಿಗೆ ನೈತಿಕ ಸಂಯಮದಿಂದ ತಮ್ಮ ಸಂತಾನ ಸಂಖ್ಯೆಯನ್ನು ಮಿತವಾಗಿರಿಸಲೆತ್ನಿಸುವುದು ಒಂದು ವಿಚಾರವಾಯಿತು. ಅದಿಲ್ಲದೆ ತಮಗೆ ಬೇಕು ಬೇಕಾದಂತೆಲ್ಲ ಇಂದ್ರಿಯ ಸುಖವನ್ನನುಭವಿಸುತ್ತ, ಅದರಿಂದುಂಟಾಗುವ ಪರಿಣಾಮವನ್ನು ಮಾತ್ರ ನಿರೋಧಿಸಲು ಕೃತ್ರಿಮ ಸಾಧನಗಳನ್ನು ಸೃಷ್ಟಿಸಿಕೊಳ್ಳುವುದು ಮತ್ತೊಂದು ವಿಚಾರ. ಮೊದಲನೆಯ ವಿಚಾರದಲ್ಲಿ ಜನರಿಗೆ ಎಲ್ಲ ಬಗೆಯಿಂದಲೂ ಲಾಭವಾಗುವುದು. ಎರಡನೆಯ ವಿಚಾರದಿಂದ ಕೆಡಕಾಗುವುದೇ ವಿನಾ ಲಾಭವಿಲ್ಲ. ಕಾಮಪ್ರವೃತ್ತಿಯನ್ನು ನಿರೋಧಿಸದೆ ಅದರಿಂದುಂಟಾಗುವ ನೈಸರ್ಗಿಕ ಪರಿಣಾಮವನ್ನು ಮಾತ್ರ ನಿರೋಧಿಸುವ ಉದ್ದೇಶದಿಂದ ಉಪಯೋಗಿಸುತ್ತಿರುವ ಗರ್ಭನಿರೋಧಕ ಸಾಮಗ್ರಿಗಳು ಹೇಗೆ ಹೆಚ್ಚುತ್ತಿರುವವೆಂದೂ, ಅದರಿಂದ ಪ್ಯಾರಿಸ್‌ನಗರದಲ್ಲಿ ಮಾತ್ರವಲ್ಲದೆ ಸಮಗ್ರ ಫ್ರಾನ್ಸ್ ದೇಶದಲ್ಲಿ ಮರಣ

ಸಂಖ್ಯೆಗಿಂತಲೂ ಜನನ ಸಂಖ್ಯೆಯು ಹೇಗೆ ತಗ್ಗುತ್ತಿರುವುದೆಂದೂ ತೋರಿಸುವುದಕ್ಕಾಗಿ ಸಂಖ್ಯೆಗಳನ್ನೂ ನಕ್ಷೆಗಳನ್ನೂ ಪ್ರಕಟಿಸಿರುವರು. ಫ್ರಾನ್ಸ್ ದೇಶವು ೮೭ ಜಿಲ್ಲೆಗಳಾಗಿ ವಿಭಾಗಿಸಲ್ಪಟ್ಟಿದೆ. ಅವುಗಳಲ್ಲಿ ೬೮ ಭಾಗಗಳಲ್ಲಿ ಜನನ ಸಂಖ್ಯೆಯು ಮರಣಸಂಖ್ಯೆಗಿಂತ ಕಡಿಮೆಯಾಗಿರುವುದು. ಒಂದು ಭಾಗದಲ್ಲಿ ಎಂದರೆ ಲೋತ್ ಎಂಬ ಭಾಗದಲ್ಲಿ ಮರಣ ಸಂಖ್ಯೆಯು ೧೬೨, ಜನನ ಸಂಖ್ಯೆಯು ೧೦೦ ಇದ್ದುವು. ಅನಂತರ ತಾರ್ನ್-ಎತ್-ಜರೋನಾ ಎಂಬಲ್ಲಿ ೧೫೬ ಮರಣಗಳೂ ೧೦೦ ಜನನಗಳೂ ಆಗಿರುವವು. ಜನನ ಸಂಖ್ಯೆಯು ಹೆಚ್ಚಾಗಿಯೂ ಮರಣಸಂಖ್ಯೆಯು ಕಡಿಮೆಯಾಗಿಯೂ ಇರುವ ಉಳಿದ ೧೯ ಜಿಲ್ಲೆಗಳಲ್ಲಿ ಕೂಡ ಜನನ ಮರಣ ಸಂಖ್ಯೆಗಳಲ್ಲಿ ಅಂತರವು ಅಷ್ಟು ಪ್ರಶಂಸನೀಯವಾಗಿಲ್ಲ. ಕೇವಲ ೧೦ ಭಾಗಗಳಲ್ಲಿ ಮಾತ್ರ ಅವುಗಳ ಅಂತರವು ಗಣನೀಯವಾಗಿರುವದು. ಕೇವಲ ಮೊರ್ಬ್ಹಾನ್ ಮತ್ತು ಪಾಸ್-ಡಿ-ಕೆಲ್ಯಾ ಎಂಬಲ್ಲಿ ಮರಣಸಂಖ್ಯೆಯು ಕಡಿಮೆ ಎಂದರೆ ೧೦೦ ಜನನಗಳಿಗೆ ೭೭ ಮರಣಗಳಾಗುವವು. ಈ "ಆತ್ಮ ಹತ್ಯೆ" ಎನಿಸಿಕೊಳ್ಳುವ ಪ್ರಜಾಜನ ವಿನಾಶಕ ವ್ಯವಹಾರವನ್ನು ಇನ್ನೂ ತಡೆಗಟ್ಟಲಾಗಲಿಲ್ಲವೆಂದು ಮಿ. ಬ್ಯೂರೊ ಅವರು ಉದಾಹರಣೆಗಳಿಂದ ತೋರಿಸಿರುವರು.

ಅನಂತರ ಮಿ. ಬ್ಯೂರೋ ಅವರು ಫ್ರೆಂಚ್ ಪ್ರಾಂತ್ಯಗಳ ವಿವಿಧ ಭಾಗಗಳ ಸ್ಥಿತಿಗತಿಗಳನ್ನು ಸವಿಸ್ತಾರವಾಗಿ ವಿಮರ್ಶಿಸಿ, ನಾರ್ಮಂಡಿ ಎಂಬ ಪ್ರಾಂತ್ಯದ ವಿಚಾರದಲ್ಲಿ ಎಂ. ಜೀಡ್ ಎಂಬಾತನ ಲೇಖನದಿಂದ ವಾಕ್ಯಗಳನ್ನು ಉದಹರಿಸಿರುವರು.— "೫೦ ವರ್ಷಗಳ ಕಾಲದಲ್ಲಿ ನಾರ್ಮಂಡಿಯು ೩,೦೦,೦೦೦ ಪ್ರಜೆಗಳನ್ನು ಕಳೆದುಕೊಂಡಿರುವದು. ಎಂದರೆ ಸಮಗ್ರ ಓರ್ನ್ ಖಾತೆಯಲ್ಲಿರುವಷ್ಟು ಜನರನ್ನು ಕಳೆದುಕೊಂಡಿರುವದು. ಪ್ರತಿ ೨೦ ವರ್ಷಗಳಲ್ಲಿ ಅದು ಒಂದೊಂದು ಖಾತೆಯಷ್ಟು ಜನರನ್ನು ಕಳೆದುಕೊಳ್ಳುತ್ತಿರುವದು. ಅದರಲ್ಲಿ ಐದು ಖಾತೆಯಷ್ಟು ಜನರಿರುವರು. ಆದುದರಿಂದ ಇದೇ ರೀತಿಯಾಗಿ ಅದರ ಜನನಮರಣ ಸಂಖ್ಯೆಯು ಮುಂದುವರಿದರೆ ೧೦೦ ವರ್ಷಗಳೊಳಗಾಗಿ ಅದರ ಫಲವ

ತ್ತಾದ ಹುಲ್ಲುಗಾವಲಿನ ಪ್ರಾಂತ್ಯದಲ್ಲಿ ಒಬ್ಬ ಫ್ರೆಂಚ್ ಮನುಷ್ಯನು ಕೂಡ ಉಳಿಯದಂತಾಗುವದು. ಫ್ರೆಂಚ್ ಮನುಷ್ಯನೆಂದು ನಾನು ಒತ್ತಿ ಹೇಳುವೆನು. ಏಕೆಂದರೆ ಅವರಿಗೆ ಬದಲಾಗಿ ಬೇರೆಯವರು ಬಂದೇ ಬರುವರು. ಕೇನ್ ಎಂಬ ಭಾಗದ ಸುತ್ತಲೂ ಇರುವ ಕಬ್ಬಿಣದ ಗಣಿಗಳಲ್ಲಿ ಜರ್ಮನರು ಕೆಲಸಮಾಡುತ್ತಿರುವರು. ಮತ್ತೆ ಮೊದಲನೆಯ ಬಾರಿಯಾಗಿ, ನಿನ್ನೆತಾನೆ ಚೀನಾದೇಶದ ಕೂಲಿಗಳ ಪಡೆಯೊಂದು, 'ವಿಲಿಯಂ ದಿ ಕಾನ್‌ಕರರ್'ನು ಇಂಗ್ಲೆಂಡಿಗಾಗಿ ಹಡಗು ಹತ್ತಿದಸ್ಥಳದಲ್ಲಿ ಬಂದಿಳಿದಿದೆ." ಈ ವಾಕ್ಯಗಳನ್ನು ಟೀಕಿಸುವಾಗ ಮಿ. ಬ್ಯೂರೋ ಅವರು "ಇತರ ಎಷ್ಟು ಪ್ರಾಂತ್ಯಗಳು ಇದಕ್ಕಿಂತ ಒಳ್ಳೆಯ ಸ್ಥಿತಿಯಲ್ಲಿರುವವು !" ಎಂದು ಬರೆದಿರುವರು.

ಅನಂತರ ಈ ಬಗೆಯಾಗಿ ಪ್ರಜಾನಾಶದ ಪರಿಣಾಮ ಸ್ವರೂಪವಾಗಿ ಆ ಜನಾಂಗದ ಸೇನಾಬಲವು ಹೇಗೆ ಕುಗ್ಗುತ್ತಿರುವದೆಂಬುದನ್ನೂ ತೋರಿರುವರು. ಅಲ್ಲದೆ ಫ್ರಾನ್ಸ್ ದೇಶದಿಂದ ವಸಾಹತುಗಳಿಗೆ ಜನರು ಹೋಗದಿರುವದಕ್ಕೂ ಇದೇ ಕಾರಣವೆಂದು ಅವರು ಹೇಳುತ್ತಾರೆ. ಮತ್ತೆ ಫ್ರೆಂಚ್ ರಾಜ್ಯದ ಉಪನಿವೇಶಗಳು ಬೆಳೆಯದಿರುವದಕ್ಕೂ, ಫ್ರೆಂಚ್ ವ್ಯಾಪಾರವೂ, ಫ್ರೆಂಚ್ ಭಾಷೆಯೂ, ಸಂಸ್ಕೃತಿಯೂ ಹಬ್ಬದಿರುವದಕ್ಕೂ ಇದೇ ಕಾರಣವೆಂದು ಅವರು ಸಾಧಾರವಾಗಿ ತೋರಿರುವರು.

ಕೊನೆಗೆ ಅವರು ಈ ಬಗೆಯಾಗಿ ಪ್ರಶ್ನಿಸಿರುವರು. "ಪ್ರಾಚೀನ ಇಂದ್ರಿಯನಿಗ್ರಹ ವಿಧಿಯನ್ನು ತಿರಸ್ಕರಿಸಿರುವ ಫ್ರೆಂಚ್‌ಜನರು ಸುಖದಲ್ಲಾಗಲಿ ಭೌತಿಕ ಪುರೋವೃದ್ಧಿಯಲ್ಲಾಗಲಿ, ದೈಹಿಕ ಆರೋಗ್ಯದಲ್ಲಾಗಲಿ, ಬೌದ್ಧಿಕ ಸಂಸ್ಕೃತಿಯಲ್ಲಾಗಲಿ ಇತರ ಜನಾಂಗಕ್ಕಿಂತಲೂ ಮುಂದುವರಿದಿರುವರೇನು?"—ಅದಕ್ಕೆ ಅವರೇ ಈ ಉತ್ತರವನ್ನು ಕೊಟ್ಟಿರುವರು—"ಆರೋಗ್ಯ ವಿಚಾರದಲ್ಲಿ ಕೆಲವು ಮಾತುಗಳೇ ಸಾಕು. ಗರ್ಭನಿರೋಧದ ಪರವಾಗಿ ಎಷ್ಟೋ ಯುಕ್ತಿವಾದಗಳನ್ನೂ, ಸಿದ್ಧಾಂತಗಳನ್ನೂ ವಾಚಕರ ಮುಂದಿಡಬೇಕೆಂಬ ನಮ್ಮ ಆಶೆಯು ಪ್ರಬಲವಾಗಿರಬಹುದು. ಆದರೆ ಇಂದ್ರಿಯಸ್ವಾತಂತ್ರ್ಯದಿಂದ ಶರೀರವು ಪುಷ್ಟಿಗೊ

ಳ್ಳುವುದೆಂದಾಗಲಿ ಆರೋಗ್ಯವು ಅಭಿವೃದ್ಧಿ ಹೊಂದುವುದೆಂದಾಗಲಿ ನಾವು ನಂಬಲಾಗುವುದಿಲ್ಲ. ಈಗ ಯುವಕರ ಮತ್ತು ಪ್ರೌಢರ ಶಕ್ತಿಯು ದಿನೇದಿನೇ ಕುಂದುತ್ತಿರುವುದೆಂಬ ಕೂಗು ಎಲ್ಲೆಲ್ಲಿಯೂ ಕೇಳಿಬರುತ್ತಲಿರುವುದು. ಯುದ್ಧಕ್ಕೆ ಮುಂಚೆ ಸೇನಾಧಿಕಾರಿಗಳು ಹೊಸ ಸಿಪಾಯಿಗಳಲ್ಲಿ ನೆಲೆಯಾಗಿರಬೇಕಾದ ಶಾರೀರಿಕ ಬಲದ ನಿಯಮವನ್ನು ಆಗಿಂದಾಗ್ಗೆ ತಗ್ಗಿಸಬೇಕಾಗಿದ್ದಿತು. ಈಗ ಸಮಗ್ರ ಜನಾಂಗದ ಸಹನಶೀಲತೆಯು ಬಹುಮಟ್ಟಿಗೆ ಕುಗ್ಗಿಹೋಗಿರುವುದು. ಈ ಬಗೆಯ ಅವನತಿಗೆ ನೈತಿಕನಿಯಮರಾಹಿತ್ಯವೇ ಮೂಲ ಕಾರಣವೆಂದು ಹೇಳುವುದು ಅನ್ಯಾಯವಾಗಬಹುದು. ಆದರೆ ಪರಿಣಾಮದಲ್ಲಿ ಇತರ ಕಾರಣಗಳೊಂದಿಗೆ ಎಂದರೆ ಮದ್ಯಪಾನ, ಅನಾರೋಗ್ಯ ವಾಸಸ್ಥಳ ಇತ್ಯಾದಿಗಳೊಂದಿಗೆ ಈ ಕಾರಣವೂ ಸೇರಿರುವುದು. ನಾವು ಸರಿಯಾಗಿ ಪರೀಕ್ಷಿಸಿ ನೋಡಿದರೆ ಈಬಗೆಯ ನೈತಿಕ ನಿಯಮೋಲ್ಲಂಘನೆಯೂ ಅದನ್ನು ಪುಷ್ಟೀಕರಿಸತಕ್ಕ ಅಭಿಪ್ರಾಯಗಳೂ ಈ ಬಗೆಯ ಇತರ ತಾಪಗಳನ್ನು ವಿಶೇಷವಾಗಿ ಹೆಚ್ಚಿಸುತ್ತಿರುವವೆಂದು ಕಂಡುಬರುವುದು........ಭಯಂಕರವಾದ ಸ್ತ್ರೀ ರೋಗದ ಹರಡುವಿಕೆಯಿಂದ ಸಾರ್ವಜನಿಕ ಆರೋಗ್ಯಕ್ಕೆ ವಿಶೇಷ ಹಾನಿಯು ತಟ್ಟಿರುವುದು. ”

ಸಂತಾನವನ್ನು ಮಿತಿಗೊಳಿಸುವ ಪರಿಮಾಣದಲ್ಲಿ ಸಮಾಜದ ವ್ಯಕ್ತಿಯ ಐಶ್ವರ್ಯವೂ ಅಭಿವೃದ್ಧಿ ಹೊಂದುವುದೆಂಬ ಗರ್ಭನಿರೋಧಕ (Neo-Malthusians) ಚಳವಳದವರ ಸಿದ್ಧಾಂತವನ್ನು ಮಿ. ಬ್ಯೂರೊ ಅವರು ಖಂಡಿಸಿ, ಜರ್ಮನಿ ದೇಶದಲ್ಲಿ ಅಭಿವೃದ್ಧಿ ಹೊಂದುತ್ತಿರುವ ಜನನಸಂಖ್ಯೆ ಮತ್ತು ಸಂಪತ್ತಿನೊಂದಿಗೆ ಅವನತಿಯನ್ನೈದುತ್ತಿರುವ ಫ್ರಾನ್ಸ್ ದೇಶದ ಜನನ ಸಂಖ್ಯೆ ಮತ್ತು ಸಂಪತ್ತನ್ನು ತುಲನೆಮಾಡಿ ತಮ್ಮ ಸಿದ್ಧಾಂತವನ್ನು ಸಮರ್ಥಿಸಿರುವರು. ಇತರ ದೇಶಗಳಿಗಿಂತ ಹೆಚ್ಚು ಕೆಲಸ, ಕಡಿಮೆ ಸಂಬಳ ಕೊಟ್ಟು ಕೂಲಿಕಾರರನ್ನು ಕಷ್ಟಕ್ಕೊಳಪಡಿಸುವುದರಿಂದ ಜರ್ಮನಿ ದೇಶವು ತನ್ನ ವ್ಯಾಪಾರವನ್ನು ಅಭಿವೃದ್ಧಿಗೊಳಿಸಿಲ್ಲವೆಂದು ಮಿ. ಬ್ಯೂರೊ ಅವರ ಅಭಿಪ್ರಾಯವಾಗಿರುವುದು. ಅವರು ತಮ್ಮ ಅಭಿಪ್ರಾಯ ಸಮರ್ಥನೆಗಾಗಿ ಮಿ. ರಾಸಿಂ

ಗೋಲ್ ಎಂಬ ಗ್ರಂಥಕರ್ತರ ಮುಂದಿನ ವಾಕ್ಯಗಳನ್ನು ಎತ್ತಿ ಬರೆದಿರುವರು :—“ ಜರ್ಮನಿ ದೇಶದಲ್ಲಿ ಕೇವಲ ೪೧,೦೦೦,೦೦೦ ಜನಸಂಖ್ಯೆಯಿರುವಾಗ ಅನೇಕರು ಹಸಿವೆಯಿಂದ ಸತ್ತರು. ಆದರೆ ಆ ಸಂಖ್ಯೆಯು ೬೮,೦೦೦,೦೦೦ಕ್ಕೆ ಬೆಳೆದಾಗಿನಿಂದಲೂ ಅಲ್ಲಿಯ ಜನರ ಐಶ್ವರ್ಯವು ಹೆಚ್ಚುತ್ತಿರುವುದು. ಈ ಜನರು ತಪಸ್ವಿಗಳಲ್ಲ. ಆದಾಗ್ಯೂ ತಮ್ಮ ಸಂಸಾರವನ್ನು ಸುಸೂತ್ರವಾಗಿ ನಿರ್ವಹಿಸಿ ತಮ್ಮ ವರಮಾನದಲ್ಲಿ ಉಳಿದುದನ್ನು ಸೇವಿಂಗ್ಸ್ ಬ್ಯಾಂಕುಗಳಲ್ಲಿಡಲಾರಂಭಿಸಿದರು. ಸನ್ ೧೯೧೧ನೆಯ ಸಾಲಿನಲ್ಲಿ ಅದರ ಮೊತ್ತವು ೨೨,೦೦೦ ಮಿಲಿಯ ಫ್ರಾಂಕ್ಸ್‌ಗಳಾಗಿದ್ದವು.* ೧೮೯೫ನೆಯ ಸಾಲಿನಲ್ಲಿ ಅದರ ಮೊತ್ತವು ೮,೦೦೦ ಮಿಲಿಯಗಳಾಗಿದ್ದವು. ಅನಂತರ ವರುಷಕ್ಕೆ ೮೫೦ ಮಿಲಿಯ ಹೆಚ್ಚಾಗುತ್ತ ಹೋಯಿತು. ”

ಜರ್ಮನಿಯಲ್ಲಿ ಔದ್ಯೋಗಿಕ ಕಲೆಯ ಪುರೋಭಿವೃದ್ಧಿಯನ್ನು ವರ್ಣಿಸುತ್ತ, ಆ ದೇಶದ ಸಾಮಾನ್ಯ ಸಂಸ್ಕೃತಿಯ ವಿಚಾರದಲ್ಲಿ ಮಿ. ಬ್ಯೂರೊ ಅವರು ಬರೆದಿರುವ ಮುಂದಿನ ವಾಕ್ಯಗಳನ್ನು ವಾಚಕರು ಮನನ ಮಾಡುವಂತಿದೆ :—“ ಜರ್ಮನಿಯ ಕೆಲಸಗಾರರು ಸಂಸ್ಕೃತರಾಗಿಲ್ಲದಿದ್ದರೆ, ಕೆಲಸದ ಮೇಲ್ವಿಚಾರಕರು ಒಳ್ಳೆಯ ಶಿಕ್ಷಣವನ್ನು ಹೊಂದಿರದಿದ್ದರೆ, ಯಂತ್ರಗಾರರು ಸರಿಯಾಗಿ ತರಬೇತಾಗಿರದಿದ್ದರೆ ಆ ದೇಶದ ಔದ್ಯೋಗಿಕ ಪುರೋವೃದ್ಧಿಯಾಗುವುದು ಅಸಾಧ್ಯವಾಗಿದ್ದಿತೆಂದು ಸಮಾಜಶಾಸ್ತ್ರವನ್ನು ಚೆನ್ನಾಗಿ ಅಧ್ಯಯನ ಮಾಡದಿದ್ದವರು ಕೂಡ ಹೇಳಬಹುದಾಗಿದೆ............ಆ ದೇಶದಲ್ಲಿ ಕೈಗಾರಿಕೆಯ ಪಾಠಶಾಲೆಗಳು ಮೂರು ಬಗೆಯಾಗಿವೆ. ೫೦೦ಕ್ಕಿಂತಲೂ ಹೆಚ್ಚಾಗಿರುವ ಕಸಬುಗಳ ಪಾಠಶಾಲೆಗಳಲ್ಲಿ ೭೦,೦೦೦ ವಿದ್ಯಾರ್ಥಿಗಳಿರುವರು. ಔದ್ಯೋಗಿಕ ಪಾಠಶಾಲೆಗಳ ಸಂಖ್ಯೆಯು ಕಸಬುಗಳ ಪಾಠಶಾಲೆಗಳಿಗಿಂತಲೂ ಅಧಿಕವಾಗಿರುವುದು. ಅವುಗಳಲ್ಲಿ ಪ್ರತಿಯೊಂದರಲ್ಲಿಯೂ ೧೦೦೦ ಕ್ಕಿಂತಲೂ ಹೆಚ್ಚಾಗಿಯೆ ವಿದ್ಯಾರ್ಥಿಗಳಿರುವರು. ಮೂರನೆಯದಾಗಿ ಪ್ರೌಢವಿದ್ಯಾಲಯ(ಕಾಲೇಜು)ಗಳು ಅನೇಕವಾಗಿರುವವು.ಅವುಗ

* ಫ್ರಾಂಕಿಗೆ ೯|| ಪೆನ್ಸಿಗಳು

ಳಲ್ಲಿ ಸುಮಾರು ೧೫,೦೦೦ ವಿದ್ಯಾರ್ಥಿಗಳಿರುವರು. ಅವುಗಳಲ್ಲಿ ವಿಶ್ವ ವಿದ್ಯಾನಿಲಯದ ‘ ಪಂಡಿತೋತ್ತಮ ’ (ಡಾಕ್ಟರ್) ಪದವಿಗಳಿಗಾಗಿ ಉಚ್ಚಶಿಕ್ಷಣವನ್ನು ಕೊಡುವರು.......೩೬೫ ವ್ಯಾಪಾರ ವಿದ್ಯಾ ಪಾಠ ಶಾಲೆಗಳಲ್ಲಿ ಸುಮಾರು ೩೧,೦೦೦ ವಿದ್ಯಾರ್ಥಿಗಳಿರುವರು. ಮತ್ತೆ ಸಾವಿರಾರು ಪಾಠಶಾಲೆಗಳಲ್ಲಿ ಸುಮಾರು ೯೦,೦೦೦ ದಷ್ಟು ವಿದ್ಯಾರ್ಥಿಗಳಿಗೆ ಕೃಷಿಕರ್ಮ ಶಿಕ್ಷಣವನ್ನು ಕೊಡುತ್ತಿರುವರು. ಈ ಬಗೆಯಾಗಿ ನಾನಾ ವಿಧದಿಂದ ದೇಶದ ಸಂಪತ್ತನ್ನು ಹೆಚ್ಚಿಸುವ ೮,೦೦,೦೦೦ ಜರ್ಮನಿ ವಿದ್ಯಾರ್ಥಿಗಳೊಂದಿಗೆ, ನಮ್ಮ ದೇಶದ ಕಸಬುಗಳ ಪಾಠಶಾಲೆಗಳಲ್ಲಿರುವ ೩೫,೦೦೦ ವಿದ್ಯಾರ್ಥಿಗಳ ಸಂಖ್ಯೆಯನ್ನು ತುಲನೆ ಮಾಡಲಾಗುವುದೆ? ಕೃಷಿಕರ್ಮದಿಂದಲೆ ಜೀವಿಸತಕ್ಕವರ ಸಂಖ್ಯೆಯು ನಮ್ಮ ದೇಶದಲ್ಲಿ ೧೭,೭೦,೦೦೦ ಇರುವುದು. ಇವರಲ್ಲಿ ೭,೭೯,೭೯೮ ಜನರು ೧೮ ವರ್ಷ ವಯಸ್ಸಿಗೆ ಕಡಿಮೆಯಾದವರು. ಹೀಗಿದ್ದರೂ ನಮ್ಮ ಕೇವಲ ಕೃಷಿಕರ್ಮ ಶಿಕ್ಷಣಕ್ಕಾಗಿಯೆ ಸ್ಥಾಪಿಸಲ್ಪಟ್ಟಿರುವ ಪಾಠಶಾಲೆಗಳಲ್ಲಿ ೩,೪೫೫ ವಿದ್ಯಾರ್ಥಿಗಳು ಮಾತ್ರ ಇರುವುದೇಕೆ?” ಆಲೋಕನೀಯವಾದೀ ಜರ್ಮನಿಯ ಉನ್ನತಿಗೆ ಕೇವಲ ಮರಣಸಂಖ್ಯೆಗಿಂತಲೂ ಜನನಸಂಖ್ಯೆಯು ಹೆಚ್ಚಾಗಿರುವುದೇ ಕಾರಣವಾಗಿಲ್ಲವೆಂತಲೂ, ಇತರ ಅನುಕೂಲಪರಿಸ್ಥಿತಿಯಿದ್ದಲ್ಲಿ ಜನನಸಂಖ್ಯೆಯು ಪ್ರಬಲವಾಗುವುದು ಜನಾಂಗದ ಬೆಳವಣಿಗೆಗೆ ಅತ್ಯಾವಶ್ಯಕವಾದ ಲಕ್ಷಣವೆಂದೂ ಮಿ. ಬ್ಯೂರೊ ಅವರು ಬಹು ವಿಚಕ್ಷಣೆಯಿಂದ ಸಿದ್ಧಾಂತಪಡಿಸಿರುವರು. ಭೌತಿಕ ಸಂಪತ್ತಿನ ಅಭಿವೃದ್ಧಿ ಮತ್ತು ನೈತಿಕ ಪ್ರಗತಿಯೊಂದಿಗೆ ಜನನ ಸಂಖ್ಯೆಯು ಬೆಳೆಯುವುದು ಅಸಂಗತವಾಗಲಾರದೆಂಬುದೇ ಮಿ. ಬ್ಯೂರೊ ಅವರ ಸಿದ್ಧಾಂತವಾಗಿರುವುದು. ನಮ್ಮ ಹಿಂದೂದೇಶದ ಜನನ ಸಂಖ್ಯೆಯು ಫ್ರಾನ್ಸ್ ದೇಶದೊಂದಿಗೆ ಹೋಲುವಂತಿಲ್ಲ. ಆದರೆ ಜರ್ಮನಿ ದೇಶದಂತೆ ನಮ್ಮ ದೇಶದಲ್ಲಿ ಜನನ ಸಂಖ್ಯೆಯು ಹೆಚ್ಚುವುದು ನಮ್ಮ ಜನಾಂಗದ ಬೆಳವಣಿಗೆಗೆ ಸಹಾಯಕವಾಗಿಲ್ಲವೆಂದು ಹೇಳಬಹುದು. ಮಿ. ಬ್ಯೂರೊ ಅವರ ವಿಷಯ ಸಂಗ್ರಹ

ಮತ್ತು ದೃಷ್ಟಿಕೋನದಿಂದ ನಮ್ಮ ದೇಶದ ಪರಿಸ್ಥಿತಿಯನ್ನು ನಾನು ಬೇರೊಂದು ಪ್ರಕರಣದಲ್ಲಿ ಚರ್ಚಿಸುವೆನು.

ಜರ್ಮನಿ ದೇಶದಲ್ಲಿ ಮರಣ ಸಂಖ್ಯೆಗಿಂತಲೂ ಜನನ ಸಂಖ್ಯೆಯು ಹೆಚ್ಚಾಗಿರುವುದರ ಕಾರಣವನ್ನು ಮಿ. ಬ್ಯೂರೊ ಅವರು ಕೂಲಂಕಷ ವಾಗಿ ವಿಮರ್ಶಿಸಿ, ಮುಂದೆ ಹೇಳಿರುವುದೇನಂದರೆ—"ರಾಷ್ಟ್ರೀಯ ಸಂಪತ್ತಿನ ದೃಷ್ಟಿಯಿಂದ ಫ್ರಾನ್ಸ್ ದೇಶವು ನಾಲ್ಕನೆಯದೆಂದೆನಿಸಿ ಕೊಂಡಿರುವುದು ನಮಗೆ ಗೊತ್ತಿಲ್ಲವೆ? ಫ್ರಾನ್ಸ್ ದೇಶವು ತನ್ನ ೨೫,೦೦೦ ಮಿಲಿಯ ಫ್ರಾಂಕುಗಳ ಬಂಡವಾಳದ ಮೇಲಣ ವರಮಾನ ವನ್ನು ಮಾತ್ರ ಪಡೆಯುತ್ತಿರುವುದು. ಆದರೆ ಜರ್ಮನಿ ದೇಶವು ತನ್ನ ಬಂಡವಾಳದಿಂದ ಸುಮಾರು ೫೦,೦೦೦ ಮಿಲಿಯ ಫ್ರಾಂಕುಗಳ ವರಮಾ ನವನ್ನು ಪಡೆಯುತ್ತಿರುವುದು..... ಸನ್ ೧೮೭೯ ರಿಂದ ೧೯೧೪ನೆಯ ಸಾಲಿನವರೆಗೆ ಎಂದರೆ ೩೫ ವರುಷಗಳ ಸಮಯದಲ್ಲಿ ನಮ್ಮ ರಾಷ್ಟ್ರೀ ಯ ಭೂಸಂಪದವು ೪೦,೦೦೦ ಮಿಲಿಯ ಫ್ರಾಂಕುಗಳಷ್ಟು ಹಾನಿ ಯನ್ನು ಹೊಂದಿದೆ. ಈಗ ಅದರ ಮೌಲ್ಯವು ೯೨,೦೦೦ ಮಿಲಿಯ ಫ್ರಾಂಕುಗಳಿಗೆ ಬದಲಾಗಿ ೫೨,೦೦೦ ಮಿಲಿಯ ಫ್ರಾಂಕುಗಳಾಗಿವೆ! ದೇಶದ ಎಲ್ಲ ಭಾಗಗಳಲ್ಲಿಯೂ ಭೂವ ವಸಾಯವನ್ನು ಮಾಡುವವರ ಸಂಖ್ಯೆಯು ಕಡಿಮೆಯಾಗಿರುವುದು. ಮತ್ತೆ ಕೆಲವು ಜಿಲ್ಲೆಗಳಲ್ಲಂತೂ ಮುದುಕರ ವಿನಾ ಬೇರೆ ಜನರೇ ಇಲ್ಲದಂತಾಗಿದೆ?" ಮತ್ತೆ ಅವರು ಮುಂದೆ ಹೇಳಿರುವುದೇನಂದರೆ:—"ನೈತಿಕ ನಿಯಮಪಾಲನೆಯಿಲ್ಲದಿ ರುವುದೂ, ವ್ಯವಸ್ಥಾನುಸಾರಿಕ ಬಂಜೆತನವೂ ಜನಾಂಗದಲ್ಲಿ ನೈಸ ರ್ಗಿಕ ಶಕ್ತಿಗಳನ್ನು ಕುಂದಿಸುತ್ತಿರುವುದಲ್ಲದೆ, ಸಾಮಾಜಿಕ ಜೀವನ ದಲ್ಲಿ ಮುದುಕರ ಸಂಖ್ಯೆಯನ್ನೇ ಹೆಚ್ಚಿಸುತ್ತಿರುವವು....ಫ್ರಾನ್ಸಿನಲ್ಲಿ ಪ್ರತಿ ಸಾವಿರ ಜನಸಂಖ್ಯೆಗೆ೧೭೦ ಜನ ಮಕ್ಕಳೂ ಯುವಕರೂ ಇರು ವರು. ಜರ್ಮನಿದೇಶದಲ್ಲಿ ಅವರ ಸಂಖ್ಯೆಯು ೨೨೦, ಇಂಗ್ಲೆಂಡಿನಲ್ಲಿ ೨೧೦ ಇರುವುದು. ಮುದುಕರ ಸಂಖ್ಯೆಯ ಪರಿಮಾಣವು ಇರಬೇಕಾ ದುದಕ್ಕಿಂತಲೂ ಹೆಚ್ಚಾಗಿರುವುದಲ್ಲದೇ ನೈತಿಕ ನಿಯಮೋಲ್ಲಂಘನೆ ಯಿಂದಲೂ ತಾವಾಗಿಯೆ ಬಂಜೆತನವನ್ನು ವಹಿಸುವುದರಿಂದಲೂ ಅನೇ

ಕರು ಶಕ್ತಿಹೀನರಾಗಿ ಅಕಾಲವೃದ್ಧಾಪ್ಯದ ಹೆದರಿಕೆಯುಳ್ಳವರಾಗುತ್ತಿರುವರು. ''

ಅದೇ ಗ್ರಂಥಕರ್ತರು ಮುಂದೆ ಹೇಳುವುದೇನಂದರೆ:-"ಫ್ರೆಂಚರಲ್ಲಿ ಹಲವರು ತಮ್ಮನ್ನಾಳುವವರ ಈ ಗಾರ್ಹಸ್ಥ್ಯಧರ್ಮದ (ಅನೀತಿಯ) ವಿಚಾರವನ್ನು ಅಲಕ್ಷ್ಯದಿಂದ ನೋಡುತ್ತಿರುವರು. 'ಸ್ವಗತ ಜೀವನ (Private life) ವನ್ನು ತಿಳಿಯಲೆತ್ನಿಸಬಾರದು' ಎಂಬೀ ತತ್ವವನ್ನೆಷ್ಟು ವಂದಿಸಿದರೂ ಸ್ವಲ್ಪವೆ!'' ಮುಂದೆ ಅವರು ವಿಶೇಷ ವಿಷಾದದಿಂದ ಎಮ್. ಲಿಯೋಪೋಲ್ಡ್ ಮೊನಾಡ್‌ರವರ ಈ ವಾಕ್ಯಗಳನ್ನು ಬರೆದಿರುವರು: - " ಅಕೀರ್ತಿಕರವಾದ ನಡಾವಳಿಯನ್ನು ನಾಶಪಡಿಸುವುದಕ್ಕೂ ಅದರ ಬಂಧನದಲ್ಲಿ ಸಿಲುಕಿಕೊಂಡಿರುವವರನ್ನು ಬಿಡಿಸುವುದಕ್ಕೂ ಯುದ್ಧವನ್ನು ಹೂಡುವುದೇನೋ ಒಳ್ಳೆಯದೆ. ಆದರೆ ಯಾರು ಚಿತಾವಣಿಯಿಂದ ತಮ್ಮ ಆತ್ಮವನ್ನು ರಕ್ಷಿಸಿಕೊಳ್ಳಲಾರರೋ ಯಾರ ಧೈರ್ಯವು ದಯೆಯಕ್ರಿಯೆ ಅಥವಾ ದುರ್ಮುಖರ ಸೆಡಕಿಗೆ ವಶವಾಗುವಂತಿರುವುದೊ;.... . ಯಾರು ತಮ್ಮ ವಿಜಯದಿಂದ ಲಭಿಸುವ ಲೂಟಿಯಲ್ಲಿ ಹಿಗ್ಗುತ್ತ, ಬಹು ಸಂತೋಷಪ್ರದವೂ ಪವಿತ್ರವೂ ಆದ ಘಳಿಗೆಯಲ್ಲಿ ತಮ್ಮ ಯೌವನದ ಸತಿಯ ಮುಂದೆ ಮಾಡಿದ ಪ್ರಮಾಣವನ್ನು ನಾಚಿಕೆಯಿಲ್ಲದೆ ನಿರಾಕರಿಸಿ ಅನ್ಯಸ್ತ್ರೀಯಲ್ಲಿ ತಮ್ಮ ಅನುರಾಗವನ್ನು ವ್ಯಕ್ತಪಡಿಸಲೆತ್ನಿಸುವರೊ; ಯಾರು ತಮ್ಮ ಕುಟುಂಬದ ಮೇಲೆ ವಿಶೇಷ ಸ್ವಾರ್ಥಪೂರ್ಣವಾದ ಅಹಂಕಾರದ ಅತ್ಯಾಚಾರವನ್ನೆಸಗುವರೊ—ಅಂತಹ ಸೈನಿಕರ ವಿಚಾರವನ್ನು ಯಾರಾದರೂ ವಿಮರ್ಶಿಸಿರುವರೇನು ? ಅಂತಹರು ಬಂಧನದಲ್ಲಿರುವವರನ್ನು ಬಿಡಿಸುವುದು ಹೇಗೆ?'' ಕೊನೆಗೆ ಮಿ॥ ಬ್ಯೂರೊ ಅವರು ಹೀಗೆ ಉಪಸಂಹಾರವನ್ನು ಬರೆದಿರುವರು :—

" ಈ ಬಗೆಯಾಗಿ, ನಾವು ಎತ್ತ ತಿರುಗಿದರೂ ನಮ್ಮ ನೈತಿಕ ನಿಯಮೋಲ್ಲಂಘನೆಯ ಹಲವು ವಿಧಾನಗಳಿಂದ ವ್ಯಕ್ತಿಗೂ ಕುಟುಂಬಕ್ಕೂ ಸಮಾಜಕ್ಕೂ ವಿಶೇಷ ಹಾನಿ ತಟ್ಟಿರುವುದೆಂದು ಕಂಡುಬರುವುದು. ಅದರಿಂದ ನಾವು ವರ್ಣನಾತೀತವಾದ ಸಂಕಷ್ಟಗಳಿಗೆ ಗುರಿಯಾಗಿರು

ವೆವು. ನಮ್ಮ ತರುಣ ತರುಣಿಯರ ಲಂಪಟವೃತ್ತಿಯೂ, ವ್ಯಭಿಚಾರವೂ, ಕಾಮೋದ್ರೇಕ ಗ್ರಂಥಗಳೂ, ದುಡ್ಡಿಗಾಗಿಯಾಗಲಿ ಡಂಭಾಚಾರಕ್ಕಾಗಲಿ ಅಥವ ಕೇವಲ ಸುಖಕ್ಕೋಸ್ಕರವೆಂದಾಗಲಿ ಆಗುತ್ತಿರುವ ಮದುವೆಗಳೂ, ಹಾದರ ಮತ್ತು ವಿವಾಹವಿಚ್ಛೇದನಗಳೂ, ತಾವಾಗಿಯೇ ಸ್ವೀಕರಿಸುತ್ತಿರುವ ಬಂಜೆತನ ಮತ್ತು ಗರ್ಭಪಾತಗಳೂ ನಮ್ಮ ಜನಪದವನ್ನು ನಿರ್ಬಲವಾಗಿ ಮಾಡಿ, ಅದರ ಅಭಿವೃದ್ಧಿಯನ್ನು ತಡೆಗಟ್ಟಿರುವುವು. ತನ್ನ ಶಕ್ತಿಯನ್ನು ಕಾಪಾಡಿಕೊಳ್ಳಲು ಯಾವ ವ್ಯಕ್ತಿಗೂ ಬಲವಿಲ್ಲದಂತಾಗಿದೆ. ಹೊಸಬೆಳವಣಿಗೆಯ ಗುಣವು ಅದರ ವ್ಯಕ್ತರಾಶಿಯ ಪ್ರಮಾಣದೊಂದಿಗೆ ಕುಗ್ಗುತ್ತಲಿರುವುದು. ವೈಯ್ಯಕ್ತಿಕ ಮತ್ತು ಸಾಮಾಜಿಕ ಜೀವನ ಸಂಬಂಧವಾಗಿ ತಮ್ಮ ಭೌತಿಕ ವಿಚಾರಗಳಲ್ಲಿಯೇ ಮಗ್ನರಾಗಿ, ಕುರಿ ಅಥವ ಕುದುರೆಗಳ ಸಂತಾನವನ್ನು ಕಸಿ ಮಾಡುವ ವಿಧಾನವನ್ನು ಮಾನವರ ಮೇಲೂ ಪ್ರಯೋಗಿಸಬಹುದೆಂದು ತಿಳಿದಿದ್ದವರಮೇಲೆ **"ಅಲ್ಪಸಂಖ್ಯೆಯ ಜನನ, ಹೆಚ್ಚು ಸಂಖ್ಯೆಯ ಸುಸಂತಾನ"** ಎಂಬೀ ಕೂಗು ಒಂದು ಬಗೆಯ ಮೋಹಪರಿಣಾಮವನ್ನುಂಟುಮಾಡಿದ್ದಿತು. ಆಗಸ್ಟೆ ಕಾಂಪ್ಟೆಯು ಉಗ್ರವಾದ ಶೈಲಿಯಲ್ಲಿ ಬರೆದಿರುವಂತೆ, ನಮ್ಮ ಸಾಮಾಜಿಕ ದುಃಖನಿವಾರಕರೆಂದೆನ್ನಿಸಿಕೊಳ್ಳುವ, ವ್ಯಕ್ತಿ ಮತ್ತು ಸಮಾಜಗಳ ವಿವಿಧ ಮಾನಸಿಕ ವಿಧಾನಗಳನ್ನರಿಯಲಶಕ್ತರಾದೀ ವೈದ್ಯರೆಲ್ಲರೂ ಪಶುವೈದ್ಯವನ್ನು ಮಾತ್ರ ಮಾಡಲು ಯೋಗ್ಯರಾಗಿರುವರು !''

"ಮಾನವನು ಅನುಸರಿಸುವ ಎಲ್ಲ ಸಂಸ್ಥಿತಿ ಅವನು ಮಾಡುವ ಎಲ್ಲ ನಿರ್ಣಯಗಳು, ಅನುಕರಿಸುವ ಅಭ್ಯಾಸ-ಇವುಗಳಿಂದ ಅವನ ಸ್ವಂತ ಮತ್ತು ಸಾಮಾಜಿಕ ಜೀವನದ ಮೇಲೆ ಉಂಟಾಗುವ ಪರಿಣಾಮಗಳಲ್ಲೆಲ್ಲ, ಅವನ **ಇಂದ್ರಿಯ ತೃಪ್ತಿಗಾಗಿ** ಅನುಕರಿಸುವ, ಅಭ್ಯಾಸ ಮಾಡುವ ನಿರ್ಣಯ, ಅನುಸರಿಸುವ ಸ್ಥಿತಿ—ಇವುಗಳಿಂದಾಗುವ ಪರಿಣಾಮವೇ ಪ್ರಬಲವಾದುದು. ಅವನು ಇಂದ್ರಿಯ ಚೇಷ್ಟೆಯನ್ನೆದುರಿಸಿ ಅದನ್ನು ಸ್ವಾಧೀನದಲ್ಲಿಟ್ಟುಕೊಳ್ಳಲಿ, ಅಥವ ಅವನು ಅದಕ್ಕೆ ವಶನಾಗಿ, ಅದರ ಹೇಳಿಕೆಯಂತೆ ವರ್ತಿಸುವನಾಗಲಿ, ಆಗಿನ ಅವನ

ಕ್ರಿಯೆಯ ಪ್ರತಿಧ್ವನಿಯು ಅವನ ಮುಂದಣ ಸಾಮಾಜಿಕ ಜೀವನದಲ್ಲಿ ಕೇಳಿಬರುವುದು. ಏಕೆಂದರೆ ಎಂತಹ ಗುಪ್ತ ಮತ್ತು ಆಂತರ್ಯದ ಕ್ರಿಯೆಯು ಕೂಡ ಕೆಲವು ಕಾಲದ ಮೇಲೆ ಸಂಘರ್ಷಣ ಸ್ವರೂಪವಾಗಿ ಅನಂತ ಪ್ರತಿಕ್ರಿಯೆಯನ್ನುಂಟುಮಾಡಬೇಕೆಂಬುದು ಪ್ರಕೃತಿ ನಿಯಮವಾಗಿದೆ.''

"ನೈತಿಕ ನಿಯಮೋಲ್ಲಂಘನೆಯನ್ನು ಮಾಡಿ ನಾವು ಎಂತಹ ದುಷ್ಕಾರ್ಯವನ್ನೆಸಗಿದರೂ ಅದರಿಂದ ಅಪಾಯಕರವಾದ ಪರಿಣಾಮ ವುಂಟಾಗಲಾರದೆಂಬ ನಮ್ಮ ರಹಸ್ಯವಿಚಾರವನ್ನೆಷ್ಟು ವಂದಿಸಿದರೂ ಸಾಲದಾಗಿದೆ. ನಮ್ಮ ಮಟ್ಟಿಗೆ ಹೇಳಿಕೊಳ್ಳುವುದಾದರೆ, ನಮ್ಮ ಲಾಭ ಅಥವ ಸುಖವೇ ನಮ್ಮ ಕ್ರಿಯೆಯ ಉದ್ದೇಶ್ಯವಾಗಿರುವುದೆಂಬ ತೃಪ್ತಿಯು ನಮಗಿರುವುದು. ಇನ್ನು ಸಮಾಜವನ್ನು ನೋಡಿದರೆ ಅದು ಸಾಮಾನ್ಯಜೀವಿಗಳಾದ ನಮ್ಮ ದುಷ್ಕಾರ್ಯಗಳನ್ನು ಲಕ್ಷಿಸಲಾರದಷ್ಟು ಉನ್ನತಸ್ಥಿತಿಯಲ್ಲಿರುವುದೆಂದು ನಾವು ತಿಳಿದಿರುವೆವು. ಮತ್ತೆ ಇತರರಾದರೂ ಭಕ್ತಿಸಂಪನ್ನರಾಗಿ ಸುಶೀಲರಾಗಿ ಇರುವಷ್ಟು ಬುದ್ಧಿಯುಳ್ಳವರಾಗಲೆಂದು ನಾವು ರಹಸ್ಯವಾಗಿ ಆಶಿಸುವೆವು. ನಮ್ಮ ನಡತೆಯು ಇನ್ನೂ ವಿಶೇಷ ಶಂಕನೀಯವೂ ಆಗಿರುವಾಗ ಈ ಬಗೆಯ ಹೇಡಿತನದ ಭಾವನೆಯು ನಮ್ಮ ಮನಸ್ಸನ್ನಾಕ್ರಮಿಸುವುದು ಅದೇ ಭಾವನೆಗೆ ಇಂಬುಗೊಡುತ್ತ, ಕೊನೆಗೆ ಅದೇ ನ್ಯಾಯಸಮ್ಮತವಾದುದೆಂದು ನಂಬಿ ನಡೆಯುವ ಕಾಲವು ಬರುವುದು. ನಮ್ಮ ಅಪರಾಧಕ್ಕೆ ಅದೊಂದು ಬಗೆಯ ಕ್ರೂರವಾದ ಶಾಸನವೆಂಬುದನ್ನು ಮಾತ್ರ ನಾವು ಮರೆಯಬಾರದು.

"ನಮ್ಮ ಜೀವನದ ಈ ಬಗೆಯ ಉದಾಹರಣೆಯಿಂದ ಇತರ ಕುಂದುಕೊರತೆಗಳು ವ್ಯಕ್ತವಾಗುವ ದಿನವೂ ಸಮೀಪಿಸುವುದು. ಕೊನೆಗೆ ಇತರರಲ್ಲಿಯೂ ನಮ್ಮ ನೆರೆಯವರಲ್ಲಿಯೂ ಇರಬೇಕೆಂದು ನಾವು ಅಪೇಕ್ಷಿಸುವ ಸದ್ಗುಣವನ್ನು ಸಾಧಿಸುವುದಕ್ಕೆ ವಿಶೇಷ ಕಷ್ಟಪಡಬೇಕೆಂದೂ ಅದಕ್ಕಾಗಿ ವಿಶೇಷ ಶೌರ್ಯದಿಂದ ಹೋರಾಡಬೇಕೆಂದೂ, ನಾವು ಗುಪ್ತವಾಗಿ ಆಚರಿಸುವ ದುರ್ನಡತೆಯನ್ನನುಕರಿಸುವುದು ಬಹು ಸುಲಭವೆಂ

ದೂ ಜನರು ಭಾವಿಸಿ, ಅವರೂ ನಮ್ಮ ನೀತಿಬಾಹಿರ ಜೀವನವನ್ನು ಅನುಕರಿಸಲು ಆತುರಗೊಳ್ಳುವರು. ಆ ದಿನ ಅವನತಿಗೆ ಪ್ರಾರಂಭವಾಗುವುದು. ಆಗ ಪ್ರತಿಯೊಬ್ಬನೂ ತನ್ನ ದುರಾಚಾರದಿಂದಾದ ಪರಿಣಾಮವನ್ನೂ ತನ್ನ ಜವಾಬ್ದಾರಿಯ ಮೇರೆಯನ್ನೂ ಅರಿಯಬಹುದು.

"ಇದುವರೆಗೂ ನಾವು ಗುಟ್ಟಾಗಿರುವುದೆಂದು ತಿಳಿದಿದ್ದ ಗುಪ್ತ ಕ್ರಿಯೆಯು ಬಯಲಿಗೆ ಬರುವುದು. ಪ್ರತಿಯೊಂದು ಕ್ರಿಯೆಯೂ ತನಗೆ ಸಹಜವಾಗಿ ಲಭಿಸಿರುವ ಅದೊಂದು ಬಗೆಯ ಪಂಚಭೂತಾತೀತವಾದ ಚೈತನ್ಯದಿಂದ ನಮ್ಮ ಸುತ್ತಮುತ್ತಣ ವಾತಾವರಣದ ಮೇಲೆ ಒಂದು ಬಗೆಯ ಪರಿಣಾಮವನ್ನುಂಟುಮಾಡುವುದು. ಪ್ರತಿಯೊಬ್ಬ ವ್ಯಕ್ತಿಯ ತಪ್ಪಿನಿಂದ ಎಲ್ಲರೂ ಕಷ್ಟಕ್ಕೊಳಗಾಗಬೇಕಾಗುವುದು. ಏಕೆಂದರೆ ಒಂದು ಸುಳಿಯಿಂದ ಹೊರಡುವ ಅಲೆಯು ಹರಡಿಕೊಳ್ಳುವಂತೆ ನಮ್ಮ ಕಾರ್ಯದ ಪರಿಣಾಮಗಳು ಸಾಮಾಜಿಕ ಜೀವನದಲ್ಲಿ ಬಹುದೂರದವರೆಗೆ ಪಸರಿಸುವವು .......

"ನೈತಿಕ ನಿಯಮೋಲ್ಲಂಘನೆಯು ಮಾನವ ಕುಲದ ಮೂಲವನ್ನೇ ನಾಶಪಡಿಸುವುದಲ್ಲದೆ ನೈತಿಕ ದೃಷ್ಟಿಯಿಂದಲೂ ಶಾರೀರಿಕ ಬಲದ ದೃಷ್ಟಿಯಿಂದಲೂ ಪ್ರೌಢರನ್ನು ನಿರ್ಬಲಗೊಳಿಸಿ, ಅವರಲ್ಲಿ ವಾರ್ಧಿಕ್ಯಾವಸ್ಥೆಯ ಎಲ್ಲ ಲಕ್ಷಣಗಳನ್ನೂ ಶೀಘ್ರವಾಗಿ ಬರಮಾಡುವುದು.

(೪)

**ಗ**ರ್ಭನಿರೋಧಕ ಸಾಮಗ್ರಿಗಳ ಅತಿವರ್ಣನೆಯನ್ನೂ, ನೀತಿನಿಯಮೋಲ್ಲಂಘನೆಯನ್ನೂ, ಅದರಿಂದಾಗುವ ಭಯಂಕರ ಪರಿಣಾಮವನ್ನೂ ಅವುಗಳಿಗೆ ಉಪಾಯವನ್ನೂ ಆ ಗ್ರಂಥಕರ್ತರು ಮುಂದೆ ಸೂಚಿಸಿರುವರು. ಅವರು ಹೇಳುವ ಕಾನೂನು (ಕಾಯಿದೆ)ಗಳನ್ನೂ, ಅವುಗಳ ಆವಶ್ಯಕತೆ ಇದ್ದರೂ ಅವುಗಳ ಕ್ರಿಯಾಶಕ್ತಿ ಹೀನತೆಯನ್ನು ಕುರಿತು ಬರೆದಿರುವ ಭಾಗಗಳನ್ನೂ ನಾನು ಇಲ್ಲಿ ಪ್ರಸ್ತಾಪಿಸುವುದಿಲ್ಲ. ಮುಂದೆ ಅವರು, ಅವಿವಾಹಿತರಿಗೋಸ್ಕರ ಬ್ರಹ್ಮಚರ್ಯ ಕರ್ತವ್ಯ, ತಮ್ಮ ಇಂದ್ರಿಯಗಳನ್ನು ಶಾಶ್ವತವಾಗಿ ಸ್ವಾಧೀನದಲ್ಲಿಟ್ಟುಕೊಳ್ಳಲಾ

ಗದ ಅಥವಾ ನಿಗ್ರಹಿಸಲಾಗದ ಸಾಮಾನ್ಯರನೇಕರಿಗೆ ವಿವಾಹದ ಕರ್ತವ್ಯ, ವಿವಾಹವಾದನಂತರ ಆಚರಿಸಬೇಕಾದ ಇಂದ್ರಿಯ ನಿಗ್ರಹ ಮತ್ತು ವೈವಾಹಿಕ ಅನುರಾಗದ ಕರ್ತವ್ಯ-ಇವುಗಳ ವಿಚಾರವಾಗಿ ಸಾರ್ವಜನಿಕ ಅಭಿಪ್ರಾಯಗಳನ್ನು ಜಾಗರೂಕ ಶಿಕ್ಷಣದಿಂದ ಮಾರ್ಪಡಿಸುವ ಆವಶ್ಯಕತೆಯನ್ನು ಕುರಿತು ಚರ್ಚಿಸಿರುವರು. ಅನಂತರ ಬ್ರಹ್ಮಚರ್ಯಸಾಧನೆಗೆ ವಿರೋಧವಾದ-"ಆ ಉಪದೇಶವು ಸ್ತ್ರೀಪುರುಷರ ಶಾರೀರಕ ನಿಯಮಕ್ಕೆ ವಿರೋಧವಾದುದು ಮತ್ತು ಅವರ ಆರೋಗ್ಯವನ್ನು ಸಮರಸದಲ್ಲಿಡಲು ಹಾನಿಕರವಾದುದು; ಮತ್ತೆ ಅದು ವ್ಯಕ್ತಿಯ ಸ್ವಾತಂತ್ರ್ಯ ಮತ್ತು ಸ್ವಯಂಪ್ರಭುತ್ವಕ್ಕೂ, ಅವನು ಸ್ವೇಚ್ಛೆಯಿಂದ ಜೀವಿಸುವದಕ್ಕೂ ಅವನ ಸುಖಜೀವನದ ಬಾಧ್ಯತೆಗೂ ವಿರೋಧವಾದುದು"-ಎಂಬ ವಾದವನ್ನು ಅವರು ಚೆನ್ನಾಗಿ ಪರೀಕ್ಷಿಸಿರುವರು.

ಅನಂತರ ಇತರ ಇಂದ್ರಿಯಗಳಂತೆ ಜನನೇಂದ್ರಿಯವೂ ಕೂಡ ತೃಪ್ತಿಯನ್ನು ಹೊಂದಬೇಕು ಎಂಬ ತತ್ವವನ್ನು ಅವರು ವಿರೋಧಿಸಿರುವರು. ಮುಂದೆ ಅವರು ಹೇಳಿರುವುದೇನೆಂದರೆ "ಜನನೇಂದ್ರಿಯವೂ ಇತರ ಇಂದ್ರಿಯಗಳಂತೆ ಇದ್ದರೆ ಅದರಮೇಲೆ ಇಚ್ಛಾಶಕ್ತಿಯು ಪ್ರಯೋಗಿಸುವ ಪ್ರತಿಬಂಧಕ ಶಕ್ತಿಯ ಕಾರಣವನ್ನು ನಾವು ಹೇಗೆ ವಿವರಿಸಬಲ್ಲೆವು? ಅಥವಾ ಕಪಟಿಗಳು ಜನನೇಂದ್ರಿಯಗಳ ಆವಶ್ಯಕತೆಯೆಂದು ಹೇಳುವ ವಿಷಯಾಸಕ್ತಿಯ ಜಾಗ್ರತೆಯು ನಮ್ಮ ಚಿಕ್ಕ ಬಾಲಕಬಾಲಕಿಯರು ಪ್ರಾಪ್ತ ವಯಸ್ಕರಾಗುವುದಕ್ಕೆ ಮೊದಲೇ ನಮ್ಮ ನಾಗರೀಕತೆಯು ಅವರಲ್ಲಿ ಉಂಟುಮಾಡುವ ಹಲವುಬಗೆಯ ಇಂದ್ರಿಯ ಪ್ರಕೋಪನಗಳ ಪರಿಣಾಮವಾಗಿದೆ ಎಂಬ ವಿಚಾರದಲ್ಲಿ ನಾವೇನು ಉತ್ತರ ಹೇಳಬಲ್ಲೆವು ?"

ಆತ್ಮಸಂಯಮನವು ಅಪಾಯಕರವಾದುದಲ್ಲ. ಆದರೆ ಅದು ಆರೋಗ್ಯಾಭಿವೃದ್ಧಿಗೆ ಅತ್ಯಾವಶ್ಯಕವಾದುದು ಮತ್ತು ಸಾಧನೆಗೆ ಸಾಧುವಾದುದು ಎಂಬೀ ಸಿದ್ಧಾಂತವನ್ನು ಸಮರ್ಥಿಸುವುದಕ್ಕಾಗಿ ಅವರು ಪುಸ್ತಕದಲ್ಲಿ ಸಂಗ್ರಹಿಸಿರುವ ವೈದ್ಯಶಾಸ್ತ್ರಜ್ಞರ ಅತ್ಯಮೌಲ್ಯವಾದಭಿಪ್ರಾಯಗಳನ್ನಿಲ್ಲಿ ಕೊಡಬೇಕೆಂದು ನನಗೆ ವಿಶೇಷ ಆಸೆಯಾಗುತ್ತದೆ.

'ತೂಬಿಜೆರ್ಕ' ವಿಶ್ವವಿದ್ಯಾಲಯದ ಅಧ್ಯಾಪಕರಾದ ಓಸ್ಟರ್‌ಲೀ ಎಂಬವರು ಈ ರೀತಿಯಾಗಿ ಹೇಳಿರುವರು:—"ಜನನೇಂದ್ರಿಯಗಳ ಹುಟ್ಟುಗುಣ ಸಂಯಮಕ್ಕೊಳಗಾಗಲಾರದಷ್ಟು ಅಥವಾ ನೈತಿಕ ಬಲದಿಂದಲೂ ವಿವೇಕದಿಂದಲೂ ಸಂಪೂರ್ಣವಾಗಿ ಸ್ವಾಧೀನಪಡಿಸಿಕೊಳ್ಳಲಾರದಷ್ಟು ಪ್ರಬಲವಾದುದಾಗಿಲ್ಲ. ಯುವತಿಯಂತೆಯೇ ಯುವಕನೂ ಕೂಡ ಸರಿಯಾದ ಕಾಲ ಒದಗುವವರೆಗೆ ಇಂದ್ರಿಯನಿಗ್ರಹ ಮಾಡಿಕೊಳ್ಳುವುದನ್ನು ಕಲಿತುಕೊಳ್ಳಬೇಕು. ಸರಿಯಾದ ಆರೋಗ್ಯವೂ ನವೀನ ಅಂಗದಾರ್ಢ್ಯವೂ ಈ ಸ್ವಾರ್ಥ್ಯತ್ಯಾಗ ಸಾಧನೆಯ ಪಾರಿತೋಷಕವಾಗಿ ದೊರೆವುದೆಂದು ಅವನು ತಿಳಿಯಬೇಕು. ಬ್ರಹ್ಮಚರ್ಯವೂ ಸಂಪೂರ್ಣ ಪಾವಿತ್ರತೆಯೂ ನೈತಿಕ ಮತ್ತು ಶಾರೀರಕನಿಯಮಗಳೊಂದಿಗೆ ಹೊಂದುವಳಿಕೆಯುಳ್ಳವುಗಳಾಗಿರುವವೆಂದು ಪ್ರತ್ಯೇಕವಾಗಿ ಒತ್ತಿ ಹೇಳಬೇಕಾಗಿಲ್ಲ. ವಿಷಯಭೋಗವು ನೀತಿ ಮತ್ತು ಧರ್ಮಗಳಿಗೆ ವಿರೋಧವಾಗಿರುವಂತೆಯೆ ಶಾರೀರಕಶಾಸ್ತ್ರ ಮತ್ತು ಮನಶ್ಶಾಸ್ತ್ರಗಳು ಕೂಡ ಅದನ್ನು ನಿಷೇಧಿಸುವವು.''

ಲಂಡನ್ನಿನ ರಾಯಲ್ ಕಾಲೇಜಿನ ಅಧ್ಯಾಪಕರಾದ ಸರ್ ಲವುನಲ್ ಬಿಲೀ ಎಂಬಾತನು ಹೀಗೆ ಹೇಳಿರುವನು:— "ಹುಟ್ಟು ಗುಣಗಳ ಎಂತಹ ದರ್ಪವನ್ನಾದರೂ ಬಲವಾದ ಮತ್ತು ಉದಾತ್ತವಾದ ಇಚ್ಛಾಶಕ್ತಿಯಿಂದ ಪರಿಣಾಮಕರವಾಗುವರೀತಿಯಲ್ಲಿ ಕುಗ್ಗಿಸಬಹುದೆಂತಲೂ ಜೀವನಕ್ರಮ ಮತ್ತು ಉದ್ಯೋಗಗಳಿಂದ ಜಾಗರೂಕವಾಗಿ ಅದನ್ನು ಸ್ವಾಧೀನಪಡಿಸಿಕೊಳ್ಳಬಹುದೆಂತಲೂ ಅತಿ ಶ್ರೇಷ್ಠರೂ ಮಹಾನುಭಾವರೂ ಆವವರ ಆದರ್ಶ ಜೀವನದಿಂದ ಎಲ್ಲಾ ಕಾಲದಲ್ಲಿಯೂ ನಮಗೆ ಉಪದೇಶವು ದೊರೆಯುತ್ತಿದೆ. ಬಹಿರಂಗದ ನಿಯಾಮಕ ಕಾರಣಗಳಲ್ಲದೆ ಸ್ವಂತ ನಡತೆಯ ನಿಯಮವಾಗಿ ಸಾಧನೆ ಮಾಡಿದಾಗಲೂ ಇಂದ್ರಿಯನಿಗ್ರಹವು ಯಾವ ಮಾನವನಿಗೂ ಅಪಾಯವನ್ನುಂಟುಮಾಡಿಲ್ಲ. ಒಟ್ಟಿನಲ್ಲಿ ಕನ್ಯಾತ್ವವು ಮನಸ್ಸಿನ ಒಂದು ಅವಸ್ಥೆಯನ್ನು ಪ್ರಕಟಿಸುವ ದೈಹಿಕರೂಪವಾದಾಗ ಅದನ್ನು ಸಾಧಿಸುವುದು ಅಸಾಧ್ಯವಲ್ಲ....ಪಾತಿವ್ರತ್ಯವೆಂದರೆ ಕೇವಲ ಇಂದ್ರಿಯನಿಗ್ರಹಮಾತ್ರವಾಗಿರದೆ ದೃಢ ವಿಶ್ವಾ

ಸಗಳ ಪರಿಣಾಮಸ್ವರೂಪವಾದ ಕ್ರಿಯಾಶಕ್ತಿಯೂ ಮತ್ತು ಭಾವ ಶುದ್ಧಿಯೂ ಆಗಿರುವುದೆಂಬುದನ್ನು ತಿಳಿಯಬೇಕು.

ಸ್ವಿಟ್ಜರ್‌ಲೆಂಡ್ ದೇಶದ ಮಾನಸಶಾಸ್ತ್ರಜ್ಞನಾದ ಫೋರೆಲ್ ಎಂಬಾತನು ತನಗೆ ಗೊತ್ತಿರುವಮಟ್ಟಿಗೆ . ಜನನೇಂದ್ರಿಯ ವಿಧಿಯ ವಿರೋಧದ ಮಿತಿಯನ್ನು ಕುರಿತು ಚರ್ಚಿಸುವಾಗ ಹೇಳಿರುವುದೇನೆಂದರೆ:— "ಅಂಗಸಾಧನೆಯಿಂದ ನಗಗಳ ಪ್ರತಿಯೊಂದು ಬಗೆಯ ಚೇತನ ಕ್ರಿಯೆಯು ಅಭಿವೃದ್ಧಿಹೊಂದಿ ಬಲಗೊಳ್ಳುವುದು. ಶರೀರದ ಯಾವುದಾದರೊಂದು ಭಾಗದ ನಿಶ್ಚೇತನ ಕ್ರಿಯೆಯಿಂದ ಆ ಭಾಗದ ಉದ್ರೇಕದ ಪರಿಣಾಮವು ಕುಗ್ಗುವುದು.

"ಜನನೇಂದ್ರಿಯ ವಿಕ್ಷೋಭೆಯ ಕಾರಣಗಳೆಲ್ಲವೂ ಆಸೆಯನ್ನೂ ಪ್ರಬಲಗೊಳಿಸುವವು. ಈ ಪ್ರಕೋಪನೆಗಳನ್ನು ತ್ಯಜಿಸುವುದರಿಂದ ಆದು ಶೀಘ್ರವೇಧಿಯಾಗಿ ಮಾರ್ಪಟ್ಟು ಆಸೆಯು ಕ್ರಮೇಣ ಕಡಿಮೆಯಾಗುವುದು. ಇಂದ್ರಿಯ ನಿಗ್ರಹವು ಅನೈಸರ್ಗಿಕವಾದುದೆಂತಲೂ, ಸಾಧನೆಗೆ ಅಸಾಧ್ಯವಾದುದೆಂತಲೂ ಕೆಲವುಜನ ಯುವಕ ಯುವತಿಯರಲ್ಲಿ ಒಂದು ಬಗೆಯ ಅಭಿಪ್ರಾಯವು ಪ್ರಚಾರದಲ್ಲಿರುವುದು. ಆದಾಗ್ಯೂ ಇಂದ್ರಿಯನಿಗ್ರಹ ಸಾಧಕರನೇಕರು ಬ್ರಹ್ಮಚರ್ಯದಿಂದ ಆರೋಗ್ಯಕ್ಕೆ ಯಾವ ಹಾನಿಯೂ ಉಂಟಾಗುವುದಿಲ್ಲವೆಂದು ತಮ್ಮ ಉದಾಹರಣೆಗಳಿಂದ ಸಿದ್ಧಾಂತಗೊಳಿಸಿರುವರು."

ರಿಬ್ಬಿಂಗ್ ಎಂಬಾತನು ಈ ರೀತಿಯಾಗಿ ಬರೆದಿರುವನು:—"೨೫ ಅಥವಾ ೩೦ ಮತ್ತು ಅದಕ್ಕೂ ಹೆಚ್ಚಿನ ವಯಸ್ಸಿನ ಜನರು, ಸಂಪೂರ್ಣ ಬ್ರಹ್ಮಚರ್ಯ ಸಾಧನೆಯನ್ನು ಮಾಡಿರುವುದನ್ನು ನಾನು ನೋಡಿರುವೆನು. ಅವರಲ್ಲಿ ಅನೇಕರು ಮದುವೆಯಾದರೂ ಆವರೆಗೆ ಆ ವ್ರತವನ್ನು ಕೈಗೊಂಡಿದ್ದರು. ಅಂತಹರ ಉದಾಹರಣೆಗಳು ಬೇಕಾದಷ್ಟಿವೆ. ಅವರು ತಮ್ಮ ಪ್ರಕಟಣೆಯನ್ನು ಮಾಡಿಕೊಳ್ಳುತ್ತಿಲ್ಲ.

"ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನುಳ್ಳ ಅನೇಕ ವಿದ್ಯಾರ್ಥಿಗಳಿಂದ ನನಗೆ ಅನೇಕ ಗುಪ್ತ ಪತ್ರಗಳು ಬಂದಿರುವವು. ಅವರು ಆತ್ಮಸಂಯಮನವನ್ನು ಮಾಡಿಕೊಳ್ಳುವ ವಿಚಾರದಲ್ಲಿ ನನ್ನಂತಹನು

ಜನರಿಗೆ ಸಾಕಾದಷ್ಟು ಪರಿಣಾಮಕರವಾದ ರೀತಿಯಲ್ಲಿ ಬೋಧನೆ ಮಾಡುತ್ತಲಿಲ್ಲವೆಂದು ನನಗೇ ಬುದ್ಧಿ ಹೇಳಿರುವರು.''

ಡಾ॥ ಆಕ್ಟೈನ್ ಎಂಬಾತನು ಹೀಗೆ ಹೇಳಿರುವನು:—"ಮದುವೆಗೆ ಮುಂಚೆ ಯುವಕರು ಸಂಪೂರ್ಣ ಬ್ರಹ್ಮಚರ್ಯೆಯನ್ನು ಆಚರಿಸಬಲ್ಲರು ಮತ್ತು ಆಚರಿಸಲೇಬೇಕು.'' ಇಂಗ್ಲೀಷ್ ಕೋರ್ಟಿನ ವೈದ್ಯನಾದ ಸರ್ ಜೇಮ್ಸ್ ಪೇಜೆಟ್ ಎಂಬಾತನು ಈ ರೀತಿಯಾಗಿ ಸಾರಿರುವನು:- "ಇಂದ್ರಿಯ ನಿಗ್ರಹದಿಂದ ಶರೀರಕ್ಕಾಗಲಿ ಆತ್ಮಕ್ಕಾಗಲಿ ಯಾವ ಹಾನಿಯೂ ಉಂಟಾಗುವುದಿಲ್ಲ. ಕಟ್ಟುನಿಟ್ಟಿನ ಅಥವ ವಿಧಿನಿಯಮಗಳಿಗೊಳಪಟ್ಟ ಶೀಲವು ಇತರ ಎಲ್ಲಾ ಶೀಲಕ್ಕಿಂತಲೂ ಉತ್ತಮವಾದುದೆನಿಸುವುದು.''

ಡಾ॥ ಇ. ಪೆರಿಯರ್ ಎಂಬಾತನು ಈ ಬಗೆಯಾಗಿ ಬರೆದಿರುವನು: "ಸಂಪೂರ್ಣ ಬ್ರಹ್ಮಚರ್ಯೆಯಿಂದ ಅಪಾಯವಾಗುವುದೆಂಬ ತಪ್ಪು ಕಲ್ಪನೆಯು ಜನರಲ್ಲಿ ಮೂಡಿರುವುದು. ಅದು ಮಕ್ಕಳ ಮನಸ್ಸಿನಮೇಲೂ ತಂದೆಗಳ ಮನಸ್ಸಿನಮೇಲೂ ದುಷ್ಪರಿಣಾಮವನ್ನು ಉಂಟುಮಾಡುವುದಾಗಿರುವುದು. ಆದುದರಿಂದ ಆ ಅಭಿಪ್ರಾಯವನ್ನು ನಿರ್ಮೂಲಗೊಳಿಸುವುದು ಅತ್ಯಾವಶ್ಯಕ. ಯುವಕರಿಗೆ ಬ್ರಹ್ಮಚರ್ಯವು ದೈಹಿಕ, ನೈತಿಕ ಮತ್ತು ಬೌದ್ಧಿಕ ರಕ್ಷಣೆಯಾಗಿರುವುದು.''

ಸರ್ ಆಂಡ್ರ್ಯೂ ಕ್ಲಾರ್ಕ್ ಎಂಬಾತನು ಹೀಗೆ ಹೇಳಿರುವನು:— "ಬ್ರಹ್ಮಚರ್ಯೆಯಿಂದ ಅಪಾಯವಿಲ್ಲ. ಅದರಿಂದ ಬೆಳವಣಿಗೆ ನಿಲ್ಲುವುದಿಲ್ಲ. ಅದು ಶಕ್ತಿಯನ್ನು ಹೆಚ್ಚಿಸುವುದು. ಚಿಚ್ಛಕ್ತಿಯನ್ನು ಉತ್ತೇಜನಗೊಳಿಸುವುದು. ಅಬ್ರಹ್ಮಚರ್ಯದಿಂದ ಆತ್ಮಸಂಯಮನ ಶಕ್ತಿಯು ಕುಗ್ಗುವುದು, ಸೋಮಾರಿತನವು ಹೆಚ್ಚುವುದು, ಶರೀರವು ಅವ್ಯವಸ್ಥೆಗೊಳಗಾಗಿ ನಿರ್ಬಲವಾಗುವುದು ಮತ್ತು ಸಂತಾನ ಪಾರಂಪರ್ಯಕ್ಕೆ ಸಾಗಿಹೋಗುವ ಅನೇಕ ರೋಗಗಳಿಗೆ ಶರೀರವು ವಾಸಸ್ಥಾನವಾಗುವುದು. ಯುವಕರ ಆರೋಗ್ಯಕ್ಕೆ ಅಬ್ರಹ್ಮಚರ್ಯವು ಅತ್ಯಾವಶ್ಯಕವೆಂದು ಹೇಳುವುದು ತಪ್ಪು, ಮಾತ್ರವಲ್ಲದೆ ಕ್ರೌರ್ಯವೂ ಆಗಿರುವುದು. ಆ ಅಭಿಪ್ರಾಯವು ದೋಷಪೂರ್ಣವಾದುದೂ ಅಪಾಯವಾದುದೂ ಆಗಿದೆ.''

ಡಾ. ಸರ್ ಪ್ಲೆಡ್ ಎಂಬಾತನು ಹೀಗೆ ಬರೆದಿರುವನು:—"ಅಬ್ರಹ್ಮಚರ್ಯದಿಂದಾಗುವ ಅಪಾಯಗಳು ಎಲ್ಲರಿಗೂ ತಿಳಿದಿರುವುವಾಗಿಯೂ ವಿವಾದವಿಲ್ಲದುವಾಗಿಯೂ ಇರುವವು. ಬ್ರಹ್ಮಚರ್ಯದಿಂದಾಗುವ ಅಪಾಯಗಳು ಕೇವಲ ಕಾಲ್ಪನಿಕವಾದವುಗಳಾಗಿವೆ. ಇದಕ್ಕೆ ಮೊದಲನೆಯ ವಿಚಾರವನ್ನು ವಿವರಿಸತಕ್ಕ ಹಲವು ವಿದ್ವಾಂಸರ ಗ್ರಂಥಗಳು ಪ್ರಕಾಶಕ್ಕೆ ಬಂದಿರುವುದು, ಎರಡನೆಯ ವಿಚಾರದಲ್ಲಿ ಭವಿಷ್ಯದ ಇತಿಹಾಸಜ್ಞನು ಗ್ರಂಥವನ್ನು ಬರೆಯಬೇಕೆಂದು ನಿರೀಕ್ಷಿಸುತ್ತಿರುವುದು ನನ್ನ ಅಭಿಪ್ರಾಯವನ್ನು ಸಿದ್ಧಾಂತಗೊಳಿಸುವುದು. ಎರಡನೆಯ ವಿಚಾರದಲ್ಲಿರುವ ಅಭಿಪ್ರಾಯಗಳು ಕೇವಲ ಅಜ್ಞಾನಪೂರ್ಣವಾದ ನಿರ್ಧಾರದ, ನಾಚಿಕೆಯಿಂದ ಪ್ರಕಾಶಕ್ಕೆ ಬರಲಾರದ ಹಾರುಸುದ್ದಿಗಳಾಗಿರುವವು."

ಡಾಕ್ಟರ್ ಮಾಂಟಿಗಾಜಾ ಎಂಬಾತನು ತನ್ನ ಗ್ರಂಥವೊಂದರಲ್ಲಿ (*La-Physiologie de Vamour*) ಹೀಗೆ ಬರೆದಿರುವನು:—"ಬ್ರಹ್ಮಚರ್ಯದಿಂದ ಯಾವುದಾದರೂ ರೋಗವು ಬಂದಿರುವುದನ್ನು ನಾನೆಲ್ಲೂ ನೋಡಲಿಲ್ಲ....ಎಲ್ಲ ಮಾನವರೂ—ಮುಖ್ಯವಾಗಿ ಯುವಕರು ಇಂದ್ರಿಯ ನಿಗ್ರಹದಿಂದುಂಟಾಗುವ ಶೀಘ್ರ ಲಾಭಗಳನ್ನು ಅನುಭವಿಸಿ ತಿಳಿಯಬಹುದು."

ಬರ್ನ್ ಎಂಬಲ್ಲಿ ಪ್ರಸಿದ್ಧ ರೋಗನಿದಾನ ಶಾಸ್ತ್ರಜ್ಞ (Neuvo-pathologist) ನೂ ಅಧ್ಯಾಪಕನೂ ಆಗಿರುವ ಡಾ. ಡ್ಯೂಬಾಯ್ ಎಂಬಾತನು ಒತ್ತಿ ಹೇಳಿರುವುದೇನೆಂದರೆ:–"ಇಂದ್ರಿಯಗಳನ್ನು ತೃಪ್ತಿಗೊಳಿಸುವುದು ಕೇವಲ ಪಾಶವಿಕವೃತ್ತಿ ಎಂದು ತಿಳಿದು ಅದನ್ನು ನಿಗ್ರಹಿಸಬಲ್ಲವರಿಗಿಂತಲೂ ಇಂದ್ರಿಯಗಳಿಗೆ ಸ್ವಾತಂತ್ರ್ಯವನ್ನು ಕೊಟ್ಟಿರುವವರಲ್ಲಿಯೇ ಮಾಂಸಖಂಡ ಕಂಪನ (Neurasthenia) ರೋಗಿಗಳು ಹೆಚ್ಚಾಗಿರುವರು." ಈತನ ಹೇಳಿಕೆಯನ್ನು ಬೈಸೇಟ್ರಿ ಆಸ್ಪತ್ರೆಯಲ್ಲಿ ವೈದ್ಯನಾಗಿರುವ ಡಾ॥ ಫೇರೆ ಎಂಬಾತನು ಸಮರ್ಥಿಸಿರುವುದಲ್ಲದೆ, "ಮಾನಸಿಕ ಪಾವಿತ್ರ್ಯವುಳ್ಳವರು ತಮ್ಮ ಆರೋಗ್ಯಕ್ಕೆ ಯಾವ ಬಗೆಯ ಹಾನಿಯೂ ಆಗದಂತೆ ನಿರ್ಭಯವಾಗಿ ಬ್ರಹ್ಮಚರ್ಯ ಸಾಧನೆ

ಯನ್ನು ಮಾಡಬಹುದು. ಆರೋಗ್ಯಕ್ಕೆ ಇಂದ್ರಿಯ ವಾಸನೆಯನ್ನು ತೃಪ್ತಿಗೊಳಿಸುವ ಆವಶ್ಯಕತೆ ಇಲ್ಲ'' ಎಂದು ಹೇಳಿರುವನು.

ಪ್ರೊಫೆಸರ್ ಆಲ್ಫ್ರೆಡ್ ಫೌರ್ನೀರ್ ಎಂಬಾತನು ಹೀಗೆ ಬರೆದಿರುವನು: "ಯುವಕನಿಗೆ ಬ್ರಹ್ಮಚರ್ಯದಿಂದ ಅಪಾಯ ಉಂಟಾಗುವದೆಂದು ಒಂದುಬಗೆಯ ನಿಂದ್ಯವೂ ತುಚ್ಛವೂ ಆದ ಅಭಿಪ್ರಾಯವು ಜನರಲ್ಲಿ ನೆಲೆಗೊಂಡಿರುವುದು. ನಾನಂತೂ ಅಂತಹ ಅಪಾಯಗಳು ಇರುವವೆಂಬ ಅನುಭವವನ್ನು ಪಡೆದಿಲ್ಲ ಮತ್ತು ಅವುಗಳ ಅಸ್ತಿತ್ವದ ದೃಷ್ಟಾಂತಗಳು ಈ ದೀರ್ಘಕಾಲದ ನನ್ನ ಕಸಬಿನಲ್ಲಿ ನನ್ನಲ್ಲಿ ಚಿಕಿತ್ಸೆ ಹೊಂದಿದ ಹಲವು ರೋಗಿಗಳಲ್ಲಾರಲ್ಲಿಯೂ ಕಂಡುಬಂದಿಲ್ಲ.

"ಇದಲ್ಲದೆ ೨೧ ಅಥವ ಅದರ ಸುಮಾರಿನ ವಯಸ್ಸಾಗುವುದಕ್ಕಿಂತ ಮುಂಚೆ ನಿಜವಾದ ಪುಂಶಕ್ತಿಯು ಬರಲಾರದೆಂತಲೂ, ಮುಖ್ಯವಾಗಿ ಆ ವಯಸ್ಸಿಗೆ ಮುಂಚೆ ಇತರ ಕಾರಣಗಳಿಂದ ವಿಷಯಪ್ರೇರಣೆಯು ಉಂಟಾಗಿದ್ದರೆ ಇಂದ್ರಿಯ ಪರಿಚಾಲನೆಯ ಭಾವನೆಯು ನಿರ್ನಿಮಿತ್ತವಾಗಿ ಮನಸ್ಸಿನಲ್ಲಿ ಸೇರಲಾರದು ಎಂದು ಶಾರೀರಶಾಸ್ತ್ರದ ಆಧಾರದಿಂದ ನಾನು ಸಾರಿ ಹೇಳಬಲ್ಲೆನು. ಜನನೇಂದ್ರಿಯಗಳ ಅಕಾಲಪರಿಣತೆಯು ಅಂದರೆ ಬಾಲ ಪ್ರೌಢತ್ವವು ಕೇವಲ ಕೃತ್ರಿಮವಾದುದು. ಅದು ಮಕ್ಕಳನ್ನು ಸರಿಯಾದ ರೀತಿಯಲ್ಲಿ ತರಪೇತು ಮಾಡದಿರುವುದರಿಂದ ಸಾಮಾನ್ಯವಾಗಿ ಬರುವುದು.

"ಅದು ಹೇಗೇ ಇರಲಿ, ಇಂದ್ರಿಯಗಳು ಹೋದ ಮಾರ್ಗದಲ್ಲಿ ಹೋಗುವುದಕ್ಕಿಂತಲೂ ಅವುಗಳನ್ನು ನಿಗ್ರಹಿಸುವುದರಿಂದಾಗುವ ಅಪಾಯಗಳು ಕಡಿಮೆ ಎಂತಲೇ ಹೇಳಬಹುದು. ನನ್ನ ಅರ್ಥವು ಸ್ಪಷ್ಟವಾಗಿರಬಹುದು.''

ಮೇಲೆ ಹೇಳಿದ ಶಾಸ್ತ್ರಜ್ಞರ ಅಭಿಪ್ರಾಯಗಳೊಂದಿಗೆ ಇನ್ನೂ ಬೇಕಾದಷ್ಟು ಅಭಿಪ್ರಾಯಗಳನ್ನು ಸುಲಭವಾಗಿ ಸೇರಿಸಬಹುದು. ಕೊನೆಗೆ ಮಿ॥ ಬ್ಯೂರೊಯವರು ೧೯೦೨ನೆ ಸಾಲಿನಲ್ಲಿ ಬ್ರುಸಲ್ಸ್ ಎಂಬಲ್ಲಿ ನೆರೆದಿದ್ದ, "ದಿ ಸೆಕೆಂಡ್ ಜನರಲ್ ಕಾಂಗ್ರೆಸ ಆಫ್ ದಿ ಇಂಟರ್‌ನ್ಯಾಷನಲ್ ಕಾನ್‌ಫರೆನ್ಸ್ ಆಫ್ ಸ್ಯಾನಿಟರಿ ಅಂಡ್ ಮಾರಲ್ ಪ್ರಾಫಿ

ಲ್ಯಾಕ್ಸಿಸ್'' ಎಂಬ ಸಭೆಯಲ್ಲಿ ೧೦೨ ಜನ ಸುಪ್ರಸಿದ್ಧ ವೈದ್ಯಶಾಸ್ತ್ರಜ್ಞರು ಒಮ್ಮತದಿಂದ ಮಂಜೂರುಮಾಡಿದ ಗೊತ್ತುವಳಿಯನ್ನು ಕೊಟ್ಟಿರುವರು. ಅದು ಈ ಬಗೆಯಾಗಿರುವುದು :—“ಯುವಕರಿಗೆ ಇತರ ಎಲ್ಲಾ ಶಿಕ್ಷಣಕ್ಕಿಂತಲೂ ಮನಶ್ಶುದ್ಧಿಯೂ ಇಂದ್ರಿಯ ನಿಗ್ರಹವೂ ಅಪಾಯಕರವಾದುದಲ್ಲ ಎಂಬುದಲ್ಲದೆ ಈ ಸದ್ಗುಣಗಳನ್ನು ಕೇವಲ ವೈದ್ಯಕೀಯ ಮತ್ತು ಆರೋಗ್ಯದ ದೃಷ್ಟಿಯಿಂದಲೂ ಕೂಡ ಎಲ್ಲರೂ ಅನುಷ್ಠಾನಮಾಡುವುದಾವಶ್ಯಕ ಎಂಬ ಶಿಕ್ಷಣವನ್ನು ಕೊಡುವುದಗತ್ಯ''

ಮಿ. ಬ್ಯೂರೊ ಅವರು ಈ ಬಗೆಯಾಗಿ ಮುಂದೆ ಬರೆದಿರುವರು:- “ಕ್ರಿಸ್ಟಿಯಾನಿಯ ವಿಶ್ವವಿದ್ಯಾಲಯದ ವೈದ್ಯಕೀಯ ವಿಭಾಗದ ಅಧ್ಯಾಪಕರೆಲ್ಲರೂ, ಕೆಲವು ವರುಷಗಳ ಕೆಳಗೆ, ಒಮ್ಮತದಿಂದ ಹೀಗೆ ಸಾರಿರುವರು:‘ನಮ್ಮೆಲ್ಲರ ಅನುಭವದ ದೃಷ್ಟಿಯಿಂದ ಬ್ರಹ್ಮಚರ್ಯವು ಆರೋಗ್ಯಕ್ಕೆ ಹಾನಿಕರವಾದುದೆಂದು ಹೇಳುವ ಮಾತು ನಿರಾಧಾರವಾದುದು. ಪವಿತ್ರ ಮತ್ತು ನೈತಿಕ ಜೀವನದಿಂದ ಯಾರಿಗಾದರೂ ಕೆಡಕುಂಟಾಗಿರುವುದು ನಮ್ಮ ಅನುಭವಕ್ಕೆ ಬಂದಿಲ್ಲ.’

“ಈ ವಿಚಾರವು ಎಲ್ಲರಿಂದಲೂ ಚರ್ಚಿಸಲ್ಪಟ್ಟಿದೆ. ಆದುದರಿಂದ ಸಮಾಜಶಾಸ್ತ್ರಜ್ಞರೂ ನೀತಿಶಾಸ್ತ್ರಜ್ಞರೂ ಆದ ಎಂ. ಬ್ರೂಯಿರ್ಸೆಯವರೊಂದಿಗೆ ಮುಂದೆ ಹೇಳುವ ಶಾರೀರ ಶಾಸ್ತ್ರದ ಪ್ರಾಥಮಿಕ ತತ್ವವನ್ನು ಏಕಕಂಠದಲ್ಲಿ ಘೋಷಿಸಬಹುದು:—‘ಆಹಾರ ಮತ್ತು ಅಂಗಸಾಧನೆಗಳು ಅಲ್ಪ ಪ್ರಮಾಣದಿಂದಲಾದರೂ ದೇಹಕ್ಕೆ ಬೇಕಾಗುವುದು ಆದರೆ ಇಂದ್ರಿಯ ತೃಷ್ಣೆಯ ವಿಚಾರವು ಹಾಗಿರುವುದಿಲ್ಲ. ಕೆಲವು ಉತ್ಕಟ ವಿಚಾರದ ವ್ಯಕ್ತಿಗಳನ್ನುಳಿದು ಸ್ತ್ರೀ ಪುರುಷರೆಲ್ಲರೂ ಯಾವ ತೊಂದರೆ ಅಥವ ದುಃಖಕರವಾದ ಅನಾನುಕೂಲತೆಯೂ ಇಲ್ಲದೆ ಪವಿತ್ರ ಜೀವನವನ್ನು ಆಚರಿಸಬಹುದು. ಸಾಮಾನ್ಯ ತರಗತಿಯ ಜನರಿಗೆ ಬ್ರಹ್ಮಚರ್ಯದಿಂದ ಯಾವ ಬಗೆಯ ರೋಗವೂ ಬರುವುದಿಲ್ಲವೆಂಬುದನ್ನು ನಾವು ಒತ್ತಿ ಹೇಳಬೇಕಾಗಿಲ್ಲ. ಈ ತತ್ವವನ್ನು ಅನೇಕರು ದುರ್ಲಕ್ಷಿಸಿರುವರು. ಪ್ರಸಿದ್ಧವೂ ಅಪಾಯಕರವೂ ಆದ ಅನೇಕ ರೋಗಗಳು ಇಂದ್ರಿಯ ನಿಗ್ರಹಮಾಡದಿದ್ದುದರ ಪರಿಣಾಮವಾಗಿದೆ. ನಮ್ಮ ಶರೀ

ರದಲ್ಲಿ ವೀರ್ಯದಮೂಲಕವೂ ರಜಸ್ಸಿನಮೂಲಕವೂ ಅಧಿಕ ಪುಷ್ಟಿಯು ನಮಗೆ ದೊರೆಯುವಂತೆ ಸರಳವೂ ಅಮೋಘವೂ ಆದ ಅದೊಂದು ಬಗೆಯ ವಿಧಾನವನ್ನು ಪ್ರಕೃತಿ ದೇವತೆಯು ಕಲ್ಪಿಸಿರುವಳು.'

"ಆದುದರಿಂದ ಇಂದ್ರಿಯ ಭೋಗವು ನಿಸರ್ಗಬೋಧನೆಗನುಸಾರವಾದುದು ಅಥವಾ ಅದಕ್ಕೆ ಆವಶ್ಯಕತೆಯುಂಟು ಎಂದು ಹೇಳುವುದು ಶುದ್ಧ ಸುಳ್ಳೆಂದು ಡಾ॥ ಪ್ಯಾರಿಯವರು ಹೇಳುವುದಕ್ಕೆ ಆಧಾರವಿರುವುದು. 'ಆಹಾರ ಪೋಷಣೆಯಿಲ್ಲದಿದ್ದರೆ ಅಥವಾ ಉಸಿರುಗಟ್ಟಿದರೆ ಅದರಿಂದಾಗುವ ದುಷ್ಪರಿಣಾಮಗಳು ಎಲ್ಲರಿಗೂ ಗೊತ್ತಿರುವವು. ಆದರೆ ಚಿರಕಾಲೀನ ಅಥವಾ ತಾತ್ಕಾಲಿಕ ಬ್ರಹ್ಮಚರ್ಯದಿಂದ ತೀವ್ರವಾಗಿ ಅಥವಾ ದೀರ್ಘಕಾಲದ ನಂತರ ಉಂಟಾಗಿರತಕ್ಕ ಆರೋಗ್ಯಹಾನಿಯ ವಿಚಾರವನ್ನು ಯಾರೂ ಹೇಳುತ್ತಿಲ್ಲ.... ಸಾಮಾನ್ಯ ಜೀವನದಲ್ಲಿ ಇವರಿಗಿಂತಲೂ ಶೀಲದಲ್ಲಾಗಲೀ, ಇಚ್ಛಾಶಕ್ತಿ ಪ್ರಯೋಗದಲ್ಲಾಗಲೀ, ಶಾರೀರಕ ಬಲದಲ್ಲಾಗಲೀ, ಸಂತಾನೋತ್ಪಾದನೆಯ ಶಕ್ತಿಯಲ್ಲಾಗಲೀ ಯಾವವಿಧದಿಂದಲೂ ನ್ಯೂನತೆಯಿಲ್ಲದ ಅನೇಕ ಪವಿತ್ರ ಪುರುಷರು (ನಿಜವಾದ ಬ್ರಹ್ಮಚಾರಿ) ಗಳನ್ನು ನಾವು ನೋಡಿರುವೆವು.... ಇಂತಹ ವ್ಯತ್ಯಾಸಕ್ಕೊಳಗಾಗುವಂತಹ ಆವಶ್ಯಕತೆಯೂ, ಅನಾನುಕೂಲತೆಯಿಂದ ತೃಪ್ತಿಗೊಳಿಸಲಾಗಲಾರದೆಂದು ಶಾಂತ ವೃತ್ತಿಯನ್ನು ತಳೆಯುವ ನಿಸರ್ಗಬೋಧೆಯೂ, ನಿಜವಾದ ಆವಶ್ಯಕತೆ ಅಥವಾ ನಿಸರ್ಗಬೋಧವೆಂದು ಅನ್ನಿಸಿಕೊಳ್ಳಲಾರದು.''

"ಜನನೇಂದ್ರಿಯ ಭೋಗ ಸಂಬಂಧವು ಬೆಳೆಯುತ್ತಿರುವ ಹುಡುಗನ ಶಾರೀರಕಸ್ಥಿತಿಗೆ ಯಾವ ವಿಧದಿಂದಲೂ ಸಹಾಯಕವಾಗಿಲ್ಲ. ಅವನ ದೇಹವು ಸಾಮಾನ್ಯವಾಗಿ ಬೆಳೆದು ಪುಷ್ಟಿಗೊಳ್ಳಬೇಕಾದರೆ ಅವನು ಸಂಪೂರ್ಣವಾಗಿ ಬ್ರಹ್ಮಚರ್ಯೆಯನ್ನು ಅನುಷ್ಠಾನ ಮಾಡಲೇ ಬೇಕಾಗುವುದು. ಈ ನಿಯಮವನ್ನು ಉಲ್ಲಂಘಿಸುವವರು ತಮ್ಮ ಆರೋಗ್ಯವನ್ನು ಪುನಃ ಸರಿಪಡಿಸಿಕೊಳ್ಳಲು ಸಾಧ್ಯವಾಗದಂತೆ ಕೆಡಿಸಿಕೊಳ್ಳುವರು.'' ಯೌವನಾವಸ್ಥೆಯು ಪ್ರಾಪ್ತವಾದಾಗ ಶರೀರದಲ್ಲಿಯೂ, ಮನಸ್ಸಿನಲ್ಲಿಯೂ ಅಂಗಸೌಷ್ಟವದಲ್ಲಿಯೂ ಹಲವು ಬದಲಾವಣೆಗಳು

ಉಂಟಾಗುವವು. ಯೌವನ ಭರಿತನಾದವನಲ್ಲಿ ಎಷ್ಟು ಚೈತನ್ಯವಿದ್ದರೂ ಕಡಿಮೆಯೆ. ಏಕೆಂದರೆ ಆ ಅವಸ್ಥೆಯಲ್ಲಿ ರೋಗವನ್ನೆದುರಿಸುವ ಶಕ್ತಿಯು ಹಲವು ಸಂದರ್ಭಗಳಲ್ಲಿ ಕುಗ್ಗಿರುವುದು ಮುಂಚಿನ ಅವಸ್ಥೆಗಿಂತಲೂ ಈ ಕಾಲದಲ್ಲಿಯೇ ರೋಗಗಳೂ ಮರಣ ಸಂಖ್ಯೆಯೂ ಹೆಚ್ಚಿರುವುದು.... ... ಸಾಧಾರಣ ಬೆಳವಣಿಗೆ, ಇಂದ್ರಿಯ ವಿಕಾಸ, ಎಲ್ಲ ಬಗೆಯ ದೈಹಿಕ ಮತ್ತು ಮಾನಸಿಕ ಬದಲಾವಣೆ—ಇವುಗಳನ್ನೆಲ್ಲ ದಾಟಿ, ಮಗುವು ಮನುಷ್ಯನೆನಿಸಿಕೊಳ್ಳಬೇಕಾದರೆ ಆಗಬೇಕಾದ ದೀರ್ಘ ಕಾರ್ಯದಲ್ಲಿ ಪ್ರಕೃತಿಯು ವಿಶೇಷ ಶ್ರಮವನ್ನು ವಹಿಸಬೇಕಾಗುವುದು. ಅಂತಹ ಅವಸ್ಥೆಯಲ್ಲಿ ಮಾರ್ಗತಪ್ಪಿ ನಡೆಯುವುದೆಂದರೆ ಅದರಲ್ಲಿಯೂ ಜನನೇಂದ್ರಿಯ ಪರಿಚಾಲನೆಯನ್ನು ಅಕಾಲದಲ್ಲಿ ಮಾಡುವುದು ವಿಶೇಷ ಅಪಾಯಕರವಾದುದಾಗಿದೆ. ”

## (೫)

ಬ್ರಹ್ಮಚರ್ಯೆಯಿಂದಾಗುವ ಶಾರೀರಕ ಪರಿಣಾಮಗಳನ್ನು ಚರ್ಚಿಸಿದನಂತರ ಮಿ॥ ಬ್ಯೂರೊಯವರು ಅದರ ನೈತಿಕ ಮತ್ತು ಭೌತಿಕ ಲಾಭ ವಿಚಾರಗಳನ್ನು ಕುರಿತು ಪ್ರೊಫೆಸರ ಮಾಂಟೆಗಾಜಾಯವರ ವಾಕ್ಯಗಳನ್ನು ಈ ರೀತಿಯಾಗಿ ಉದಾಹರಿಸಿರುವರು :—

“ ಎಲ್ಲ ಮನುಷ್ಯರು, ಅವರಲ್ಲಿಯೂ ಮುಖ್ಯವಾಗಿ ಯುವಕರು, ಬ್ರಹ್ಮಚರ್ಯೆಯಿಂದ ಕೂಡಲೆ ದೊರೆವ ಲಾಭವನ್ನು ಅನುಭವಿಸಬಹುದು. ಅಂತಹರ ಜ್ಞಾಪಕಶಕ್ತಿಯು ಕುಂದಿಲ್ಲದೆಯೂ ಧಾರಣ ಶಕ್ತಿಯುತವಾದುದಾಗಿಯೂ ಇರುವುದು. ಅವರ ಮಿದುಳು ಚುರುಕಾಗಿಯೂ ಫಲವತ್ತಾಗಿಯೂ ಇರುವುದು. ಅವರ ಇಚ್ಛಾಬಲವು ಪ್ರಬಲವಾಗಿರುವುದು. ಸ್ವೈರ ವೃತ್ತಿಯವರು ಊಹಿಸಲರಿಯದ ಒಂದು ಬಗೆಯ ಶಕ್ತಿಯು ಅವರ ಶೀಲದಲ್ಲಡಗಿರುವುದು ; ಬ್ರಹ್ಮಚರ್ಯೆಯು ನಮ್ಮ ಸುತ್ತಮುತ್ತಲಿರುವ ವಸ್ತುಗಳ ಮೇಲೆ ಸ್ವರ್ಗೀಯ ಪ್ರಕಾಶವನ್ನು ಬೀರಿ, ಈ ಜಗತ್ತಿನ ಎಂತಹ ಅಲ್ಪ ವಸ್ತುವಾದರೂ ಅದನ್ನು ಆ ಪ್ರಕಾಶದ ಕಿರಣದಿಂದ ಶೋಭಿಸುವಂತೆ ಮಾಡಿ, ಅಂಧಕಾರ ಅಥವಾ

ಅವನತಿಯೆಂದರೇನೆಂಬುದನ್ನರಿಯದ ನಿರಂತರಾನಂದದ ಪವಿತ್ರ ಸುಖವನ್ನು ನಾವು ಅನುಭವಿಸುವಂತೆ ಮಾಡುವುದು. ಆದರೆ ಆ ಕಿರಣಗಳ ಸುಖಕರವಾದ ವಿವಿಧ ವರ್ಣಗಳನ್ನು ಯಾವ ಕೃಕಚಾಯುತ (Prism)ವೆಂಬ ದಪ್ಪ ಮೂಲೆಗನ್ನಡಿಯೂ ನಮಗೆ ತೋರಲಾರದು.” ಮುಂದೆ ಅದೇ ಗ್ರಂಥಕರ್ತರು ಹೀಗೆ ಹೇಳಿರುವರು. “ಬ್ರಹ್ಮಚರ್ಯೆಯನ್ನಾಚರಿಸುವ ಬಲಿಷ್ಠರಾದ ಯುವಕರ ಸುಖ, ನಿಷ್ಕಳಂಕವಾದ ನಡಗರ ಮತ್ತು ಆಶಾಪೂರ್ಣವಾದ ವಿಶ್ವಾಸ ಇವುಗಳಿಗೂ, ಇಂದ್ರಿಯ ಭೋಗಗಳಿಗೆ ದಾಸರಾದವರ ತಾಪಕರವಾದ ಪ್ರೇರಣೆ ಮತ್ತು ವಿಶ್ರಾಂತಿಸುಖವನ್ನರಿಯದ ಪೀಡನೆಗಳಿಗೂ ಇರುವ ವ್ಯತ್ಯಾಸಗಳೇ ಸಾಕಾದಷ್ಟು ವಾಕ್ಪುಷ್ಟಿಯನ್ನೀಯುವವು.” ಅನಂತರ ‘ವಿಷಯಲಾಂಪಟ್ಯ ಮತ್ತು ವ್ಯಭಿಚಾರ’ಗಳ ದುಃಖಕರವಾದ ಪರಿಣಾಮಗಳನ್ನು ಬ್ರಹ್ಮಚರ್ಯೆಯ ಲಾಭಗಳೊಂದಿಗೆ ತುಲನೆ ಮಾಡಿ ಮುಂದೆ ಅವರು ಹೀಗೆ ಬರೆದಿರುವರು :—“ಬ್ರಹ್ಮಚರ್ಯೆಯಿಂದ ರೋಗಬರುವುದೆಂದು ಯಾರೂ ಹೇಳಿಲ್ಲ; ಆದರೆ ಅನೇಕ ಭಯಂಕರ ರೋಗಗಳಿಗೆ ನೀತಿನಿಯಮೋಲ್ಲಂಘನೆಯೇ ಮೂಲಕಾರಣವೆಂದು ಯಾರಿಗೆ ತಾನೆ ಗೊತ್ತಿಲ್ಲ? ಅದರಿಂದ ದೇಹವು ಶಬ್ದಗಳಿಂದ ವರ್ಣಿಸಲಾಗದ ಒಂದು ಬಗೆಯ ಮುಗ್ಗುಲು ಸ್ಥಿತಿಯನ್ನು ಹೊಂದುವುದು....... ........ಮತ್ತೆ ಅದರಿಂದ ನಮ್ಮ ಕಲ್ಪನೆ, ಹೃದಯ ಮತ್ತು ಜ್ಞಾನ ಇವುಗಳೂ ಕಲುಷಿತವಾಗುವವೆಂಬುದನ್ನು ನಾವು ಮರೆಯಲಾಗದು. ಈಗ ಎಲ್ಲೆಲ್ಲಿಯೂ ಶೀಲವು ಅವನತಿ ಹೊಂದುತ್ತಿರುವುದೆಂದೂ ಯುವಕರು ಕಾಮೇಚ್ಛೆಯಲ್ಲಿ ಮೇರೆ ಮೀರುತ್ತಿರುವರೆಂದೂ ಸ್ವಾರ್ಥವು ಮಿತಿ ಮೀರುತ್ತಿರುವುದೆಂದೂ ಕೂಗು ಕೇಳಿಬರುತ್ತಲಿರುವುದು”

ಇದುವರೆಗೆ ಕಾಮೋಪಭೋಗದಾವಶ್ಯಕತೆ ಎಂಬ ವಿಚಾರವನ್ನೂ ಅದರ ವಿಷಯದಲ್ಲಿ ವಿವಾಹಕ್ಕೆ ಮುಂಚೆ ಯುವಕರು ತೆಗೆದುಕೊಳ್ಳುತ್ತಿರುವ ಸ್ವಾತಂತ್ರ್ಯವನ್ನೂ ಕುರಿತು ಹೇಳಿದುದಾಯಿತು. ಇಂದ್ರಿಯ ನಿಗ್ರಹ ಮಾಡುವುದರಿಂದ ತನ್ನ ಶರೀರವನ್ನು ಮನಬಂದಂತೆ ಉಪಯೋಗಿಸುವ ಸ್ವಾತಂತ್ರ್ಯವನ್ನು ನಿರೋಧಿಸಿದಂತಾಗು

ವುದು ಎಂದು ಕಾಮೋಪಭೋಗ ಸಿದ್ಧಾಂತದ ಕರ್ತರು ಹೇಳುವರು. ಅದಕ್ಕೆ ಮಿ॥ ಬ್ಯೂರೊ ಅವರು ಸಮಾಜಶಾಸ್ತ್ರ ಮತ್ತು ಸಾಮಾಜಿಕ ಮನಶ್ಶಾಸ್ತ್ರಗಳ ದೃಷ್ಟಿಯಿಂದ ಕಾಮೋಪಭೋಗದ ವಿಚಾರದಲ್ಲಿ ವೈಯಕ್ತಿಕ ಸ್ವಾತಂತ್ರ್ಯವನ್ನು ನಿರೋಧಿಸುವುದು ಅತ್ಯಾವಶ್ಯಕ ಎಂಬುದನ್ನು ಬಹು ವಿಸ್ತಾರವಾದ ಚರ್ಚೆಯಿಂದ ವಿಶದಗೊಳಿಸಿರುವರು.

ಅದೇ ಗ್ರಂಥಕರ್ತರು ಮುಂದೆ ಹೀಗೆ ಬರೆದಿರುವರು. " ಸಮಾಜ ಶಾಸ್ತ್ರಜ್ಞರ ದೃಷ್ಟಿಯಲ್ಲಿ ಸಾಮಾಜಿಕ ಜೀವನವೆಂದರೆ ಕೇವಲ ಹಲವು ಬಗೆಯ ಸಂಬಂಧಗಳ ತೊಡಕು, ಕೇವಲ ಕ್ರಿಯೆ ಪ್ರತಿಕ್ರಿಯೆಗಳ ಮಿಶ್ರಣ ಮಾತ್ರವಾಗಿರುವುದು. ಇದರಲ್ಲಿ ಇತರ ಸಂಬಂಧವಿಲ್ಲದ ಏಕಾಂತಕ್ರಿಯೆಯ ವಿಚಾರವು ಕಲ್ಪನಾತೀತವಾದುದೆಂದು ಅವರ ಅಭಿಪ್ರಾಯವಾಗಿದೆ. ನಾವು ಯಾವ ಸಂಕಲ್ಪವನ್ನು ಮಾಡಿದರೂ, ಯಾವ ಕೆಲಸವನ್ನು ಮಾಡಲು ಪ್ರಯತ್ನಿಸಿದರೂ ಸಾಮಾನ್ಯಾನುಭವವು ನಮ್ಮ ಸಂಕಲ್ಪವನ್ನೂ ನಮ್ಮ ಕ್ರಿಯೆಯನ್ನೂ ನಮ್ಮ ಭ್ರಾತೃಗಳ ಸಂಕಲ್ಪ ಕ್ರಿಯೆಗಳೊಂದಿಗೆ ಒಟ್ಟುಗೂಡಿಸುವುದು. ನಮ್ಮ ಅತ್ಯಂತ ಗುಪ್ತಾಲೋಚನೆಗೂ ಕ್ಷಣಿಕ ಆಸೆಗೂ ಎಂದಾದರೊಂದು ದಿನ ಪ್ರತಿಧ್ವನಿ ಬಂದೇ ಬರುವುದು. ಆದರೆ ಆ ಸಮಯವನ್ನು ನಿರೀಕ್ಷಿಸಲು ನಮ್ಮ ಮನಸ್ಸು ಎಂದಿಗೂ ಶಕ್ತವಾಗಲಾರದು. ಮಾನವನಲ್ಲಿ ಸಾಮಾಜಿಕ ಶೀಲವು ಕೇವಲ ಆಗಂತುಕವೂ ಅಥವಾ ಕೇವಲ ಸಹಾಯಕ ಶೀಲವುಳ್ಳುದೂ ಆಗಿರುವುದಿಲ್ಲ. ಅದು ಮಾನವನ ಮನುಷ್ಯತ್ವದ ಅಂಗವಾಗಿ ಅವನಲ್ಲಿ ಅಂತರ್ಗತವಾಗಿರುವುದಾಗಿಯೂ ಇದೆ. ಮಾನವನು ಸಾಮಾಜಿಕ ಜೀವಿ. ಅವನು ಮಾನವನಾಗಿರುವುದೇ ಅದಕ್ಕೆ ಕಾರಣ. ನಮ್ಮ ಸ್ವಂತದ್ದಕ್ಕಿಂತಲೂ ಸಾರ್ಥಕವೆನಿಸುವ ಕಾರ್ಯಕ್ಷೇತ್ರವು ಬೇರೊಂದಿಲ್ಲ. ಶಾರೀರಶಾಸ್ತ್ರ ಮತ್ತು ನೀತಿಶಾಸ್ತ್ರ, ಅರ್ಥಶಾಸ್ತ್ರ ಮತ್ತು ರಾಜನೀತಿ, ಭೌತಿಕ ಮತ್ತು ಲಲಿತಕಲಾ ವಿಜ್ಞಾನಪ್ರಪಂಚ, ಧರ್ಮ ಮತ್ತು ಸಮಾಜ ಇವುಗಳೆಲ್ಲವೂ ಒಂದು ಬಗೆಯ ವರ್ಣನಾತೀತವಾದ ಸಂಬಂಧವನ್ನೂ ಗುಪ್ತವಾದ ಸಾರ್ವತ್ರಿಕ ಬಂಧನವನ್ನೂ ಉಳ್ಳವುಗಳಾಗಿವೆ ; ಈ ಬಂಧನವು ಬಹು ಭದ್ರವಾಗಿರುವುದು. ಹಲವು ಸಂಬ

ರ್ಭಗಳಲ್ಲಿ ಸಮಾಜ ಶಾಸ್ತ್ರಜ್ಞನು ಸರ್ವತ್ರ ಸರ್ವದಾ ತನ್ನ ಮುಂದೆ ಹರಡಿರುವ ಈ ಅಪಾರವಾದ ಜಾಲದ ಹೆಣಿಗೆಯನ್ನು ನೋಡಿ ಮುಂದಾಲೋಚನೆ ತೋರದೆ ಭ್ರಮೆಗೊಳ್ಳುವನು. ಆಗ ಅವನು ಒಂದು ಬಾರಿ ಕಣ್ದೆರದು, ಕೆಲವು ಸಂದರ್ಭಗಳಲ್ಲಿ ವ್ಯಕ್ತಿಯ ಜವಾಬ್ದಾರಿಯು ಎಷ್ಟು ದೊಡ್ಡದಾಗಿದೆ ಎಂಬುದನ್ನೂ ಅರಿಯುವನು. ಕೆಲವು ಸಾಮಾಜಿಕ ಕೂಟಗಳು ಅವನಿಗೆ ಕೊಡಬಹುದಾದ ಸ್ವಾತಂತ್ರ್ಯದ ಅನುಷ್ಠಾನದಿಂದ ಅವನು ಎಂತಹ ಅವನತಿಗೆ ಗುರಿಯಾಗುವನೆಂಬುದನ್ನೂ ಆಗ ಅರಿಯುವನು.

ಅದೇ ಗ್ರಂಥಕರ್ತರು ಮುಂದೆ ಹೀಗೆ ಬರೆದಿರುವರು —" ಕೆಲವು ಸಂದರ್ಭಗಳಲ್ಲಿ ಬೀದಿಯಲ್ಲಿ ಉಗುಳುವುದಕ್ಕೆ ನನಗೆ ಸ್ವಾತಂತ್ರ್ಯವಿಲ್ಲವೆಂಬ ನಿಯಮ ಮಾಡಿರುವಾಗ ನನ್ನ ಜನನೇಂದ್ರಿಯದ ಶಕ್ತಿಯನ್ನು ಮನಬಂದಂತೆ ವಿನಿಯೋಗಿಸುವ ಹೆಚ್ಚು ಜವಾಬ್ದಾರಿಯ ಹಕ್ಕು ನನಗೆಲ್ಲಿರುವುದು ? ಸಾಮಾನ್ಯಾನುಭವದ ಸಾರ್ವತ್ರಿಕ ನಿಯಮದಿಂದ ತಪ್ಪಿಸಿಕೊಳ್ಳಲು ಆ ಶಕ್ತಿಯು ಅನ್ಯಾದೃಶ್ಯವಾದ ಹಕ್ಕುಳ್ಳದಾಗಿರುವುದೇನು ? ಆ ಉದ್ಯೋಗದ ಮುಖ್ಯ ಮಹತ್ವವು ವೈಯಕ್ತಿಕ ಕ್ರಿಯೆಯ ಸಾಮಾಜಿಕ ಪ್ರತಿಕ್ರಿಯೆಯನ್ನು ಹೆಚ್ಚಿಸುವುದಾಗಿರುವುದೆಂದು ಯಾರಿಗೆತಾನೆ ಗೊತ್ತಿಲ್ಲ ? ವಾಚಕರಿಗೆ ಗೊತ್ತಿರುವ, ಸ್ವಭಾವದ ಈ ಸುಳ್ಳು ಸಂಬಂಧವನ್ನು ಈಗತಾನೆ ಹೊಂದಿರುವ ಈ ಯುವಕನನ್ನೂ ಈ ಹುಡುಗಿಯನ್ನೂ ನೋಡಿರಿ. ಅವರ ಸಂಬಂಧದ ಒಡಂಬಡಿಕೆಯು ತಮ್ಮಿಬ್ಬರಿಗೆ ಮಾತ್ರವೇ ಸಂಬಂಧಪಟ್ಟಿರುವುದೆಂದು ಅವರು ತಿಳಿದಿರುವರು. ಅವರು ತಮ್ಮ ಸ್ವಾತಂತ್ರ್ಯದ ಗೂಡಿನಲ್ಲಡಗಿಕೊಂಡು, ತಮ್ಮ ಆಂತರ್ಯದ ಮತ್ತು ಗುಪ್ತ ಕ್ರಿಯೆಯನ್ನು ಸಮಾಜವು ಲಕ್ಷಿಸುವುದಿಲ್ಲವೆಂತಲೂ, ತಮ್ಮ ಕ್ರಿಯೆಯು ಸಮಾಜದ ಸ್ವಾಧೀನಾತೀತವಾಗಿರುವುದೆಂತಲೂ ನಂಬಿರುವರು. ಎಂತಹ ಹುಡುಗಾಟದ ಭ್ರಮೆಯಿದು ! ಜನಪದದ ಒಂದು ವರ್ಗವನ್ನು ಮತ್ತೊಂದು ವರ್ಗದೊಂದಿಗೂ, ಒಂದು ಜನಾಂಗವನ್ನು ಮತ್ತೊಂದು ಜನಾಂಗದೊಂದಿಗೂ ಒಟ್ಟಿನಲ್ಲಿ ಮಾನವ ವರ್ಗವನ್ನೆಲ್ಲ ಒಟ್ಟುಗೂಡಿಸುವ ಸಾಮಾಜಿಕ ಸಮಾನಾಧಿಕರಣ್ಯವು

ಎಂತಹ ಗುಪ್ತವಾದ ಕೋಣೆಯ ಗೋಡೆಯನ್ನಾದರೂ ಭೇದಿಸಬಲ್ಲದು. ಕೊನೆಗೆ ಅದು ಬಹುಕಾಲದನಂತರ ಸಾಮಾಜಿಕ ಜೀವನವನ್ನೆ ಅವ್ಯವಸ್ಥೆಗೊಳಿಸುವ ಕ್ರಿಯೆಯೊಂದಿಗೆ ನಾವು ಅದೊಂದು ಬಗೆಯ ಭ್ರಮೆಯಿಂದ ಆಚರಿಸುತ್ತಿರುವ ಗುಪ್ತಕ್ರಿಯೆಯೆಂಬುದರ ಸಂಬಂಧವನ್ನು ಭಯಾನಕ ರೀತಿಯಲ್ಲಿ ಸೇರಿಸಿ, ತೋರಿಸುವುದು. ತಾತ್ಕಾಲಿಕ ಅಥವಾ ಗರ್ಭನಿರೋಧಕ ಇಂದ್ರಿಯಭೋಗಕ್ಕೆ ತನಗೆ ಹಕ್ಕಿರುವುದೆಂದು ಸಾಧಿಸುವ ಪ್ರತಿಯೊಬ್ಬ ವ್ಯಕ್ತಿಯೂ, ತನಗೆ ಅನುಗ್ರಹಿಸಲ್ಪಟ್ಟಿರುವ ಸಂತಾನೋತ್ಪಾದಕ ಶಕ್ತಿಯನ್ನು ಕೇವಲ ತನ್ನ ಸುಖಕ್ಕಾಗಿಯೆ ವಿನಿಯೋಗಿಸುವ ಸ್ವಾತಂತ್ರ್ಯವು ತನಗಿರುವುದೆಂದು ಸಾಧಿಸುವ ಪ್ರತಿಯೊಬ್ಬ ಮಾನವನೂ—ತನಗೆ ಮನಸ್ಸಿರಲಿ, ಮನಸ್ಸಿಲ್ಲದಿರಲಿ—ಸಮಾಜದಲ್ಲಿ ಭೇದ ಮತ್ತು ಅವ್ಯವಸ್ಥೆಯ ಬೀಜಗಳನ್ನು ಬಿತ್ತುವನು. ನಮ್ಮ ಸ್ವಾರ್ಥದಿಂದಲೂ ನಮ್ಮ ಅವಿಶಾಸದಿಂದಲೂ ವಿರೂಪಗೊಂಡಿರುವ ನಮ್ಮ ಸಾಮಾಜಿಕ ಸಂಸ್ಥೆಗಳೆಲ್ಲ ಸಂತಾನೋತ್ಪಾದಕ ತೃಷ್ಣೆಯನ್ನು ತೃಪ್ತಿಗೊಳಿಸುವುದರಲ್ಲಿ ನಿಸರ್ಗಸಿದ್ಧವಾಗಿರುವ ಕರ್ತವ್ಯವನ್ನು ವ್ಯಕ್ತಿಯು ಸೌಮನಸ್ಯದಿಂದ ಸ್ವೀಕರಿಸುವನೆಂದು ತಿಳಿದಿರುವವು. ಈ ಸ್ವೀಕಾರದಲ್ಲಿರುವ ನಂಬಿಕೆಯಿಂದಲೇ, ಶ್ರಮಜೀವನ, ಆಸ್ತಿ, ಕೂಲಿ, ಪಿತ್ರಾರ್ಜಿತ, ತೆರಿಗೆ, ಸೇನೆ, ಸೇವೆ, ಪಾರ್ಲಿಮೆಂಟಿನ ಸಂಸ್ಕೃತಿ, ನಾಗರಿಕ ಸ್ವಾತಂತ್ರ್ಯ ಇತ್ಯಾದಿ ಹಲವು ಅಸಂಖ್ಯಾತ ವಿಧಾನಗಳನ್ನು ಸಮಾಜವು ನಿರ್ಮಿಸಿರುವುದು. ಇವರಲ್ಲಿ ಭಾಗಿಯಾಗಲು ತಿರಸ್ಕರಿಸುವುದರಿಂದ ವ್ಯಕ್ತಿಯು ಒಂದೇ ಏಟಿಗೆ ಎಲ್ಲವನ್ನು ಅವ್ಯವಸ್ಥೆಗೊಳಿಸುವನು, ಸಾಮಾಜಿಕ ಒಪ್ಪಂದದ ಮೂಲವನ್ನೆ ಅವನು ಉಲ್ಲಂಘಿಸಿದಂತಾಗುವುದು. ಆದರಿಂದ ಅವನು ಇತರರ ಮೇಲಿರುವ ಭಾರವನ್ನು ಹೆಚ್ಚಿಸುವನು. ಆಗ ಅವನು ಯಾವ ರೀತಿಯಿಂದಲೂ ಲೂಟಿಗಾರ, ಪರೋಪಜೀವಿ, ಕಳ್ಳ ಅಥವಾ ಠಕ್ಕನಿಗಿಂತಲೂ ಉತ್ತಮನೆನಿಸಿಕೊಳ್ಳಲಾರನು. ಸಮಾಜದ ವಿಚಾರವನ್ನು ಬಿಟ್ಟರೂ, ನಮ್ಮ ಇತರ ಎಲ್ಲ ಶಕ್ತಿಯೋಗಕ್ಕೂ ಇರುವಂತೆ ನಮ್ಮ ಶಾರೀರಕ ಶಕ್ತಿವಿನಿಯೋಗಕ್ಕೂ ನಾವೇ ಜವಾಬ್ದಾರರಾಗಿರುವೆವು. ಈ ಜವಾಬ್ದಾರಿಯು ನಮ್ಮ ಮೇಲೆ

ವಿಶೇಷವಾಗಿರುವುದೆಂದು ಹೇಳಬಹುದು. ಏಕೆಂದರೆ ಹೊರಗಣ ವಿಧಿ ನಿಯಮಗಳೆಂಬ ಆಯುಧ ಸಾಧನೆಗಳಿಲ್ಲದ ಸಮಾಜವು ನಮ್ಮ ಶಕ್ತಿ ಯನ್ನು ಸಮಾಜ ಹಿತಸಾಧನೆಯಾಗುವಂತೆಯೂ, ವಿವೇಕದಿಂದಲೂ ಉಪಯೋಗಿಸುವ ಭಾರವನ್ನು ನಮ್ಮ ಮೇಲೆಯೆ ಹೊರಿಸುವುದು.''

ಮನಶ್ಶಾಸ್ತ್ರದ ದೃಷ್ಟಿಯಿಂದಲೂ ಆ ಗ್ರಂಥಕರ್ತರು ಅನೇಕ ಪ್ರಬಲವಾದ ವಾದಗಳನ್ನು ಈರೀತಿಯಾಗಿ ನಮ್ಮ ಮುಂದಿಟ್ಟಿ ರುವರು.—"ಸ್ವಾತಂತ್ರ್ಯವು ತೋರಿಕೆಗೆ ಒಂದು ಬಗೆಯ ಉಪಶಮನ ದಂತೆ ಇದ್ದರೂ, ಅದು ನಿಜವಾಗಿ ಒಂದು ಬಗೆಯ ಜವಾಬ್ದಾರಿಯಾಗಿ ದೆಯೆಂದು ಬಹು ಕಾಲಕ್ಕೆ ಹಿಂದೆಯೆ ಒಬ್ಬ ಮಹರ್ಷಿಯನು ಹೇಳಿರು ವನು. ಹಾಗಿರುವುದರಲ್ಲಿಯೆ ಅದರ ವೈಭವವಿರುವುದು. ಸ್ವಾತಂ ತ್ರ್ಯವು ಮಾನವನನ್ನು ಒಂದು ಬಗೆಯ ಬಂಧನಕ್ಕೊಳಪಡಿಸಿ, ಕೆಲಸ ಮಾಡುವಂತೆ ಒತ್ತಾಯಪಡಿಸುವುದು. ಪ್ರತಿಯೊಬ್ಬ ವ್ಯಕ್ತಿಯೂ ಮಾಡಬೇಕಾದ ಪ್ರಯತ್ನಗಳನ್ನು ಹೆಚ್ಚಿಸುವುದು. ಪ್ರತಿಯೊಬ್ಬ ವ್ಯಕ್ತಿಯೂ ಸ್ವತಂತ್ರನಾಗಬೇಕೆಂದು ಅಪೇಕ್ಷಿಸುವನು. ತನ್ನ ಸ್ವಯಂ ಪ್ರಭುತ್ವವನ್ನು ವಿಸ್ತರಿಸುವುದರಲ್ಲಿ ತನ್ನ ಶಕ್ತಿಯನ್ನರಿತುಕೊಳ್ಳಬೇ ಕೆಂಬ ಉತ್ಕಟೇಚ್ಛೆಯು ಪ್ರತಿಯೊಬ್ಬ ಮಾನವನಿಗೂ ಇರುವುದು. ಇದರ ಕಾರ್ಯಕ್ರಮವು ಸುಲಭಸಾಧ್ಯವಾಗಿರುವಂತೆ ಕಂಡುಬರ ಬಹುದು. ಆದರೆ ಮೊದಲಾಗುವ ಅನುಭವದಿಂದಲೇ ಅದರಲ್ಲಿ ಮಿಶ್ರಿ ತವಾಗಿರುವ ಕಷ್ಟ ಪರಂಪರೆಗಳು ಗೋಚರವಾಗುವವು. ಐಕ್ಯವು ನಮ್ಮ ಸ್ವಭಾವ ಮತ್ತು ನೈತಿಕ ಜೀವನಗಳ ಪ್ರಬಲವಾದ ಗುರುತಾಗಿ ರುವುದು ವ್ಯರ್ಥವೆಂದು ತೋರುವುದು; ನಮ್ಮೊಳಗೆ ಅನೇಕ ಬಗೆಯ ವಿರುದ್ಧಭಾವನೆಗಳು ಮೂಡುವವು. ಅವುಗಳಲ್ಲಿ ಪ್ರತಿಯೊಂದು ಭಾವ ನೆಯೂ ನಮಗೆ ಮನವರಿಕೆಯಾಗುವುದು. ಆದಾಗ್ಯೂ ಅವುಗಳಲ್ಲಿ ನಮಗೆ ಬೇಕಾದುದನ್ನು ಮಾತ್ರ ನಾವು ಆರಿಸಬೇಕೆಂಬುದು ಸಿದ್ಧಾಂತ ವಾಗಿದೆ. ಸುಪ್ರಸಿದ್ಧ ಶಿಕ್ಷಣ ಶಾಸ್ತ್ರಜ್ಞರಾದ ಫೊರ್‌ಸ್ಟರ್ ಎಂಬಾತ ನೊಂದಿಗೆ ನಾನೂ ಕೂಡ ಈರೀತಿಯಾಗಿ ಯುವಕನನ್ನು ಪ್ರಶ್ನಿಸ ಬಹುದು. 'ಏನಯ್ಯ, ನಿನ್ನ ಮನಸ್ಸಿಗೆ ಬಂದ ರೀತಿಯಲ್ಲಿ ನೀನ

ಜೀವಿಸಿ ನಿನ್ನ ಆತ್ಮವನ್ನು ಅರಿಯಬೇಕೆಂದು ನೀನು ಅಪೇಕ್ಷಿಸುವೆಯಲ್ಲ? ಆದರೆ ನಿನ್ನ ಆತ್ಮದ ಯಾವ ಭಾಗದ ಅನುಭವವನ್ನು ನೀನು ಹೊಂದ ಲಪೇಕ್ಷಿಸುವೆ? ನಿನ್ನ ಭೌತಿಕ ಶಕ್ತಿಯು ಮಧ್ಯದಲ್ಲಿ ತನ್ನ ಸ್ಥಾನ ವನ್ನು ಸ್ಥಾಪಿಸಿಕೊಂಡಿರುವ ಭಾಗವು ಉತ್ತಮವೊ ಅಥವಾ ನಿನ್ನ ಸ್ವಭಾವದಲ್ಲಿ ಅತಿ ನೀಚವಾದ ಭಾಗವನ್ನು ಎಂದರೆ ಕಾಮೇಂದ್ರಿಯ ವನ್ನು ಆಕ್ರಮಿಸಿಕೊಂಡಿರುವ ಭಾಗವು ಉತ್ತಮವಾದುದೊ ? ವ್ಯಕ್ತಿ ಮತ್ತು ಸಮಾಜದ ಪ್ರಗತಿಯು ಆತ್ಮಾನುಭವದ ಬೆಳವಣಿಗೆಯನ್ನೂ ಭೌತಿಕ ದೇಹವನ್ನು ಸಂಪೂರ್ಣ ಸ್ವಾಧೀನದಲ್ಲಿಟ್ಟುಕೊಂಡಿರುವ ಆತ್ಮ ಶಕ್ತಿಯನ್ನೂ ಅವಲಂಬಿಸುವುದಾದರೆ ಆಗ ನಾವು ಯಾವುದನ್ನು ಆರಿಸ ಬೇಕೆಂಬುದರ ವಿಚಾರವಾಗಿ ಸಂಶಯ ಪಡಬೇಕಾದುದೇ ಇಲ್ಲ. ಆದರೆ ಅದನ್ನೂ ಅನುಷ್ಠಾನ ಮಾಡಬೇಕಾದರೆ ಶಕ್ತಿಯು ಬೇಕಾಗುವುದು. ಆದರೆ ಈ ಪ್ರಯತ್ನವು ಅಷ್ಟು ಸುಲಭ ಸಾಧ್ಯವಲ್ಲ. ಹಾಗಾದರೆ ನಾನು ಯಾವುದನ್ನೂ ಆರಿಸುವುದಿಲ್ಲ. ನನ್ನ ಅಸ್ತಿತ್ವದಲ್ಲಿ ಏಕಸ್ವರವೂ ಸಮಗ್ರ ವ್ಯವಸ್ಥೆಯೂ ಇರುವುದೆಂಬುದನ್ನು ಅನುಭವ ಪಡೆಯಲಿಚ್ಛಿ ಸುವೆನು ಎಂದು ನೀವು ಹೇಳಬಹುದು. ಒಳ್ಳೆಯದು ಈ ಸಂಕ ಲ್ಪವೇ ಒಂದು ಬಗೆಯ ಆರಿಸುವಿಕೆ ಎಂಬುದನ್ನು ಅರಿತು ನೀವು ಜಾಗ ರೂಕರಾಗಿರಬೇಕು. ಏಕೆಂದರೆ ಕಷ್ಟವಿಲ್ಲದೆ ಏಕಸ್ವರವು ನೆಲೆಗೊಳ್ಳ ಲಾರದು. ಗ್ಯಟೆ ಎಂಬಾತನು ಮೊದಲು ಸತ್ತು (Sterbe) ಆ ಮೇಲೆ ನಿನ್ನ ಇಚ್ಛೆಯಿದ್ದಂತಾಗು (Werde) ಎಂದು ಹೇಳಿರುವನು. ಈ ಶಬ್ದಗಳು ಹತ್ತೊಂಬತ್ತು ಶತಮಾನಗಳ ಹಿಂದೆ ಕ್ರೈಸ್ತನು ನುಡಿದ ಮುಂದಿನ ವಾಕ್ಯಗಳ ಪ್ರತಿಧ್ವನಿಯಾಗಿರುವುದು.—‘ ತಥಾಸ್ತು ಎಂದು ನಾನು ನಿನಗೆ ಹೇಳುವೆನು. ಹೊಲದಲ್ಲಿ ಬಿತ್ತಿದ ಗೋಧಿಯ ಕಾಳ್ಳ ಸಾಯುವವರೆಗೂ ಒಂಟಿಯಾಗಿಯೇ ಉಳಿಯುವುದು. ಅದು ಸತ್ತರೆ (ಪುನರ್ಜನ್ಮವನ್ನು ತಳೆದರೆ) ಹೆಚ್ಚು ಫಲವನ್ನು ಕೊಡುವುದು.

“ ಎಂ. ಗೇಬ್ರಿಯಲ್ ಸೀಲ್ಸ್ ಎಂಬಾತನು ಹೀಗೆ ಬರೆದಿರು ವನು. ‘ ನಾವು ಮನುಷ್ಯರಾಗಬೇಕೆಂದು ಅಪೇಕ್ಷೆ ಎಂದು ಹೇಳು ವುದು ಬಲು ಸುಲಭ. ಆದರೆ ಈ ಹಕ್ಕನ್ನು ಸಾಧಿಸುವುದರಲ್ಲಿ ಎಂ

ದಿಗೂ ನಿಷ್ಫಲವಾಗದ ನಿಷ್ಠುರ ಕರ್ತವ್ಯವಾಗಿ ಅದನ್ನು ಮಾರ್ಪಡಿಸ ಬೇಕು. ನಾವು ಸ್ವತಂತ್ರರಾಗಬೇಕೆಂದು ಬಹು ಟೇಂಕಾರದಿಂದ ಹೇಳಿಕೊಳ್ಳುವೆವು. ನಮ್ಮ ಮನಸ್ಸು ಬಂದಂತೆ ಮಾಡುವುದು ಎಂ ವರೆ ನಿಸರ್ಗಬೋಧನಕ್ಕೆ ದಾಸರಾಗಿರುವುದು ಎಂಬುದನ್ನೇ ನಾವು ಸ್ವಾತಂತ್ರ್ಯವೆಂದು ಭಾವಿಸುವುದಾದರೆ ಅಂತಹರ ವಿಚಾರದಲ್ಲಿ ನಾವು ಗರ್ವ ಪಡಬೇಕಾದುದಿಲ್ಲ. ಆದರೆ ನಾವು ನಿಜವಾದ ಸ್ವಾತಂತ್ರ್ಯದ ವಿಚಾರದಲ್ಲಿ ಮಾತನಾಡುವುದಾದರೆ ಎಂದಿಗೂ ಕೊನೆಗಾಣದ ಹೋರಾ ಟಕ್ಕೆ ಸಿದ್ಧರಾಗಿ ಸೊಂಟಕಟ್ಟಿ ನಿಲ್ಲಬೇಕು. ನಮ್ಮ ಒಗ್ಗಟ್ಟು, ಐಕಾ ತ್ಮ್ಯ, ನಮ್ಮ ಸ್ವಾತಂತ್ರ್ಯಗಳ ವಿಚಾರದಲ್ಲಿ ಚರ್ಚೆಮಾಡುತ್ತಾ ನಾವು ದೇವರ ಅಮರ ಪುತ್ರರೆಂದು ಗರ್ವದಿಂದ ಮಾತನ್ನು ಕೊನೆಗಾ ಣಿಸುವೆವು. ಆದರೆ ಈ ಆತ್ಮವನ್ನು ನಾವು ಹಿಡಿಯುವುದಕ್ಕೆ ಯತ್ನಿಸಿ ದಾಗ ಅದು ನಮ್ಮ ಕೈಜಾರಿ ಹೋಗಿ ಒಂದಕ್ಕೊಂದು ಪರಸ್ಪರ ವಿರು ದ್ಧವಾದ ಹೊಂದಿಕೆಯಿಲ್ಲದ ಜೀವಿಗಳ ವರ್ಗವಾಗಿ ಅದು ವಿಲಯಿಸುವು ದು ; ಪರಸ್ಪರ ವಿರುದ್ಧವಾದ ಆಸೆಗಳಿಂದ ಅದು ಛಿದ್ರನಾಗಿರುತ್ತದೆ. ಅದು ಸರದಿ ಬಂದಾಗ ತದ್ರೂಪವನ್ನೇ ಹೊಂದುವುದು. ಅದರ ಅಂತ ರಾತ್ಮವನ್ನುಳಿದು ಒಟ್ಟಿನಲ್ಲಿ ನೋಡಿದರೆ ಅದು ಯಾವುದರ ವಶವಾಗು ವುದೊ ಆ ದುರಾಗ್ರಹವೇ ಆದಾಗಿರುವುದೆಂದೂ, ಅದನ್ನು ಪ್ರೇರಿಸ ತಕ್ಕ ಕಾರ್ಯವಸ್ತುವು ಕೂಡ ಆದೇ ಆಗಿರುವುದೆಂದೂ ತಿಳಿದು ಬರು ವುದು. ಅದು ನಟಿಸುವ ಸ್ವಾತಂತ್ರ್ಯವು ಕೇವಲ ದಾಸ್ಯವೃತ್ತಿಯಾಗಿ ರುವುದು. ಆದರೆ ಅದಕ್ಕೆ ಅದು ಹಾಗೆ ತೋರುವುದಿಲ್ಲ. ಆದುದರಿಂದ ಅದನ್ನು ಅದು ವಿರೋಧಿಸುವುದಿಲ್ಲ.

ರ್‍ಯೂಸ್ಸೆನ್ ಎಂಬಾತನು ಹೀಗೆ ಬರೆದಿರುವನು :—“ಇಂದ್ರಿಯ ನಿಗ್ರಹವು ಮನಶ್ಶಾಂತಿಯನ್ನೀಯತಕ್ಕ ಸದ್ಗುಣವಾಗಿದೆ. ಆ ಬಹ್ಮ ಚರ್ಯೆಯಿಂದ ಮುಂದೆ ನಮ್ಮ ಶರೀರವನ್ನೇ ಆಕ್ರಮಿಸುವಷ್ಟು ಪ್ರಬ ಲವಾಗಬಹುದಾದ ನಮಗೆ ಗೊತ್ತಿಲ್ಲದ ಯಾವನೋ ಒಬ್ಬ ಅತಿಥಿ ಯನ್ನು ನಾವು ಆಮಂತ್ರಿಸಿದಂತಾಗುವುದು. ಯಾವ ವಯಸ್ಸಿನ ಲ್ಲಾದರೂ ಇಂದ್ರಿಯ ವಾಸನೆಯು ಅಪಾಯಕರವಾದುದೆ. ಆದರೆ

ಯೌವನದಲ್ಲಿ ಅದು ಪೂರ್ಣ ದುರ್ಮಾರ್ಗ ಗಮನವನ್ನುಂಟುಮಾಡುವುದಾಗಿಯೂ ಇಚ್ಛಾಶಕ್ತಿಯನ್ನು ನಿರ್ಬಲಗೊಳಿಸುವುದಾಗಿಯೂ ಇಂದ್ರಿಯಗಳನ್ನು ಚಂಚಲಗೊಳಿಸುವುದಾಗಿಯೂ ಇರುವುದು. ಸಾಮಾನ್ಯವಾಗಿ ಸಂಧಿಸುವ ಯಾವ ಸ್ತ್ರೀಯೊಂದಿಗಾದರೂ ಯುವಕನು ಮೊದಲನೆಯಬಾರಿಯಾಗಿ ದೇಹ ಸಂಬಂಧವನ್ನು ಬೆಳೆಸುವುದರಿಂದ ತನ್ನ ದೈಹಿಕ, ಭೌತಿಕ ಮತ್ತು ನೈತಿಕ ಜೀವನದ ಅಡಿಗಲ್ಲನ್ನು ಸಡಲಿಸುತ್ತಿರುವನೆಂಬುದನ್ನು ಮರೆಯಬಾರದು. ಆಗ ಇದು ಅವನಿಗೆ ತಿಳಿಯಲಾರದು. ಮುಂದಣ ಸಾಂಸಾರಿಕ ಜೀವನದಲ್ಲಿಯಾಗಲಿ, ಸಾಮಾಜಿಕ ಜೀವನದಲ್ಲಾಗಲಿ, ಶ್ರಮಜೀವನಕ್ರಮುವಲ್ಲಾಗಲಿ ಲಂಪಟವೃತ್ತಿಯು ಹೆಜ್ಜೆ ಹೆಜ್ಜೆಗೂ ಅವನನ್ನು ಭಾಧಿಸಲಾರಂಭಿಸುವುದೆಂಬುದನ್ನೂ ನಿರಾಶಾ ಪೂರ್ಣವಾದ ದಾಸ್ಯವೃತ್ತಿಗಿಂತಲೂ ಇಂದ್ರಿಯಗಳ ಸಂಪೂರ್ಣ ಸ್ವಾಧೀನತೆಯು ಎಷ್ಟೋ ಉತ್ತಮವಾದುದೆಂಬುದನ್ನೂ ಅವನು ಅರಿಯಲಾರನು. ಮುಂದಣ ಪ್ರತಿಭೆಯ ಕುರುಹನ್ನು ತೋರುತ್ತಲಿದ್ದ ಎಷ್ಟೋ ಜೀವಿಗಳು ಪ್ರಥಮದಿನದ ನೈತಿಕ ಪತನದಿಂದಲೆ ನಿರಾಶೆಯಿಂದಾವರಿಸಲ್ಪಟ್ಟು ನಾಶಗೊಂಡಿರುವ ಉದಾಹರಣೆಗಳು ನಮಗೆ ಗೊತ್ತಿರುವುವು.

"ಒಬ್ಬ ಪ್ರಸಿದ್ಧ ಕವಿಯ ಪದಗಳು ಈ ರೀತಿಯಾದ ಪ್ರತಿಧ್ವನಿಯನ್ನು ಕೊಡುತ್ತಲಿವೆ:—'ಕಳಂಕಿತವಾಗದ ಮಾನವನ ಆತ್ಮವು ಒಂದು ಆಳವಾಗಿರುವ ಹಡಗಿನಂತಿರುವುದು. ಅದರೊಳಗೆ ಮೊದಲು ಬೀಳುವ ಹನಿಗಳು ಕಲುಷಿತವಾಗಿದ್ದರೆ, ಅದರಿಂದ ಅದರ ತಳದಲ್ಲಿ ಉಂಟಾಗುವ ಕಲೆಯನ್ನು ಹೋಗಲಾಡಿಸಲು ಸಮಗ್ರ ಸಾಗರದ ಅಲೆಗಳೆಷ್ಟು ಬಾರಿ ಬಂದು ಹೊಡೆದರೂ ವ್ಯರ್ಥವಾಗುವುದು.' ಗ್ಲಾಸ್‌ಗೊ ವಿಶ್ವವಿದ್ಯಾಲಯದಲ್ಲಿ ಶಾರೀರಶಾಸ್ತ್ರದ ಅಧ್ಯಾಪಕರಾದ ಜಾನ್ ಜಿ. ಎಂ. ಕೆಂಡ್ರಿಕ್ ಎಂಬ ಪ್ರಸಿದ್ಧ ಆಂಗ್ಲೇಯ ಶಾರೀರಶಾಸ್ತ್ರಜ್ಞನು ಈ ರೀತಿಯಾಗಿ ಉಪದೇಶಿಸಿರುವನು:— ನಮ್ಮಲ್ಲಿ ಮೊಳೆಯುವ ಇಂದ್ರಿಯ ವಾಸನೆಯನ್ನು ನಿಷಿದ್ಧ ರೀತಿಯಲ್ಲಿ ತೃಪ್ತಿಗೊಳಿಸುವುದು ಕೇವಲ ನೈತಿಕ ದೋಷ ಮಾತ್ರವಲ್ಲದೆ, ಅದರಿಂದ ದೇಹಕ್ಕೆ

ಬಹು ಭಯಂಕರವಾದ ಹಾನಿ ತಟ್ಟುವುದು. ಆ ಹೊಸ ಆಸೆಗೆ ನಾವು ವಶವಾದರೆ, ಅದೇ ನಮ್ಮ ಮೇಲೆ ತನ್ನ ದುಷ್ಪ್ರಭುತ್ವವನ್ನು ನಡೆಯಿಸಲಾರಂಭಿಸುವುದು. ದುಷ್ಕಾರ್ಮಿಯಾದ ದಾಕ್ಷಿಣ್ಯವು ಅದಕ್ಕೆ ವಶವಾಗಿ ಅದರ ದರ್ಪವನ್ನು ಹೆಚ್ಚಿಸುವುದು. ಅನಂತರ ಮಾಡುವ ಪ್ರತಿಯೊಂದು ಕ್ರಿಯೆಯೂ ಅಭ್ಯಾಸವೆಂಬ ಸರಪಳಿಗೆ ಹೊಸ ಕೊಂಡಿಗಳನ್ನು ಸೇರಿಸುವುದಾಗಿರುವುದು.

ಅನಂತರ ಅನೇಕರು ಅದನ್ನು ತುಂಡುಮಾಡುವ ಶಕ್ತಿಯನ್ನೇ ಕಳೆದುಕೊಳ್ಳುವರು. ಕೊನೆಗೆ ಅವರು ದುರ್ಮಾರ್ಗಗಮನ ವಿಚಾರದಿಂದಲ್ಲದೆ ಕೇವಲ ಅಜ್ಞಾನದಿಂದ ಕಲಿತ ಅಭ್ಯಾಸಕ್ಕೆ ದಾಸರಾಗಿ ನಿರಾಶೆಯಿಂದ ತಮ್ಮ ದೈಹಿಕ ಮತ್ತು ಭೌತ್ತಿಕ ನಾಶಕ್ಕೂ ಒಳಗಾಗುವರು. ನಮ್ಮ ಜೀವನಕ್ರಮವನ್ನು ನೈತಿಕ ನಿಯಮಕ್ಕಧೀನಗೊಳಿಸಿ, ಮನಸ್ಸಿನಲ್ಲಿಯೂ ಸದಾ ಪವಿತ್ರಭಾವನೆಗಳನ್ನು ಬಿತ್ತುತ್ತಿರುವುದೇ ಇದಕ್ಕೆ ಶ್ರೇಷ್ಠವಾದ ಅಂಗರಕ್ಷೆಯಾಗಿರುವುದು.''

ಮಿ॥ ಬ್ಯೂರೋಯವರು ಮೇಲಿನದಕ್ಕೆ ಮುಂದೆ ಹೇಳುವ ಡಾಕ್ಟರ್ ಎಸ್‌ಕಾಂಡೇ ಯವರ ವಾಕ್ಯಗಳನ್ನು ಜೋಡಿಸಿರುವರು :—ಇಂದ್ರಿಯ ಭೋಗದ ಅಪೇಕ್ಷೆಯನ್ನು ನಮ್ಮ ಬುದ್ಧಿಯೂ ಇಚ್ಛಾಶಕ್ತಿಯೂ ಸ್ವಾಧೀನದಲ್ಲಿಟ್ಟುಕೊಳ್ಳಬಲ್ಲವೆಂದು ನಾವು ಒತ್ತಿ ಹೇಳುವೆವು. ಅದಕ್ಕೆ ನಾವು **ಅಪೇಕ್ಷೆ** ಎಂದು ಹೇಳಬಹುದೇ ವಿನಾ **ಆವಶ್ಯಕತೆ** ಎಂದು ಹೇಳಲಾಗದು. ಏಕೆಂದರೆ, ಅದನ್ನು ಮಾಡದೇ ಹೋದರೆ ಅದರಿಂದ ನಮ್ಮ ಇರುವಿಕೆಯು ಅಸಂಗತವಾಗುವುದೆಂದು ಹೇಳಬಹುದಾದ ಕಾರ್ಯಭಾಗವು ಅದಲ್ಲ. ನಿಜವಾಗಿಯೂ ಅದು (ಪ್ರಾಣಿಗೆ) ಆವಶ್ಯಕವಾಗಿಲ್ಲ. ಆದರೆ ಅನೇಕರು ಅದು ಆವಶ್ಯಕವೆಂದು ನಂಬಿರುವರು. ಆ ಅಪೇಕ್ಷೆಗೆ ಅವರು ಕೊಡುವ ಅರ್ಥದಿಂದ, ಇಂದ್ರಿಯ ಭೋಗವು ಅತ್ಯಾವಶ್ಯಕವೆಂದು ಅವರಿಗೆ ನಂಬಿಕೆಯುಂಟಾಗಿರುವುದು. ನಿಸರ್ಗನಿಯಮಗಳನ್ನು ಜರಾಜನ್ಯವಾದ ಪ್ರತಿಕಾರವಿಲ್ಲದ ರೀತಿಯಲ್ಲಿ ಅನುಸರಣೆ ಮಾಡುವುದರಿಂದ ಜನನೇಂದ್ರಿಯ ಪರಿಚಾಲನೆಯು ಉಂಟಾಗುವುದೆಂದು ನಾವು ತಿಳಿಯುವುದಿಲ್ಲ. ಹಾಗೆ ತಿಳಿಯುವುದಕ್ಕೆ ಬದಲಾಗಿ ಅದು ಮೊದಲೇ

ಆಲೋಚಿಸಲ್ಪಟ್ಟು ಸಿದ್ಧತೆಗೊಳಗಾದ ಸಂಕಲ್ಪದ ಬಲವನ್ನು ಸ್ವೇಚ್ಛಾಪ್ರವರ್ತಕವಾದ ಕ್ರಿಯೆಯಾಗಿದೆಯೆಂದು ಹೇಳುವೆವು.''

(೬)

ಮಿ. ಬ್ಯೂರೋಯುವರು ವಿವಾಹಿತ ಸ್ಥಿತಿಯಲ್ಲಿಯೂ ಅದಕ್ಕೆ ಮುಂಚೆಯೂ ಇಂದ್ರಿಯನಿಗ್ರಹವು ಅತ್ಯಾವಶ್ಯಕವೆಂದು ಹೇಳಿರುವುದಲ್ಲದೆ, ಆತ್ಮಸಂಯಮವು ಸಂಪೂರ್ಣ ಸಾಧ್ಯವೆಂತಲೂ ಆದು ಅಪಾಯಕರವಲ್ಲವೆಂತಲೂ ಅದರಿಂದ ನಮ್ಮ ಮನಸ್ಸು ಮತ್ತು ದೇಹಗಳಿಗೆ ಹಿತವಾಗುವುದೆಂತಲೂ ಅನೇಕ ಉದಾಹರಣೆಯಿಂದ ಸಿದ್ಧಾಂತಗೊಳಿಸಿ, ಆಜನ್ಮ ಬ್ರಹ್ಮಚರ್ಯೆಯ ಸಾಧ್ಯಾಸಾಧ್ಯತೆಯನ್ನೂ ಅದರ ಬೆಲೆಯನ್ನೂ ಕುರಿತು ಒಂದು ಪ್ರತ್ಯೇಕ ಪ್ರಕರಣವನ್ನೇ ಬರೆದಿರುವರು. ಅದರಲ್ಲಿ ಮುಂದೆ ಕೊಟ್ಟಿರುವ ಪ್ರಾರಂಭದ ವಾಕ್ಯಗಳು ಅತ್ಯಮೌಲ್ಯವಾಗಿವೆ.

"ನಿಜವಾದ ಇಂದ್ರಿಯಭೋಗಮುಕ್ತರಾದ ವೀರಾಗ್ರಣಿಗಳ ಪ್ರಥಮ ಶ್ರೇಣಿಯಲ್ಲಿ ಹೆಸರನ್ನು ಹೇಳುವಾಗ ವಿವಾಹ ಸೌಖ್ಯಕ್ಕೆ ತಿಲಾಂಜಲಿಯನ್ನಿತ್ತು ಆಜೀವ ಬ್ರಹ್ಮಚರ್ಯೆಯನ್ನು ಕೈಕೊಂಡು ಒಂದು ಉಚ್ಚಧ್ಯೇಯ ಸಾಧನೆಗಾಗಿ ತಮ್ಮ ಜೀವನವನ್ನು ಸಮರ್ಪಿಸಿರುವ ಯುವಕ ಯುವತಿಯರ ಹೆಸರನ್ನು ಹೇಳುವುದು ನ್ಯಾಯವಾಗಿದೆ. ಅವರ ಸಂಕಲ್ಪಕ್ಕೆ ಬೇರೆ ಬೇರೆ ಕಾರಣಗಳಿರಬಹುದು. ತನ್ನ ದುರ್ಬಲರಾದ ತಂದೆ ಅಥವಾ ತಾಯಿಯ ಸೇವೆ ಮಾಡುವುದೇ ತನ್ನ ಕರ್ತವ್ಯವೆಂದು ಒಬ್ಬನು ತಿಳಿದಿರಬಹುದು. ಆಗತಾನೆ ತಂದೆತಾಯಿಯರು ಮೃತಿಹೊಂದಿದುದರಿಂದ ಅನಾಥರಾದ ತನ್ನ ತಮ್ಮಂದಿರು ಮತ್ತು ತಂಗಿಯರ ಪೋಷಣೆಯ ಭಾರವನ್ನು ವಹಿಸಿ ಮದುವೆ ಮಾಡಿಕೊಳ್ಳುವುದು ಅನುಚಿತವೆಂದು ಬೇರೆ ವ್ಯಕ್ತಿಗಳು ಭಾವಿಸಿರಬಹುದು. ಮತ್ತೊಬ್ಬ ವ್ಯಕ್ತಿಯು ವಿಜ್ಞಾನದ ಅಥವಾ ಕಲೆಯ, ಬಡತನದ ಅಥವಾ ಕಾಹಿಲೆಯುವರ, ನೈತಿಕ ವಿದ್ಯಾಪ್ರಚಾರದ ಅಥವಾ ಭಕ್ತಿಪ್ರಚಾರದ ಸೇವೆಯ ಸಲುವಾಗಿ ತನ್ನ ಜೀವನವನ್ನು ಸಮರ್ಪಿಸಲು ಅಪೇ

ಕ್ಷೆಯುಳ್ಳವನಾಗಿರಬಹುದು. ಈ ಬಗೆಯ ಆತ್ಮ ಸಮರ್ಪಣೆಯ ಯೋಗ್ಯತೆಯು ಅವರವರ ಪರಿಸ್ಥಿತಿಗನುಸಾರವಾಗಿ ದೊಡ್ಡದೋ ಚಿಕ್ಕದೋ ಆಗಿರಬಹುದು. ವಂದನಾರ್ಹವಾದ ವಿವೇಕ ಪೂರ್ಣವಾದ ಸಂರಕ್ಷಕ ವಿದ್ಯಾಭ್ಯಾಸದಿಂದಲೂ ಒಳ್ಳೆಯ ನೈತಿಕ ಆರೋಗ್ಯ ಮಾರ್ಗದಿಂದಲೂ ಕೆಲವರಂತೂ ಇಂದ್ರಿಯ ವಾಸನೆಯನ್ನೆ ಉಳ್ಳವರಾಗಿಲ್ಲ. ಇತರರು ತಮ್ಮ ಸಾಧನೆಯಲ್ಲಿ ಬಂದ ಅನೇಕ ವಿಘ್ನಗಳನ್ನು ಎದುರಿಸಿ ತಮ್ಮಲ್ಲಿರುವ ಪಶುತ್ವವನ್ನೂ ಇಂದ್ರಿಯ ವಾಸನೆಯನ್ನೂ ಸ್ವಾಧೀನಪಡಿಸಿಕೊಂಡು ಕೇವಲ ತಮ್ಮ ಸದ್ವರ್ತನೆಯನ್ನು ಪ್ರಬಲಗೊಳಿಸುವುದರಿಂದಲೆ ಇಂದ್ರಿಯಜಿತರಾಗಿರಬಹುದು. ಆದರೆ ಇವರೆಲ್ಲರಲ್ಲಿಯೂ ಸಂಕಲ್ಪವು ಮಾತ್ರ ಒಂದೇ ವಿಧವಾದುದಾಗಿದೆ. ಈ ಸ್ತ್ರೀ ಪುರುಷರೆಲ್ಲರೂ ಅವಿವಾಹಿತರಾಗಿರುವುದೇ ಸೇವೆಗೆ ಅತ್ಯುತ್ತಮವಾದ ದಾರಿ ಎಂದು ತಿಳಿದು ಬ್ರಹ್ಮಚರ್ಯೆಯ ಸಂಪೂರ್ಣ ಪವಿತ್ರ ಜೀವನ ಕ್ರಮವನ್ನು ತಾವು ಅನುಸರಿಸುವೆವೆಂದು ದೇವರೊಂದಿಗೂ ತಮ್ಮ ಆತ್ಮದೊಂದಿಗೂ ಒಂದು ಒಪ್ಪಂದ ಮಾಡಿಕೊಂಡಿರುವರು. ಕೆಲವು ಸಂದರ್ಭಗಳಲ್ಲಿ ವಿವಾಹಿತರ ಕರ್ತವ್ಯವೂ ಎಷ್ಟೋ ಕಡಾಕಡಿಯಾಗಿಯೂ ಸಂಶಯಾಸ್ಪದವಿಲ್ಲದುದಾಗಿಯೂ ಇರಬಹುದು. ಆದರೆ ಈ ಬಗೆಯ ಸಂಕಲ್ಪಗಳೂ ಕೂಡ ನ್ಯಾಯ ಸಮ್ಮತವಾಗಿರುವವು. ಏಕೆಂದರೆ ಅವುಗಳೆಲ್ಲವೂ ಒಂದು ಘನವಾದ ಮತ್ತು ಉದಾರವಾದ ಉದ್ದೇಶ್ಯಗಳಿಂದ ಪ್ರೇರಿತಗಳಾಗಿರುವವು. ಮೈಕೇಲ್ ಏಂಜಿಲೊ ಎಂಬ ಚಿತ್ರಗಾರನಿಗೆ ಮದುವೆ ಮಾಡಿಕೊಳ್ಳೆಂದು ಅವನ ಮಿತ್ರರು ಸೂಚಿಸಿದಾಗ ಅವನು 'ಚಿತ್ರಕಲಾದೇವಿಯು ಬಹು ಹೊಟ್ಟೇಕಿಚ್ಚುಳ್ಳವಳು. ಅವಳಿಗೆ ಮತ್ತೊಬ್ಬ ಸವತಿಯು ಬಂದರಾಗುವುದಿಲ್ಲ' ಎಂದು ಉತ್ತರ ಕೊಟ್ಟನಂತೆ. ಅವನ ತರುವಾಯ ಎಷ್ಟು ಜನರು ಅಂತಹ ಅನುಭವವನ್ನುಳ್ಳವರಾಗಿದ್ದರು!"

ಮಿ. ಬ್ಯೂರೊಯವರು ವರ್ಣಿಸಿರುವ ಎಲ್ಲಾ ಬಗೆಯ ನಿರಂತರ ಬ್ರಹ್ಮಚರ್ಯೆಯನ್ನು ಸಾಧಿಸಿದ ನನ್ನ ಯೂರೋಪಿಯನ್ ಮಿತ್ರರ ಅನುಭವಗಳ ಉದಾಹರಣೆಯಿಂದ ಮೇಲೆ ಹೇಳಿದುದೆಲ್ಲವನ್ನೂ ತಾಳಿ ಹೊಂದಿಸಬಲ್ಲೆನು. ಹಿಂದೂಸ್ಥಾನದಲ್ಲಿ ಮಾತ್ರವೆ ಶೈಶವಾವಸ್ಥೆಯಿಂದ

ನಾವು ಮದುವೆಯ ವಿಚಾರವನ್ನು ಕೇಳುತ್ತಿರಬೇಕಾಗಿದೆ. ತಮ್ಮ ಮಕ್ಕಳ ಮದುವೆಯನ್ನು ಚೆನ್ನಾಗಿ ಮಾಡಬೇಕು. ಮತ್ತೆ ಅವರಿಗೆ ತಕ್ಕ ಆಸ್ತಿಯನ್ನು ಮಾಡಿಡಬೇಕು ಎಂಬೀ ಆಸೆಯೊಂದರ ಹೊರತು ಬೇರೆ ಆಲೋಚನೆಯು ತಂದೆತಾಯಿಗಳಿಗಿರುವುದಿಲ್ಲ. ಇವರಲ್ಲಿ ಮೊದಲನೆ ವಿಚಾರವು ಮನಸ್ಸನ್ನೂ ದೇಹವನ್ನೂ ಅಕಾಲ ಮುಪ್ಪಿಗೆ ಗುರಿಮಾಡುವುದು. ಎರಡನೆ ವಿಚಾರವು ನಮ್ಮಲ್ಲಿ ಸೋಮಾರಿತನವನ್ನು ಪ್ರೇರಿಸುವುದಲ್ಲದೆ ಅನೇಕ ಸಂದರ್ಭಗಳಲ್ಲಿ ನಮ್ಮನ್ನು ಕೇವಲ ಪರೋಪಜೀವಿಗಳಾಗಿ ಮಾಡುವುದು. ನಾವು ಇಂದ್ರಿಯ ನಿಗ್ರಹ ಮತ್ತು ಮನಃಪೂರ್ವಕವಾಗಿ ಕೈಕೊಳ್ಳುವ ದಾರಿದ್ರ್ಯವ್ರತದ ಸಾಧನೆಯ ಮಹಿಮೆಗಳನ್ನು ಉತ್ಪ್ರೇಕ್ಷಿಸಿ ಅವುಗಳಿಗೆ ಸ್ವರ್ಗದ ಗೌರವಗಳನ್ನು ಕೊಟ್ಟು, ಅವುಗಳು ಕೇವಲ **ಮಹಾತ್ಮರಿಗೂ ಯೋಗಿಗಳಿಗೂ** ಸಾಧ್ಯವಾದವುಗಳೆಂದೂ ಹೇಳಿ ಅವುಗಳನ್ನು ನಮ್ಮ ನಿತ್ಯ ಜೀವನ ಕ್ರಮದಿಂದ ತಳ್ಳಿಬಿಡುವೆವು ಆಗ ಕೇವಲ ಒಂದು ಮಣ್ಣಿನ ಕಟ್ಟೆಯ ಮಟ್ಟಕ್ಕೆ ತರಲ್ಪಟ್ಟ ಸಮಾಜದಲ್ಲಿ ನಿಜವಾದ ಮಹಾತ್ಮ್ಯೆಯಾಗಲಿ ಯೋಗವಾಗಲಿ ಇರಲಾರದೆಂಬುದನ್ನು ಮರೆತುಬಿಡುವೆವು. ಆಮೆಯಂತೆ ಸ್ಥಿಮಿತವಾಗಿಯೂ ನಿಧಾನವಾಗಿಯೂ ಸಂಚರಿಸುವ ಸದ್ಗುಣಕ್ಕಿಂತಲೂ ದುರ್ನೀತಿಯು ಮೊಲದಂತೆ ಬಲು ಬೇಗ ಸಂಚರಿಸುವುದೆಂಬ ತತ್ವಕ್ಕನುಸಾರವಾಗಿ ಪಾಶ್ಚಾತ್ಯ ದೇಶದ ಭೋಗಾಸಕ್ತತೆಯು ಮಿಂಚಿನ ವೇಗದಿಂದ ನಮ್ಮಲ್ಲಿಗೆ ಬಂದು ಅದರಲ್ಲಿರುವ ಹಲವು ಬಗೆಯ ಆಕರ್ಷಣಗಳಿಂದ ನಮ್ಮ ಕಣ್ಣು ಕುಕ್ಕಿ ಜೀವನದ ನಿಜಸ್ಥಿತಿಯನ್ನೆ ನಾವರಿಯದಂತೆ ಮಾಡಿಬಿಡುವುದು. ಪ್ರತಿನಿತ್ಯವೂ ನಮ್ಮ ತೀರಪ್ರದೇಶಗಳಲ್ಲಿ ಜಹಜುಗಳ ಮೂಲಕ ಬಂದು ಬೀಳುವ ಪಾಶ್ಚಾತ್ಯ ವ್ಯಾಪಾರ ವಸ್ತುಗಳನ್ನೂ ಪ್ರತಿ ನಿಮಿಷದಲ್ಲಿಯೂ ತಂತೀ ಸಮಾಚಾರದ ಮೂಲಕ ನಮಗೆ ತಿಳಿದು ಬರುವ ಪಾಶ್ಚಾತ್ಯರ ಪ್ರತಿಭೆಯನ್ನೂ ನೋಡಿ ನಾವು ಮನಃಪೂರ್ವಕವಾಗಿ ಕೈಕೊಂಡ ದಾರಿದ್ರ್ಯ ವ್ರತವು ಮಹಾಪಾತಕವೆಂತಲೂ ಬ್ರಹ್ಮಚರ್ಯವು ಲಜ್ಜೆಯನ್ನುಂಟುಮಾಡುವ ದುಶ್ಶೀಲನೆ ಎಂತಲೂ ಭಾವಿಸುತ್ತಿರುವೆವು. ಆದರೆ ನಾವು ಹಿಂದೂಸ್ಥಾನದಲ್ಲಿ ನೋಡುವುದು

ಮಾತ್ರವೇ ಸಮಗ್ರ ಪಾಶ್ಚಾತ್ಯ ಜೀವನವೆಂದು ಹೇಳಲಾಗುವುದಿಲ್ಲ. ದಕ್ಷಿಣಾಫ್ರಿಕಾದ ಬಿಳಿಯ ಜನರು ಅಲ್ಲಿ ನೆಲಸಿರುವ ಕೆಲವು ಹಿಂದಿಯರನ್ನು ನೋಡಿ ಹಿಂದಿಯರೆಲ್ಲರೂ ಅದೇ ಜೀವನಕ್ರಮವುಳ್ಳವರಾಗಿರುವರೆಂದು ನಿರ್ಣಯ ಮಾಡುವಂತೆ ನಮ್ಮ ದೇಶದಲ್ಲಿ ಪ್ರತನಿತ್ಯವೂ ಬಂದು ಇಳಿಯುತ್ತಿರುವ ಮಾನವರನ್ನೂ ಮತ್ತಿತರ ಪಾಶ್ಚಾತ್ಯ ವಸ್ತುಗಳನ್ನೂ ನೋಡಿ ನಾವು ಪಾಶ್ಚಾತ್ಯ ನಿರ್ಣಯ ವಿಚಾರವನ್ನು ಮಾಡುತ್ತಿರುವೆವು. ಆದರೆ ಪಾಶ್ಚಾತ್ಯ ದೇಶದಲ್ಲೂ ಕೂಡ ಚಿಕ್ಕದಾದರೂ ಅಕ್ಷಯ್ಯವಾಗಿರುವ ಪವಿತ್ರತೆ ಮತ್ತು ದೈವಿಕ ಶಕ್ತಿಯ ಹೊಂಡವೊಂದು ಇರುವುದು. ನಮಗೆ ತೋರುವ ಮೋಹದ ತೆರೆಯನ್ನು ಭೇದಿಸಿ ನೋಡಬಲ್ಲವರು ಮಾತ್ರ ಅದನ್ನು ನೋಡಬಹುದು. ಪಾಶ್ಚಾತ್ಯ ಮರುಭೂಮಿಯಲ್ಲೂ ಕೂಡ ಅಲ್ಲಲ್ಲಿ ಜಲಸಮೃದ್ಧಿಯಾದ ಸ್ಥಳಗಳು ಇರುವುವು. ಇಚ್ಛೆಯಿದ್ದವರು ಅವುಗಳಿಂದ ಜೀವನದ ಅತಿಶುದ್ಧವಾದ ಜಲವನ್ನು ಕುಡಿಯಬಹುದು. ಹಲವು ಸಂದರ್ಭಗಳಲ್ಲಿ ಕೇವಲ ದೇಶ ಅಥವಾ ತಮ್ಮ ಪ್ರಿಯ ಸಂಬಂಧಿಗಳೊಬ್ಬರ ಸೇವೆಯನ್ನು ಮಾಡಬೇಕೆಂಬ ಕಾರಣವೊಂದರಿಂದಲೆ ನೂರಾರು ಜನ ಸ್ತ್ರೀ ಪುರುಷರು ಯಾವ ಬಡಾಯಿಯನ್ನೂ ಬಡಿವಾರವನ್ನೂ ಕೊಚ್ಚಿಕೊಳ್ಳದೆ ಕೇವಲ ವಿನೀತಭಾವದಿಂದ ಬ್ರಹ್ಮಚರ್ಯೆಯನ್ನೂ ದಾರಿದ್ರ್ಯವ್ರತವನ್ನೂ ಕೈಗೊಂಡಿರುವರು ಹಲವು ಸಂಭರ್ಗಗಳಲ್ಲಿ ನಾವು ಆತ್ಮಭಾವದ ವಿಚಾರವಾಗಿ ಮಾತಾಡುವಾಗ ಅದು ನಮ್ಮ ನಿತ್ಯಜೀವನದ ಕ್ರಮಕ್ಕೆ ಸಂಬಂಧವುಳ್ಳದಾಗಿಲ್ಲವೆಂಬಂತೆಯೂ ಅದು ಹಿಮಾಲಯದ ಕಾಡುಗಳಲ್ಲಿ ಅಗೋಚರವಾಗಿರುವ ವಾನಪ್ರಸ್ಥಾಶ್ರಮಿಗಳು ಅಥವಾ ದುರ್ಗಮವಾದ ಹಿಮಾಲಯದ ಗುಹೆಗಳಲ್ಲಿ ಗುಪ್ತರಾಗಿರುವ ಕೆಲವು ಯೋಗಿಗಳಿಗೆ ಮಾತ್ರ ಅನ್ವಯಿಸುವುದೆಂಬಂತೆಯೂ ಹರಟುವೆವು. ನಮ್ಮ ನಿತ್ಯ ಜೀವನದ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡಲಾರದ ಮತ್ತು ಆದರೊಂದಿಗೆ ಯಾವ ಸಂಬಂಧವನ್ನೂ ಉಂಟಾಗಿರದ ಆತ್ಮಭಾವ ವಿಚಾರವು ಕೇವಲ ಶೂನ್ಯವಾದುದೆಂದು ಹೇಳಬೇಕು. ಪ್ರತಿ ವಾರದಲ್ಲಿಯೂ (ತರುಣ ಭಾರತ) **ಯಂಗ್ ಇಂಡಿಯ** ಪತ್ರಿಕೆಯು ಯಾರಿ

ಗೋಸ್ಕರ ಬರೆಯಲ್ಪಡುತ್ತಿದೆಯೊ ಅಂತಹ ಯುವಕ ಯುವತಿಯರು ತಮ್ಮ ದೌರ್ಬಲ್ಯವನ್ನು ದೂರಕ್ಕೋಡಿಸಿ ತಮ್ಮ ಸುತ್ತಮುತ್ತಣ ವಾತಾವರಣವನ್ನು ಪರಿಶುದ್ಧಗೊಳಿಸಬೇಕಾದಳೆ, ತಾವು ಯಾವಾಗಲೂ ಪವಿತ್ರವಾಗಿರುವುದು ಅವರ ಕರ್ತವ್ಯವೆಂದೂ ಇದುವರೆಗೆ ತಮಗೆ ದೊರೆತ ಶಿಕ್ಷಣದಿಂದ ಕಲ್ಪನೆಮಾಡುವಂತೆ ಅದು ಅನುಷ್ಠಾನಕ್ಕೆ ಅಸಾಧ್ಯವಾದುದಲ್ಲವೆಂತಲೂ ತಿಳಿದುಕೊಳ್ಳಬೇಕು.

ಮುಂದೆ ಮಿ. ಬ್ಯೂರೋಯುವರು ಹೇಳುವುದನ್ನು ಕೇಳುವ !—"ಆಧುನಿಕ ಸಮಾಜ ಶಾಸ್ತ್ರವು ನಮ್ಮ ನಡಾವಳಿಯ ವಿಕಾಸವನ್ನು ತೋರುವ ಪರಿಮಾಣದಿಂದಲೂ ಕ್ರಮಾಗತವಾದ ಅಧ್ಯಯನವು ಸಾಮಾಜಿಕ ಜೀವನಕ್ಷೇತ್ರವನ್ನು ಆಳವಾಗಿ ಪರೀಕ್ಷಿಸುವುದರಿಂದಲೂ ನಿರಂತರ ಬ್ರಹ್ಮಚರ್ಯೆಯ ಸಾಧನೆಯಿಂದ ಇಂದ್ರಿಯಗಳನ್ನು ಕಟ್ಟುಪಾಡುಗಳಿಗೆ ಒಳಗು ಮಾಡುವ ಮಹತ್ಕಾರ್ಯದಲ್ಲಿ ನಮಗೆ ದೊರೆಯುವ ಸಹಾಯದ ಬೆಲೆಯು ಚೆನ್ನಾಗಿ ಗೊತ್ತಾಗುವುದು. ಸಾಮಾನ್ಯರಾದ ಬಹುಪಕ್ಷದ ಜನರಿಗೆ ವಿವಾಹಿತ ಜೀವನವೇ ಸಾಮಾನ್ಯ ಜೀವನಸ್ಥಿತಿಯೆಂದು ಹೇಳುವುದಾದರೆ ಎಲ್ಲರೂ ಮದುವೆಯನು ಮಾಡಿಕೊಳ್ಳಲಾರರು. ನಾವು ಮೇಲೆ ಹೇಳಿದ ಅಪೂರ್ವ ಉದ್ಯೋಗದವರನ್ನು ಬಿಟ್ಟರೂ ಉಳಿದ ಜನರಲ್ಲಿ ಮೂರು ಬಗೆಯ ನೈಷ್ಠಿಕರೂ ಮದುವೆಮಾಡಿಕೊಳ್ಳಲಿಲ್ಲವೆಂಬ ನಿಂದೆಗೆ ಒಳಗಾಗಲಾರರು. ಅವರುಗಳಾರೆಂದರೆ—(೧) ಔದ್ಯೋಗಿಕ ಅಥವ ಆರ್ಥಿಕ ಕಾರಣಗಳಿಂದ ತಮ್ಮ ವಿವಾಹವನ್ನು ಮುಂದುವರಿಸಿರುವ ಯುವಕ ಯುವತಿಯರು; (೨) ತಮಗೆ ಸರಿಯಾದ ಜತೆಯು ಸಿಕ್ಕಲಿಲ್ಲವೆಂಬ ಕಾರಣದಿಂದ ನೈಷ್ಠಿಕ ಜೀವನ ಪ್ರೇರಿತರಾದವರು; (೩) ತಮ್ಮ ಶಾರೀರಕ ದಂದುಗಳು ಅವರ ಸಂತಾನಕ್ಕೆ ಹೋಗಬಾರದೆಂಬುದರ ದೆಸೆಯಿಂದ ವಿವಾಹದಿಂದ ವರ್ಜಿತರಾದವರು; ಮತ್ತೆ ಕೆಲವು ಸಂದರ್ಭಗಳಲ್ಲಿ ಮದುವೆಯ ವಿಚಾರವನ್ನೇ ಮಾಡದಂತೆ ಖಂಡಿತವಾದ ಬಂಧನಕ್ಕೆ ಒಳಗಾಗಿರುವವರು. ಹಾಗಾದರೆ ತಮ್ಮ ಸ್ವಂತ ಸುಖಕ್ಕಾಗಿಯೂ ಸಮಾಜದ ಹಿತಕ್ಕಾಗಿಯೂ ಅತ್ಯಾವಶ್ಯಕವಾಗಿದ್ದ ತ್ಯಾಗವನ್ನು ಮಾಡಿದ ಈ ಜನರು,

ದೈಹಿಕ ಮತ್ತು ಭೌತ್ತಿಕ ಶಕ್ತಿ ಸಂಪನ್ನರೂ ಅನುಕೂಲಸ್ಥರೂ ಆಗಿದ್ದ ಇತರ ಜನರು ತಮ್ಮ ಸಮಗ್ರ ಜೀವನವನ್ನು ಕೇವಲ ಕುಮಾರವ್ರತದಲ್ಲಿಯೇ ಸವೆಯಿಸುವೆವೆಂಬ ದೃಢಸಂಕಲ್ಪ ಮಾಡಿರುವುದನ್ನೂ ಅದರಂತೆ ಜೀವಿಸುತ್ತಿರುವುದನ್ನೂ ನೋಡಿ ತಮ್ಮ ತ್ಯಾಗಕ್ಕೆ ದುಃಖಪಡುವುದಕ್ಕೆ ಬದಲಾಗಿ ಹೆಚ್ಚು ಹರ್ಷವನ್ನು ಹೊಂದುವರೆಂಬುದು ಪ್ರಕಟವಾಗುವುದಿಲ್ಲವೆ? ಮನಃಪೂರ್ವಕವಾಗಿ ಅಥವಾ ಕಾರಣಾಂತರಗಳಿಂದ ಕುಮಾರವ್ರತವನ್ನು ಕೈಗೊಂಡ ಇವರುಗಳು ತಮ್ಮ ಆತ್ಮವನ್ನು ಸಂಪೂರ್ಣವಾಗಿ ದೇವರಿಗೂ ಪ್ರಾರ್ಥನೆಗೂ ಇತರ ಜೀವಿಗಳನ್ನು ತರಬೇತು ಮಾಡುವುದಕ್ಕೂ ಸಮರ್ಪಿಸಲು ನಿಶ್ಚಯಿಸಿರುವರು. ಅವರ ದೃಷ್ಟಿಯಿಂದ "ಬ್ರಹ್ಮಚರ್ಯೆಯು ಜೀವನದ ಅವನತಸ್ಥಿತಿಯಾಗಿರದೆ ಸಹಜಬುದ್ಧಿಯ ಮೇಲೆ ಮನುಷ್ಯನು ತನ್ನ ಇಚ್ಛಾಶಕ್ತಿಯ ಪ್ರಭುತ್ವವನ್ನು ತೋರುವ ಶ್ರೇಷ್ಠವಾದ ಪರಿಪೂರ್ಣಾವಸ್ಥೆಯಾಗಿದೆ' ಎಂದು ಅವರೇ ಸಾರುತ್ತಿರುವರು."

ಮುಂದೆ ಅದೇ ಗ್ರಂಥಕರ್ತರು ಹೀಗೆ ಹೇಳಿರುವರು:—"ಗೃಹಸ್ಥಾಶ್ರಮವನ್ನು ಸ್ವೀಕರಿಸುವುದಕ್ಕೆ ಇನ್ನೂ ವಯಸ್ಸಾಗದವರೆಂದು ಭಾವಿಸಲ್ಪಡುವ ಯುವಕಯುವತಿಯರಿಬ್ಬರಿಗೂ ಯೌವನ ಕಾಲವನ್ನು ಪವಿತ್ರಭಾವನೆಯಲ್ಲಿಯೂ ಇಂದ್ರಿಯನಿಗ್ರಹದಲ್ಲಿಯೂ ಕಳೆಯಬಹುದೆಂದು ಆಜೀವ ಬ್ರಹ್ಮಚರ್ಯೆಯು ಬೋಧಿಸುವುದು. ವಿವಾಹಿತರಿಗೆ ಅದು ದಾಂಪತ್ಯ ಧರ್ಮಸಂಬಂಧದಲ್ಲಿ ಅವರು (ವಿವಾಹಿತರು) ಸರಿಯಾಗಿ ಅನುಸರಿಸಬೇಕಾದ ಕಟ್ಟುಪಾಡಿನ ಕರ್ತವ್ಯವನ್ನೂ ಎಷ್ಟು ನ್ಯಾಯಸಮ್ಮತವಾಗಿದ್ದರೂ ತಮ್ಮ ಸ್ವಾರ್ಥಕ್ಕೆ ಎಡೆಗೊಡಕೂಡದೆಂಬುದನ್ನೂ ನೈತಿಕ ಉದಾರತ್ವದ ಮತ್ತು ಪ್ರಜಾಧರ್ಮದ ಮಹತ್ವದ ಬೇಡಿಕೆಗಳನ್ನು ಸಲ್ಲಿಸಲೆತ್ನಿಸಬೇಕೆಂಬುದನ್ನೂ ಬೋಧಿಸುವುದು."

ಫೋರ್ಸಟರ್ ಎಂಬಾತನು ಹೀಗೆ ಹೇಳಿರುವನು:—"ಆತ್ಮಸಮರ್ಪಣೆಯಿಂದ ಕೈಗೊಂಡ ಬ್ರಹ್ಮಚರ್ಯವ್ರತದ ದೀಕ್ಷೆಯು ವೈವಾಹಿಕ ಸ್ಥಿತಿಯನ್ನು ಕೀಳ್ಪಡಿಸುವುದಕ್ಕೆ ಬದಲಾಗಿ ದಾಂಪತ್ಯಪ್ರೇಮದ ಪಾವಿತ್ರ್ಯವನ್ನೇ ಸಮರ್ಥಿಸುತ್ತಿರುವುದು. ಮತ್ತೆ ಅದು ಮಾನವ

ಸ್ವಭಾವದ ಬಲವನ್ನೆದುರಿಸುವ ಮಾನವ ಸ್ವಾತಂತ್ರ್ಯ ಶಕ್ತಿಯ ಸಂಯುಕ್ತ ಸ್ವರೂಪವನ್ನು ತೋರುವುದು. ಅದು ಕಠಿಣ ಚಿತ್ತಲಹರಿಯ ವಿಚಾರದಲ್ಲಿಯೂ ವಿಷಯಸುಖದದಾಳಿಯ ವಿಚಾರದಲ್ಲಿಯೂ ಮನಸ್ಸಾಕ್ಷಿಯಂತೆ ಕೆಲಸಮಾಡುವುದು. ವಿವಾಹಿತರ ಜೀವನದಲ್ಲಿ ದಂಪತಿಗಳು ಗಹನವಾದ ಸ್ವಾಭಾವಿಕ ಆಕರ್ಷಣಗಳಿಗೆ ಬಲಿಬೀಳುವ ಪರಸ್ಪರ ಗುಲಾಮರಾಗಿಲ್ಲವೆಂದು ಎಚ್ಚರಿಕೆಯನ್ನು ಕೊಡಲು ಬ್ರಹ್ಮಚರ್ಯೆಯು ಒಂದು ರಕ್ಷಕದಂತಿರುವುದು. ಮತ್ತೆ ತಮ್ಮ ಸ್ವಭಾವ ಗುಣಗಳನ್ನು ಸ್ವಾಧೀನಪಡಿಸಿಕೊಳ್ಳಬಲ್ಲ ಶಕ್ತಿಯು ತಮ್ಮಲ್ಲಿರುವುದೆಂದು ತೋರಿ ಸ್ವತಂತ್ರ ವ್ಯಕ್ತಿಗಳಾಗಿ ವರ್ತಿಸಲು ದಂಪತಿಗಳಿಗೆ ಅದು ಸಹಾಯಕವಾಗುವುದು. ನಿರಂತರ ಬ್ರಹ್ಮಚರ್ಯೆಯು ಸ್ವಾಭಾವಿಕವಾದುದಲ್ಲ ಅಥವ ಅಸಾಧ್ಯವೆಂದು ಹೀಯಾಳಿಸುವರು ತಾವೇನು ಮಾಡುತ್ತಿರುವರೆಂಬುದನ್ನು ತಾವೇ ಅರಿಯದವರಾಗಿರುವರು. ಅವರು ಹಾಗೆ ಮಾತನಾಡುವಂತೆ ಮಾಡುವ ಅವರ ಆಲೋಚನೆಯ ಕ್ರಮವು, ಅವರ ಯುಕ್ತಿಗನುಸಾರವಾಗಿ ವೇಶ್ಯಾವೃತ್ತಿಯ ಅಥವಾ ಬಹುಪತ್ನೀತ್ವದ ಮಾರ್ಗವನ್ನನುಸರಿಸುವುದಾಗಿದೆಯೆಂಬುದನ್ನು ಅವರು ತಿಳಿಯಲಾರದವರಾಗಿರುವರು. ನಿಸರ್ಗದ ಬೇಡಿಕೆಯನ್ನು ನಿಗ್ರಹಿಸುವುದು ಅಷ್ಟು ದುರ್ಧರವಾಗಿದ್ದರೆ ದಾಂಪತ್ಯ ಜೀವನದಲ್ಲಿ ಪಾತಿವ್ರತ್ಯವನ್ನು ನಿರೀಕ್ಷಿಸುವುದು ಸಾಧ್ಯವೆ ? ಕೊನೆಗೆ ಎಷ್ಟೋ ದಾಂಪತ್ಯ ಜೀವನದಲ್ಲಿ ದಂಪತಿಗಳಲ್ಲೊಬ್ಬರ ಕಾಯಿಲೆಯಿಂದಲೊ ಅಥವಾ ಬೇರೆ ಬಗೆಯ ಅಶಕ್ತತೆಯಿಂದಲೊ ಅವರು ಕೆಲವು ತಿಂಗಳ ವರೆಗೂ ವರ್ಷಗಳ ವರೆಗೂ ಸಮಗ್ರ ಆಯುಸ್ಸು ಮುಗಿಯುವವರೆಗೂ ಬ್ರಹ್ಮಚರ್ಯ ಸಾಧನೆಯನ್ನು ಮಾಡಬೇಕಾಗಿ ಬಂದಿರುವ ಉದಾಹರಣೆಗಳೆಷ್ಟೊ ಇರುವುವೆಂಬುದನ್ನು ಅವರು ಮರೆಯುವರು. ಈ ಕಾರಣವೊಂದರ ಪೆಸೆಯಿಂದಲೆ ಪಾತಿವ್ರತ್ಯಕ್ಕೆ ಕೊಟ್ಟಿರುವ ಗೌರವದೊಂದಿಗೆ ಏಕಪತ್ನೀವ್ರತದ ಗೌರವವು ಹೆಚ್ಚುವುದು ಅಥವಾ ಕಡಿಮೆಯಾಗುವುದು.''

(೭)

ನಿರಂತರ ಬ್ರಹ್ಮಚರ್ಯದ ಮುಂದಿನ ಪ್ರಕರಣಗಳು ವಿವಾಹದ ಜೀವನದ ಕರ್ತವ್ಯವನ್ನೂ ಮತ್ತು ವಿವಾಹದ ಅವಿಚ್ಛೇದನತ್ವವನ್ನೂ ವರ್ಣಿಸುವವು. ಆ ಗ್ರಂಥಕರ್ತರು ನಿರಂತರ ಬ್ರಹ್ಮಚರ್ಯವು ಪರಮಪದವೆಂದು ಹೇಳುವರು.ಆದರೆ ಮದುವೆಯು ಕರ್ತವ್ಯವೆಂದು ಭಾವನೆಯಿರತಕ್ಕ ಸಾಮಾನ್ಯರಿಗೆ ಅದು ಸಾಧ್ಯವಾಗಿರುವುದಿಲ್ಲ. ದಾಂಪತ್ಯ ಜೀವನದ ಕಾರ್ಯಭಾಗಗಳನ್ನೂ ಅವಧಿ ನಿಯಮಗಳನ್ನೂ ಸರಿಯಾಗಿ ತಿಳಿದುಕೊಂಡರೆ ಗರ್ಭನಿರೋಧಕ ಸಾಧನೆಗಳ ಪರವಾದ ವಾದವು ನಿಂತುಹೋಗುವದೆಂದು ಅವರು ತೋರಿರುವರು. ಅಕ್ರಮವಾದ ನೈತಿಕ ಶಿಕ್ಷಣವೇ ಈಗಿರುವ ನೈತಿಕ ನಿಯಮೋಲ್ಲಂಘನೆಗೆ ಮೂಲಕಾರಣವಾಗಿದೆ. ವಿವಾಹದಂತಹ ಪವಿತ್ರ ಸಂಸ್ಕಾರವನ್ನು ಹೀಯ್ಯಾಳಿಸುವ ಪ್ರಸಿದ್ಧ ಲೇಖಕರ ಲೇಖನವನ್ನು ಈ ಗ್ರಂಥಕರ್ತರು ಖಂಡಿಸಿ ಹೀಗೆ ಬರೆದಿರುವರು :—" ನೈತಿಕ ಅನುಭವವೇ ಇಲ್ಲದ ಮತ್ತೆ ಹಲವು ಸಂದರ್ಭಗಳಲ್ಲಿ ನಿಜವಾದ ವಿದ್ಯಾತತ್ಪರತೆಯ ಅಭಾವದಿಂದ ಈ ಬಗೆಯ ಮಿಥ್ಯಾ ನೈತಿಕವಾದಿಗಳು ಮತ್ತು ಲೇಖಕರ ಈ ಅಭಿಪ್ರಾಯವು ನಮ್ಮ ಕಾಲದ ನಿಜವಾದ ಮಾನಸ ಶಾಸ್ತ್ರಜ್ಞರು ಮತ್ತು ಸಮಾಜ ಶಾಸ್ತ್ರಜ್ಞರ ಅಭಿಪ್ರಾಯಕ್ಕೆ ವಿರೋಧವಾಗಿರುವುದು ಮುಂದಣ ಪೀಳಿಗೆಗಳ ಸೌಭಾಗ್ಯವೆಂತಲೇ ಹೇಳಬೇಕು. ವೃತ್ತಪತ್ರಗಳು, ಕಾದಂಬರಿಗಳು ಮತ್ತು ನಾಟಕಶಾಲೆಗಳ ಅಬ್ಬರದಿಂದ ತುಂಬಿರುವ ಪ್ರಪಂಚಕ್ಕೂ ಮನೋವಿಕಾಸದ ಅಧ್ಯಯನದಿಂದಲೂ ಮಾನಸಿಕ ಮತ್ತು ಸಾಮಾಜಿಕ ಜೀವನದ ರಹಸ್ಯತತ್ವಗಳನ್ನು ವಿಶದೀಕರಿಸುವ ಅಧ್ಯಯನದಿಂದ ತುಂಬಿರುವ ಪ್ರಪಂಚಕ್ಕೂ ಈ ವಿಚಾರದಲ್ಲಿ ಸಂಪೂರ್ಣವಾದ ಸ್ನೇಹಭಂಗವುಂಟಾಗಿದೆ."

ಮಿ॥ ಬ್ಯೂರೊಯವರು ' ಫ್ರೀ ಲೌವ್ ' ಎಂಬ ಬೇಕಾದಾಗ ಬೇಕಾದ ಕಡೆಗೆ ಪ್ರೀತಿಯನ್ನು ತಿರಿಗಿಸುವ ಸ್ವತಂತ್ರ ಪ್ರಣಯವನ್ನು ತಿರಸ್ಕರಿಸಿರುವರು. ಮಾಡೆಸ್ಟಿ್ ಎಂಬ ಪ್ರಸಿದ್ಧ ಲೇಖಕನೊಂದಿಗೆ

ನೊಂದಿಗೆ ಏಕಾಭಿಪ್ರಾಯರಾಗಿ ಅವರ ಅಭಿಪ್ರಾಯವನ್ನು ಹೀಗೆ ಸೂಚಿಸಿರುವರು :—' ವಿವಾಹವು ಸ್ತ್ರೀ ಪುರುಷರ ಏಕೀಕರಣದ ಆಜೀವ ಸಹವಾಸದ ಕುರುಹು. ಅದು ದೈವಿಕ ಮತ್ತು ಮಾನವ ನಿಯಮದ ಹಕ್ಕುಗಳನ್ನು ತಿಳುಹಿಸುವುದಾಗಿರುವುದು. ವಿವಾಹವು ಕೇವಲ ಸಭ್ಯಸ್ಥಿಕೆಯ ಒಂದು ಒಪ್ಪಂದ ಮಾತ್ರವಾಗಿಲ್ಲ. ಅದು ಒಂದು ಪುಣ್ಯಸಂಸ್ಕಾರವೂ ನೈತಿಕ ಕರ್ತವ್ಯವೂ ಆಗಿದೆ. ಕಾಡುಮನುಷ್ಯನನ್ನೂ ಕೂಡ ಅದು ಎದೆಯೆಬ್ಬಿಸಿ ನಿಲ್ಲುವಂತೆ ಮಾಡುವುದು. ನ್ಯಾಯ ಸಮ್ಮತವಾಗಿ ವಿವಾಹಿತರಾದವರು ಬೇಕಾದ್ದನ್ನು ಮಾಡಲು ಸ್ವಾತಂತ್ರ್ಯವುಳ್ಳವರಾಗಿರುವರೆಂದು ಹೇಳುವುದು ದೊಡ್ಡ ತಪ್ಪು. ಒಂದುವೇಳೆ ಸತಿಪತಿಯರು ಸಾಮಾನ್ಯವಾಗಿ ಸಂತಾನೋತ್ಪಾದನೆಯ ವಿಚಾರದಲ್ಲಿ ನೈತಿಕ ನಿಯಮವನ್ನು ಗೌರವಿಸುವರೆಂದು ತಿಳಿದರೂ ಅವರ ಮನಸ್ಸಿಗೆ ಆನಂದವನ್ನುಂಟು ಮಾಡತಕ್ಕ ಇಂದ್ರಿಯೋಪಭೋಗಗಳಿಗೆ ಇತರ ವಿಧಾನಗಳನ್ನು ಕಲ್ಪಿಸುವುದು ನ್ಯಾಯಸಮ್ಮತವಾಗಲಾರದು. ಈ ನಿಷೇಧವು ಅವರಿಗೆ ಸಂಬಂಧಿಸಲ್ಪಟ್ಟಿರುವುದು. ಏಕೆಂದರೆ ಅವರ ವಿವಾಹದಿಂದ ಸಮಾಜವು ಪೋಷಿತವಾಗಿ ಅಭಿವೃದ್ಧಿಗೊಳ್ಳಬೇಕು. ಇಂದ್ರಿಯಗಳ ನೈಸರ್ಗಿಕ ಬೋಧೆಗೆ ಮದುವೆಯಿಂದ ಉಂಟಾಗತಕ್ಕ ಗಡುಸಾದ ಕಟ್ಟುತಡೆಗಳ ವ್ಯತಿಕ್ರಮಣಕ್ಕೆ ಸಹಾಯಕವಾಗುವ ನಿರಂತರನೂತನಾನುಕೂಲಗಳಿಂದ ನಿಜವಾದ ಪ್ರೇಮಕ್ಕೆ ಆಗಿಂದಾಗ್ಗೆ ಭಂಗಬರುವುದು. ವಿವಾಹ ಧರ್ಮದ ಮೇರೆಯಿಂದ ಬಂಧಿತವಾದಂತೆ ಜಾಗರೂಕತೆಯಿಂದ ವಿಷಯವಾಸನೆಗಳನ್ನು ತೃಪ್ತಿಗೊಳಿಸುವುದರ ಮೂಲಕವೇ ಈ ಅಪಾಯವನ್ನು ಉಚ್ಚಾಟನೆ ಮಾಡಬಹುದು ' ಸೇಲ್ಸಿನ ಸೇಂಟ್ ಫ್ರಾನ್ಸಿಸ್ ಎಂಬಾತನು ಹೀಗೆ ಹೇಳಿರುವನು ;—" ಕ್ರೂರವಾದ ಔಷಧಗಳನ್ನು ತೆಗೆದುಕೊಳ್ಳುವುದು ಯಾವಾಗಲೂ ಅಪಾಯಕರ. ಏಕೆಂದರೆ ಅವುಗಳನ್ನು ಸರಿಯಾಗಿ ಮಾಡಿರದಿದ್ದರೂ ಅಥವಾ ನಿಯಮಿತಕ್ಕೆ ಪರಿಣಾಮಕ್ಕಿಂತ ಅವುಗಳನ್ನು ಹೆಚ್ಚಾಗಿ ತೆಗೆದುಕೊಂಡರೂ ಅವುಗಳಿಂದ ವಿಶೇಷ ಅಪಾಯವು ಸಂಭವಿಸುವುದು. ಕಾಮೋಲ್ಬಣೆಗೆ ಕೇವಲ ಉಪಾಯವಾಗಿ ಮದುವೆಯೆಂಬ ಸಂಸ್ಕಾರವು ಅನುಗ್ರಹಪೂರ್ವಕ ಸಂಸ್ಥಾಪಿಸ

ಲ್ಪಟ್ಟಿರು : ದು. ಅದು ನಿಸ್ಸಂದೇಹವಾಗಿಯೂ ಕಾಮಾಚಾರಕ್ಕೆ ಬಹು ಒಳ್ಳೆಯ ಉಪಾಯವಾಗಿದೆ. ಆದರೆ ಅದು ಬಹು ಪ್ರಚಂಡವಾದ ಉಪಾಯ. ಆದುದರಿಂದ ವಿವೇಚನೆಯಿಲ್ಲದೆ ಅದನ್ನು ಉಪಯೋಗಿಸುವುದಾದರೆ ಅದರಿಂದ ವಿವೇಚನೆಯಿಲ್ಲದೆ ಆದನ್ನು ಉಪಯೋಗಿಸುವುದಾದರೆ ಅದರಿಂದ ವಿಶೇಷ ಭಯಂಕರ ಪರಿಣಾಮ ಉಂಟಾಗುವದು.

ಹೀಗೆ ಹೇಳಿದನಂತರ ವಿವಾಹವನ್ನು ಬೇಕಾದಾಗ ಮಾಡಿಕೊಳ್ಳುವದು, ಬೇಕಾದಾಗ ವಿಚ್ಛೇದನ ಮಾಡುವದು ಅಥವಾ ಅದರಿಂದ ಮುಂದಾಗುವ ಪರಿಣಾಮದ ಭಾರವನ್ನು ವಹಿಸದೇ ಎಲ್ಲರಿಗೂ ತಿಳಿಯುವಂತೆ ಸಂಶಯವಿಲ್ಲದ ಜೀವನಕ್ರಮವನ್ನನುಸರಿಸುವದು ಈ ವೈಯಕ್ತಿಕ ಸ್ವಾತಂತ್ರ್ಯ ಸಿದ್ಧಾಂತವನ್ನು ಈ ಗ್ರಂಥಕರ್ತರು ಚೆನ್ನಾಗಿ ಖಂಡಿಸಿರುವರು. ಮುಂದೆ ಅವರು ಏಕಪತ್ನಿವ್ರತವನ್ನೆ ಸಮರ್ಥಿಸಿ ಹೀಗೆ ಹೇಳಿರುವರು ; "ವ್ಯಕ್ತಿಗೆ ಮನಸ್ಸು ಬಂದಾಗ ಮದುವೆಮಾಡಿಕೊಳ್ಳುವ ಅಥವಾ ಸ್ವಾರ್ಥದಿಂದ ಬ್ರಹ್ಮಚಾರಿಯಾಗಿ ಬಾಳುವ ಸ್ವಾತಂತ್ರ್ಯವಿದೆಯೆಂದು ಹೇಳುವದು ಸುಳ್ಳು. ವಿವಾಹವಿಚ್ಛೇದನವನ್ನು ಬಯಿಸುವ ಸ್ವಾತಂತ್ರ್ಯವು ದಂಪತಿಗಳಿಗಿದೆಯೆಂದು ಹೇಳುವದೂ ನಿರಾಧಾರವಾದುದೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಅವರು ಪರಸ್ಪರ ಆರಿಸುವಾಗ ಮಾತ್ರ ಸ್ವಾತಂತ್ರ್ಯವಿರುವದು. ಆಗ ತಾನು ಪ್ರವೇಶಿಸಲಿರುವ ನವಜೀವನದ ಜವಾಬ್ದಾರಿಯನ್ನು ಯಾರೊಂದಿಗೆ ವಹಿಸಬೇಕಾಗಿರುವದೋ ಅಂತಹಳನ್ನು ಅಥವಾ ಅಂತಹನನ್ನು ಚೆನ್ನಾಗಿ ಯೋಚನೆಮಾಡಿ, ಪೂರ್ಣಜ್ಞಾನದಿಂದ ಆರಿಸಬೇಕಾಗಿರುವದು. ಆದರೆ ಮದುವೆಯಾದ ಕೂಡಲೆ ದಂಪತಿಗಳಿಬ್ಬರಿಂದ ಆಚರಿಸಲ್ಪಟ್ಟ ಕ್ರಿಯೆಯಿಂದ ಬಹುದೂರದ ವರೆಗೆ ಹಲವೆಡೆಗಗಳಲ್ಲಿ ಅಗಣನೀಯವಾದ ಪರಿಣಾಮಗಳು ಉಂಟಾಗುವವು. ಈಗಣಂತಹ ಕ್ರಾಂತಿಕಾರಕ ವ್ಯಕ್ತಿತ್ವ ಪ್ರತಿಪಾದನೆಯ ಕಾಲದಲ್ಲಿ ಈ ಪರಿಣಾಮಗಳು ಆ ದಂಪತಿಗಳಿಗೆ ಗೋಚರವಾಗದಿರಬಹುದು. ಆದರೆ ಗೃಹಸ್ಥಾಶ್ರಮದ ಅಡಿಗಲ್ಲು ಸಡಿಲವಾದ ಕೂಡಲೆ, ನಿಶ್ಚಿತವಾದ ಏಕ

ಪತ್ನೀವ್ರತದ ಹಿತಕರವಾದ ರಸ್ತೆಗೆ ಬದಲಾಗಿ ಗಳಿಗೆಗೊಂದು ಸ್ವರೂಪ ವನ್ನು ತಾಳುವ ಇಂದ್ರಿಯ ತೃಷ್ಣೆಯ ಮನಶ್ಚಾಂಚಲ್ಯವು ತಲೆದೋರಿದ ಕೂಡಲೆ ಅದರಿಂದ ಸಮಗ್ರಸಮಾಜವು ಗುರಿಯಾಗುವ ಕ್ರೂರತರ ಸಂಕಷ್ಟಗಳಿಂದ, ಮೇಲೆಹೇಳಿದ ಪರಿಣಾಮಗಳ ಮಹತ್ವವು ಸ್ಪಷ್ಟವಾಗಿ ವ್ಯಕ್ತವಾಗುವದು. ಈ ಬಗೆಯ ಅನಿಶ್ಚಿತ ಅನುನಾದಗಳ ಮತ್ತು ಸೂಕ್ಷ್ಮಸಂಬಂಧಗಳ ಅನುಭ ಉಳ್ಳವನು ಉತ್ಕ್ರಾಂತಿಯ ಸಾರ್ವತ್ರಿಕ ನಿಯಮಕ್ಕೆ ಒಳಗಾಗಿರುವ ಎಲ್ಲಾ ಮಾನವ ಸಂಸ್ಥೆಗಳಂತೆಯೇ, ವಿವಾಹ ಸಂಸ್ಥೆಯು ಕೂಡ ಕ್ರಮೇಣ ಅವಸ್ಥಾಂತರವನ್ನು ಹೊಂದುವದು ಅತ್ಯಾವಶ್ಯಕವೆಂದು ತಿಳಿಯುವನು. ಏಕೆಂದರೆ ಆ ಮಾರ್ಗದಿಂದಾಗುವ ಪ್ರಗತಿಯಿಂದ ವೈವಾಹಿಕ ಬಂಧನವು ಕೊನೆಗೆ ಸ್ಥಿರತ್ವವನ್ನು ತಾಳುವದು. ದಂಪತಿಗಳಿಬ್ಬರ ಪರಸ್ಪರ ಒಪ್ಪಿಗೆಯಿಂದ ವಿವಾಹವಿಚ್ಛೇದನವು ಅಪೇಕ್ಷಿಸಲ್ಪಟ್ಟಾಗ ವಿವಾಹವಿಚ್ಛೇದನ ಮಾಡಕೂಡದೆಂಬ ನಿಯಮವಿರುದ್ಧವಾಗಿ ಈಗ ಮುಂದೂಡಲ್ಪಟ್ಟಿರುವ ಅನೇಕ ಅಭಿಯೋಗಗಳು, ಈಗ ವಿರೋಧಿಸಲ್ಪಡುವ ನಿಯಮಕ್ಕೆ ಸಮಾಜವು ಏನು ಬೆಲೆ ಕಟ್ಟುವುದೆಂಬುದನ್ನು ಸ್ಪಷ್ಟವಾಗಿ ವ್ಯಕ್ತಗೊಳಿಸುವವು -- ಕೆಲವು ಶತಮಾನಗಳ ವರೆಗೆ ಅದರಿಂದುಂಟಾಗುವ ಸಾಮಾಜಿಕ ಹಿತವನ್ನು ಗಣನೆ ಮಾಡದೆ ಅದು ಕೇವಲ ಧಾರ್ಮಿಕಶಿಸ್ತಿನ ಒಂದು ಆಜ್ಞೆಯೆಂದು ಭಾವಿಸಲ್ಪಟ್ಟಿದ್ದ ಈ ನಿಯಮವು ಸಮಗ್ರ ಸಮಾಜಕ್ಕೆ ಅರೋಗ್ಯಕರವಾಗಿರುವಂತೆಯೇ ವ್ಯಕ್ತಿಗೆ ಕೂಡ ಹಿತಕರವಾದುದೆಂಬ ತತ್ವವಾಗಿ ಕಾಲಕ್ರಮೇಣ ಪರಿಣಮಿಸುವುದು "

"ವಿಚ್ಛೇದನವನ್ನೊಪ್ಪದ ವಿವಾಹನಿಯಮವು ಕೇವಲ ಸ್ವಚ್ಛಂದವಾದ ಶೃಂಗಾರದಂತಿಲ್ಲ. ಅದಕ್ಕೆ ಬದಲಾಗಿ ಅದು ವ್ಯಕ್ತಿಯ ಮತ್ತು ಏಕೀಕೃತ ಸಾಮಾಜಿಕ ಜೀವನದ ಬಹುಸೂಕ್ಷ್ಮವಾದ ಒಂದು ಬಗೆಯ ಯಂತ್ರರಚನೆಯೊಂದಿಗೆ ಸಂಬಂಧಿಸಿರುವುದೆಂದು ತಿಳಿಯಬೇಕು. ಜನರೆಲ್ಲರೂ ಉತ್ಕ್ರಾಂತಿಯ ವಿಚಾರವಾಗಿ ಮಾತನಾಡುವವರಿಂದ ಅವರು ಅಪೇಕ್ಷಿಸುವ ಈ ಅನಿಶ್ಚಿತ ಜಾತೀಯ ಪ್ರಗತಿಯು ಯಾವುದರಿಂದ ಸಾಧ್ಯವಾಗುವುದೆಂದು ಕೇಳಬಹುದು. ಫೋರ್‍ಸ್ಟರ್ ಎಂಬಾತನು

ಹೀಗೆ ಬರೆದಿರುವನು :—' ಜವಾಬ್ದಾರಿಯ ಸರಿಯಾದ ತಿಳುವಳಿಕೆ, ಮನಃಪೂರ್ವಕವಾಗಿ ತಾನಾಗಿಯೇ ಶಿಸ್ತನ್ನನುಸರಿಸುವಂತೆ ವ್ಯಕ್ತಿಗೆ ಕೊಡುವ ಶಿಕ್ಷಣ, ಸ್ವಾರ್ಥನಿಗ್ರಹ, ತಾಳ್ಮೆ ಮತ್ತು ತ್ಯಾಗ, ಗುಣಗಳ ಬೆಳವಣಿಗೆ, ವಿಚ್ಛೇದನಕ್ಕೆ ಕಾರಣವಾದ ಭಾವನೆಗಳು ಮತ್ತು ಕ್ಷಣಿಕ ಮನಶ್ಚಾಂಚಲ್ಯದಿಂದುಂಟಾಗುವ ಪ್ರೇರಣೆಗಳಿಗೆ ವಿರುದ್ಧವಾದ ಮನೋವೃತ್ತಿಯನ್ನು ತಳೆಯುವದು—ಇವುಗಳೆಲ್ಲವೂ ಮಾನವನ ಅಂತರ್ಜೀವನದ ಅವಯವಗಳಾಗಿರುವವು. ಎಲ್ಲಾ ಬಗೆಯ ಶ್ರೇಷ್ಠ ಸಾಮಾಜಿಕ ಸಂಸ್ಕೃತಿಯ ಪೂರ್ಣ ಮತ್ತು ಶಾಶ್ವತ ಅವಸ್ಥೆಯೇ ಈ ಜೀವನವಾಗಿದೆ ಎಂದು ನಾವು ತಿಳಿಯಬಹುದು. ಆದುದರಿಂದ ಆರ್ಥಿಕಸ್ಥಿತಿಯಿಂದ ಉಂಟಾಗಬಹುದಾದ ದೊಡ್ಡ ಬದಲಾವಣೆಗಳಲ್ಲಿ ಸಂಭವಿಸಬಹುದಾದ ಎಲ್ಲಾ ಬಗೆಯ ಅವ್ಯವಸ್ಥೆಯಿಂದಲೂ ಇದು ದೂರವಾಗಿರುವದು. ನಿಜವಾಗಿ ಹೇಳುವದಾದರೆ ಆರ್ಥಿಕ ಪ್ರಗತಿಯು ಸಾಮಾನ್ಯ ಸಾಮಾಜಿಕ ಪ್ರಗತಿಯೊಂದಿಗೆ ವಿಶೇಷ ಸಂಬಂಧವನ್ನುಳ್ಳುದಾಗಿರುವದು. ಏಕೆಂದರೆ ಆರ್ಥಿಕ ಭದ್ರತೆಯೂ ಅದರ ಏಳಿಗೆಯೂ ಕೊನೆಗೆ ನಮ್ಮ ಸಾಮಾಜಿಕ ಸಹಕಾರದ ಅಂತಶ್ಶುದ್ಧಿಯನ್ನೂ ನಿಷ್ಠೆಯನ್ನೂ ಅವಲಂಬಿಸಿರುವದು. ಈ ಮೂಲತತ್ತ್ವವನ್ನು ಅಲಕ್ಷಿಸುವ ಪ್ರತಿಯೊಂದು ಆರ್ಥಿಕರೂಪಭೇದವೂ ಸ್ವನಿಂದ್ಯವಾದುದು. ಆದುದರಿಂದ ನಾವು ಈಗಲೇ ಇಂದ್ರಿಯೋಪಭೋಗದ ಹಲವು ವಿಧಾನಗಳ ಸಂಪೂರ್ಣ ಯೋಗ್ಯತೆಯನ್ನು ನೈತಿಕ ಮತ್ತು ಸಾಮಾಜಿಕ ದೃಷ್ಟಿಯಿಂದ ತಿಳಿಯಲು ಇಚ್ಛಿಸಿದರೆ ಮುಂದೆ ಹೇಳುವ ಪ್ರಶ್ನೆಯು ನಿಷ್ಕರ್ಷಕವಾಗುವದು. ನಮ್ಮ ಸಮಗ್ರ ಸಾಮಾಜಿಕ ಜೀವನವನ್ನು ದೃಢಗೊಳಿಸಿ ಬಲಪಡಿಸಬೇಕಾದರೆ ಯಾವ ಉಪಾಯವು ಶ್ರೇಷ್ಠವಾಗಿದೆ? ಜೀವನದ ವಿವಿಧಾವಸ್ಥೆಗಳಲ್ಲಿ ಜವಾಬ್ದಾರಿಯ ಭಾವನೆಯನ್ನು ಆತ್ಮನಿಗ್ರಹ ಮತ್ತು ಸಮರ್ಪಣೆಯನ್ನು ಹೆಚ್ಚಿಸುವುದಕ್ಕೂ ನಿಯಮಾತೀತವಾದ ಸ್ವಾರ್ಥ ಮನಶ್ಚಾಂಚಲ್ಯದಿಂದುಂಟಾಗುವ ಕ್ಷುಲ್ಲಕಪ್ರೇರಣೆಯನ್ನು ವಿಶೇಷ ಪರಿಣಾಮಕರವಾದ ರೀತಿಯಲ್ಲಿ ನಿಗ್ರಹಿಸುವುದಕ್ಕೂ ಯಾವ ಉಪಾಯದಲ್ಲಿ ಶಕ್ತಿಯಿರುವುದು ? ಈ ವಿಚಾರವನ್ನು ಈ ದೃಷ್ಟಿಕೋನ

ದಿಂದ ನೋಡಿದರೆ ಏಕಪತ್ನೀ ವ್ರತವು ಅದರ ಸಾಮಾಜಿಕ ಮತ್ತು ಬೋಧಪ್ರದ ಯೋಗ್ಯತೆಯಿಂದ, ಘನತರವಾದ ಉನ್ನತಿಯನ್ನೈದಿದ ನಾಗರಿಕತೆಯ ಶಾಶ್ವತ ಪಿತೃಧನದ ಒಂದು ಅಂಗವಾಗಿ ಪರಿಣಮಿಸುವುದರಲ್ಲಿ ಸಂದೇಹವೇ ಇಲ್ಲ. ಮತ್ತು ನಿಜವಾದ ಪ್ರಗತಿಯಿಂದ ವಿವಾಹ ಬಂಧನವು ಸಡಿಲವಾಗುವದಕ್ಕೆ ಬದಲಾಗಿ ಗಟ್ಟಿಯೇ ಆಗುವುದು. ...ಸಾಮಾಜಿಕ ಜೀವನಕ್ಕೆ ಬೇಕಾಗುವ ಎಲ್ಲಾ ಮಾನವ ಸನ್ನಾಹಗಳಿಗೂ ಎಂದರೆ ಜವಾಬ್ದಾರಿ ಸಹಾನುಭೂತಿ, ದಯೆ, ಆತ್ಮಸಂಯಮ ಮತ್ತು ಅನ್ಯೋನ್ಯಭಾವನೆಗಳ ಸನ್ನಾಹಗಳಿಗೆ ಕುಟುಂಬವೇ ಕೇಂದ್ರವಾದಿರುವದು ಕುಟುಂಬ ಜೀವನವು ಮಾತ್ರ ಈ ಕೇಂದ್ರಸ್ಥಾನವನ್ನಲಂಕರಿಸಬಲ್ಲುದು. ಏಕೆಂದರೆ ಅದು ಆಜೀವಸಂಬಂಧವುಳ್ಳದ್ದು. ಈ ದೃಢತೆಯ ದೆಸೆಯಿಂದಲೇ ಬೇರೆ ವಸ್ತುಗಳಿಗಿಂತಲೂ ಸಾಮಾನ್ಯ ಕುಟುಂಬ ಜೀವನವೇ ದೃಢತರವಾಗಿಯೂ ಹೆಚ್ಚು ಸ್ಥಿರವಾಗಿಯೂ ಮಾನವರ ಪರಸ್ಪರ ಸಂಬಂಧಕ್ಕೆ ವಿಶೇಷ ಅರ್ಹವಾದುದಾಗಿಯೂ ಇರುವದು. ಎಲ್ಲ ಮಾನವ ಸಾಮಾಜಿಕ ಜೀವನಕ್ಕೂ ಏಕಪತ್ನೀ ವ್ರತವು ಆತ್ಮಸ್ವರೂಪವಾಗಿದೆ ಎಂದು ಹೇಳಬಹುದು.

ಆಗಸ್ಟ್ ತಾಮ್ಸ್ ಎಂಬಾತನು ಹೀಗೆ ಬರೆದಿರುವನು :—“ನಮ್ಮ ಹೃದಯವು ವಿಶೇಷ ಚಂಚಲತ್ವವನ್ನುಳ್ಳದು. ಅದರ ಹೊಯಿದಾಟವನ್ನೂ ಚಂಚಲತೆಯನ್ನೂ ಅಧೀನವಲ್ಲಿಟ್ಟುಕೊಳ್ಳಲು ಸಮಾಜವು ಮಧ್ಯಸ್ತಿಕೆ ಮಾಡಬೇಕಾಗಿರುವುದು. ಇಲ್ಲವಾದರೆ ಆ ಹೊಯಿದಾಟ ಮತ್ತು ಚಂಚಲತೆಯಿಂದ ಮಾನವ ಜೀವನವು ಅವನತಿಯನ್ನೈದಿ ಅದೊಂದು ಕೇವಲ ಅಯೋಗ್ಯವಾದ ಗುರಿಯಿಲ್ಲದ ಅನುಭವ ಸಮೂಹವೆನಿಸುತ್ತಿದ್ದಿತು.”

ಡಾಕ್ಟರ್ ಟೌಲ್‌ಔಸ್ ಎಂಬಾತನು ಈ ರೀತಿಯಾಗಿ ಬರೆದಿರುವನು :—“ಪ್ರೇಮದ ನಿಸರ್ಗ ಬೋಧೆಯು ಒಂದು ಬಗೆಯ ದುಷ್ಪ್ರಭುತ್ವವನ್ನು ಮಾಡುವುದರಿಂದ ಅದನ್ನು ಯಾವ ರೀತಿಯಿಂದಲಾದರೂ ತೃಪ್ತಿಪಡಿಸಬೇಕೆಂದು ಹೇಳುವುದು ದಾಂಪತ್ಯ ಸುಖವನ್ನು ಕೆಡಿಸುವ ಒಂದು ಕಟ್ಟು ಕಥೆಯಾಗಿದೆ ...... ಯಾವಾಗಲೂ ಹೆಚ್ಚುತ್ತಿರುವ ಅವನ

ಕಾಂಕ್ಷೆಗಳ ಸ್ವಾತಂತ್ರ್ಯವೇ ಮನುಷ್ಯನ ಸ್ವಭಾವದ ಲಕ್ಷಣವೂ ಅವನ ವಿಕಾಸವನ್ನು ತೋರುವ ಕುರುಹೂ ಆಗಿರುವುದು. ಶಿಶುವು ತನ್ನ ಸ್ಥೂಲತರ ಆಕಾಂಕ್ಷೆಗಳನ್ನು ಸ್ವಾಧೀನಪಡಿಸಿಕೊಳ್ಳಲು ಕಲಿಯುವುದು. ಪ್ರೌಢನು ತನ್ನ ಇಂದ್ರಿಯಗಳನ್ನು ನಿಗ್ರಹಿಸುವುದನ್ನೂ ಕಲಿಯುವನು. ಈ ಬಗೆಯಾದ ಸುಶಿಕ್ಷಣದಿಂದ ತರಬೇತು ಮಾಡುವ ವಿಧಾನವು ಕೇವಲ ಕಾಲ್ಪನಿಕವಾದುದೂ ಅಲ್ಲ. ಅಥವಾ ಅನುಷ್ಠಾನಕ್ಕೆ ಅಸಾಧ್ಯವಾದುದೂ ಅಲ್ಲ. ಏಕೆಂದರೆ ನಮ್ಮ ಸ್ವಭಾವವು ವಿಶೇಷವಾಗಿ ನಮ್ಮ ಚಿತ್‌ಶಕ್ತಿಯ ಗತಿಗೆ ಅಧೀನವಾಗಿರಬೇಕಾಗಿರುವುದು ಪ್ರಕೃತಿ ಸ್ವಭಾವವೆಂದು ಹೇಳುವುದು ಒಂದು ಬಗೆಯ ಮನೋ ದೌರ್ಬಲ್ಯವಾಗಿರುವುದು. ನಿಜವಾಗಿ ಬಲಿಷ್ಠನಾದ ಮನುಷ್ಯನು ತನ್ನ ಶಕ್ತಿಯನ್ನು ಸರಿಯಾದ ಸಮಯದಲ್ಲಿ ಉಪಯೋಗಿಸಬೇಕೆಂಬುದನ್ನು ಬಲ್ಲವನಾಗಿರುವನು."

## (೮)

ಈಗ ಈ ಲೇಖನ ಮಾಲೆಗಳನ್ನು ಮುಗಿಸುವ ಸಮಯವು ಒಂದಿದೆ. ಮಾನವ ಜಾತಿಯು ಸಂಪೂರ್ಣವಾಗಿ ನಾಶವಾಗದಿರಬೇಕಾದರೆ ಗರ್ಭನಿರೋಧ ಮಾಡಬೇಕೆಂಬ ವಾದದಿಂದಲೂ ಮಿತಿಮೀರಿದ ಜನಸಂಖ್ಯೆಯ ವಿಚಾರವಾಗಿ ತನ್ನ ಸಿದ್ಧಾಂತದಿಂದಲೂ ತನ್ನ ಕಾಲದ ಜನರನ್ನು ಗಾಬರಿಗೊಳಿಸಿದ್ದ ಮಾಲ್‌ಥೂಸ್ ಎಂಬಾತನ ತತ್ವವನ್ನು ಮಿ ಬ್ಯೂರೊಯವರು ಹೇಗೆ ಪರೀಕ್ಷಿಸಿರುವರು ಎಂಬುದನ್ನು ನಾವು ನೋಡಬೇಕಾದ ಅವಶ್ಯಕತೆ ಇಲ್ಲ. ಆದರೆ ಮಾಲ್‌ಥೂಸ್ ತತ್ವವಾದಿಗಳು ಬ್ರಹ್ಮಚರ್ಯವನ್ನು ಪ್ರತಿಪಾದಿಸದೆ ಪಾಶವಿಕ ಇಂದ್ರಿಯ ಸುಖದ ಮುಂದಿನ ಪರಿಣಾಮಗಳನ್ನು ತಡೆಗಟ್ಟುವದಕ್ಕೆ ರಾಸಾಯನಿಕ ಮತ್ತು ಯಾಂತ್ರಿಕ ಸಾಧನೆಗಳ ಪ್ರಯೋಜನವನ್ನು ಸಮರ್ಥಿಸಿರುವರು. ಮಿ॥ ಬ್ಯೂರೊಯವರು ನೈತಿಕಸಾಧನದಿಂದ ಎಂದರೆ ಆತ್ಮ ಸಂಯಮದಿಂದ ಗರ್ಭನಿರೋಧಮಾಡುವ ತತ್ವವನ್ನು ಸ್ವೀಕರಿಸುವುದಲ್ಲದೆ, ಅದಕ್ಕಾಗಿ ಉಪಯೋಗಿಸುವ ರಾಸಾಯನಿಕ ಮತ್ತು

ಯಾಂತ್ರಿಕ ಸಾಧನಗಳನ್ನು ಅವರು ತಿರಸ್ಕರಿಸಿ ಬಲವಾಗಿ ಖಂಡಿಸಿರು
ವರು. ಅನಂತರ ಅವರು ಶ್ರಮಜೀವಿಗಳ ಎಂದರೆ ಕೂಲಿಗಾರರ
ಸ್ಥಿತಿಯನ್ನೂ ಅದರಲ್ಲಾಗುವ ಜನಸಂಖ್ಯೆಯ ಪರಿಣಾಮವನ್ನೂ ಚೆ
ನ್ನಾಗಿ ವಿವೇಚಿಸಿ, ಮಾನವ ಜಾತಿಯ ಹಿತ ಮತ್ತು ವೈಯಕ್ತಿಕ
ಸ್ವಾತಂತ್ರ್ಯದ ಹೆಸರಿನಲ್ಲಿ ಆಚರಿಸಲ್ಪಡುತ್ತಿರುವ ಬಹು ಭಯಂಕರ
ವಾದ ಅನೈತಿಕ ಕೃತ್ಯಗಳ ನಿರೋಧವನ್ನೂ ಹೇಗೆ ಮಾಡಬೇಕೆಂದು
ವಿಮರ್ಶಿಸಿರುವರು. ಆದಕ್ಕಾಗಿ ಅವರು ಸಾರ್ವಜನಿಕ ಅಭಿಪ್ರಾಯ
ವನ್ನು ಮಾರ್ಗದರ್ಶನದಿಂದ ಕಟ್ಟುಪಾಡಿಗೊಳಗುಮಾಡುವ ಪ್ರಯತ್ನ
ವನ್ನು ಮಾಡಬೇಕೆಂದೂ ಸರಕಾರವು ಈ ವಿಚಾರದಲ್ಲಿ ಕೈ ಹಾಕಬೇ
ಕೆಂತಲೂ ಕೊನೆಗೆ ಧಾರ್ಮಿಕ ಜೀವನವನ್ನು ಜಾಗ್ರತೆ ಬರಮಾಡಬೇ
ಕೆಂತಲೂ ಸೂಚಿಸಿರುವರು. ಸಾಮಾನ್ಯ ವಿಧಾನಗಳಿಂದ ನೈತಿಕ
ದಿವಾಳಿಯನ್ನು ಎದುರಿಸುವುದಾಗಲಿ ನಿರೋಧಿಸುವುದಾಗಲಿ ಸಾಧ್ಯ
ವಾಗಲಾರದು. ಅನೈತಿಕತ್ವವು ಒಂದು ಬಗೆಯ ದೌರ್ಬಲ್ಯ, ಮೂಢ
ವಿಶ್ವಾಸ ಅಥವಾ ಅದೇ ನೈತಿಕತ್ವ ಎಂದು ಸಾಧಿಸುವಾಗಲಂತೂ
ಅದರ ನಿರೋಧವು ಅಸಾಧ್ಯವೇ ಸರಿ. ಏಕೆಂದರೆ ಗರ್ಭನಿರೋಧಕ
ಸಾಧನವಾದಿಗಳು ಬ್ರಹ್ಮಚರ್ಯವನ್ನು ಖಂಡಿಸುವುದಲ್ಲದೆ ಅದು ಅನಾ
ವಶ್ಯಕವೆಂತಲೂ ಹೇಳುತ್ತಿರುವರು. ಇಂತಹ ಪರಿಸ್ಥಿತಿಯಲ್ಲಿ ಧರ್ಮದ
ಸಹಾಯವೊಂದೆ ಸನ್ನದು ಪಡೆದ ದುರಾಚಾರವನ್ನು ನಿಜವಾಗಿ ನಿರೋ
ಧಿಸಬಲ್ಲದು. ಇಲ್ಲಿ ಧರ್ಮವನ್ನು ಕೇವಲ ಅದರ ಸಂಕುಚಿತವಾದ
ಗುರುಮಾನ್ಯವಾದ ಅರ್ಥದಲ್ಲಿ ಮಾತ್ರವೇ ಗ್ರಹಿಸಕೂಡದು. ಜವಾದ
ಧರ್ಮವು ವೈಯಕ್ತಿಕ ಅಥವಾ ಏಕೀಕೃತ ಜೀವನದಲ್ಲಿ ಮಹಾಕ್ಷೋಭೆ
ಯನ್ನುಂಟುಮಾಡುವ ವಸ್ತುವಾಗಿದೆ. ಧಾರ್ಮಿಕ ಜಾಗ್ರತಿ ಎಂದರೆ
ಕ್ರಾಂತಿ, ಅವಸ್ಥಾಂತರ, ಸತ್ಪಥಾನುಸರಣ—ಇವುಗಳನ್ನೊಳಗೊಂಡಿರು
ವುದು. ಮಿ॥ ಬ್ಯೂರೊಯವರ ಅಂದಾಜಿನ ಪ್ರಕಾರ ಈ ಬಗೆಯ ಒಂದು
ವಿಶೇಷ ಶಕ್ತಿಯಲ್ಲದೆ ಮತ್ತಾವುದೂ ಫ್ರಾನ್ಸ್ ದೇಶವನ್ನು ಅನು
ಸರಿಸುತ್ತಿರುವ ನೀತಿ ವಿನಾಶಕ ಕರ್ಮದಿಂದ ಖಂಡಿತವಾಗಿ ತಡೆಯ
ಲಾರದು

ಆ ಗ್ರಂಥಕರ್ತರನ್ನೂ ಅವರ ಗ್ರಂಥ ವಿಚಾರವನ್ನೂ ಇಲ್ಲಿಗೆ ನಿಲ್ಲಿಸುವೆವು. ಫ್ರೆಂಚರ ಪರಿಸ್ಥಿತಿಗಳು ಹಿಂದೂದೇಶದ ಪರಿಸ್ಥಿತಿಗಳಾಗಿಲ್ಲ. ನಮ್ಮ ಸಮಸ್ಯೆಯೇ ಬೇರೆ ವಿಧವಾಗಿರುವುದು. ಗರ್ಭನಿರೋಧಕ ಸಾಧನಗಳು ಹಿಂದೂದೇಶದಲ್ಲಿ ಸಾರ್ವತ್ರಿಕವಾಗಿಲ್ಲ. ಅವುಗಳ ಉಪಯೋಗವು ಸುಶಿಕ್ಷಿತವರ್ಗದಲ್ಲಿಯೂ ಕೂಡ ಅಪರೂಪವಾಗಿದೆ. ನನ್ನ ಅಭಿಪ್ರಾಯದಲ್ಲಿ ಈ ದೇಶದಲ್ಲಿ ಯಾವುದೊಂದು ಸ್ಥಿತಿಯಲ್ಲಿಯಾದರೂ ಗರ್ಭನಿರೋಧಕ ಸಾಧನಗಳ ಆವಶ್ಯಕತೆ ಇದೆ ಎಂಬ ಭರವಸೆಯುಂಟಾಗಿಲ್ಲ. ಮಧ್ಯಮವರ್ಗದ ಮಾತಾಪಿತರ ಮಕ್ಕಳ ಸಂಖ್ಯೆಯು ಹೆಚ್ಚಾಗಿ ದುಃಖಪಡುತ್ತಿರುವರೊ ? ಮಧ್ಯಮ ವರ್ಗದ ಜನರಲ್ಲಿ ಮಕ್ಕಳ ಸಂಖ್ಯೆಯು ಹೆಚ್ಚಾಗುತ್ತಿದೆ ಎಂದು ಕೆಲವು ವೈಯಕ್ತಿಕ ಉದಾಹರಣೆಗಳನ್ನು ಕೊಟ್ಟರೆ ಸಾಲದು. ಹಿಂದೂದೇಶದಲ್ಲಿ ನಾನು ನಿರೀಕ್ಷಿಸಿರುವ ಮಟ್ಟಿಗೆ ಈ ಬಗೆಯ ವಿಧಾನಗಳಿಗೆ ವಿಧವೆಯರ ಮತ್ತು ಅಪ್ರಾಪ್ತ ವಯಸ್ಕರಾದ ಸತಿಯರ ಉದಾಹರಣೆಗಳನ್ನು ಮುಂದೊಡ್ಡುವರು. ಮೊದಲನೆಯದರಲ್ಲಿ ನ್ಯಾಯಸಮ್ಮತವಲ್ಲದ ಜನನವನ್ನು ತಪ್ಪಿಸಬೇಕೆಂದು ಹೊರತು ಗುಪ್ತಭೋಗವನ್ನು ತಪ್ಪಿಸಬೇಕೆಂಬುದು ಧ್ಯೇಯವಾಗಿಲ್ಲ. ಎರಡನೆಯದರಲ್ಲಿ ಗರ್ಭಧಾರಣೆಯ ಭಯವಿದೆಯೆ ಹೊರತು ಚಿಕ್ಕವಯಸ್ಸಿನ ಹುಡುಗಿಯೊಂದಿಗೆ ಹಟಸಂಭೋಗವನ್ನು ನಿರೋಧಿಸಬೇಕೆಂಬುದು ಉದ್ದೇಶ್ಯವಾಗಿಲ್ಲ. ಇನ್ನು ಉಳಿದಿರುವರೆಂದರೆ ರೋಗಪೀಡಿತರಾದ ದುರ್ಬಲರಾದ ಹೆಣ್ಣಿಗರಾದ ತಮ್ಮ ಅಥವಾ ಇತರರ ಹೆಂಡಂದಿರೊಂದಿಗೆ ಮಿತಿಮೀರಿದ ಭೋಗದಲ್ಲಿ ಮಗ್ನರಾಗಿ ಪಾಪ ಪೂರ್ಣವೆಂದು ತಮಗೆ ತಿಳಿದಿರುವ ಕಾರ್ಯಗಳ ಪರಿಣಾಮದಿಂದ ತಪ್ಪಿಸಿಕೊಳ್ಳಲಿಚ್ಛಿಸುವಂತಹ ಸಂಭೋಗವನ್ನಪೇಕ್ಷಿಸುವ ಪೂರ್ಣ ಚೈತನ್ಯವುಳ್ಳ ಸ್ತ್ರೀ ಪುರುಷರ ಉದಾಹರಣೆಗಳು ಅತಿ ವಿರಳವೆಂದು ನಾನು ಎಂಗಾರಿಕೆಯಿಂದು ಹೇಳಬಲ್ಲೆನು. ಹಿಂದೂಸ್ಥಾನದಲ್ಲಿ ಅದರ ಪ್ರಚಾರದಿಂದ ದೇಶದ ಯುವಕರ ನಾಶಗೊಳಿಸುವಂತಹ ಆಚಾರವನ್ನು ಸಮರ್ಥಿಸಿ ಪ್ರತಿಪಾದಿಸುವುದಕ್ಕೆ ಅವರು ತಮ್ಮ ಉದಾಹರಣೆಯನ್ನು ಮುಂದೊಡ್ಡದಿರಲಿ. ವಿಶೇಷ ಕೃತ್ರಿಮವಾದ ಶಿಕ್ಷಣ ಕ್ರಮವು

ಜನಾಂಗದ ಯುವಕರ ದೈಹಿಕ ಮತ್ತು ಮಾನಸಿಕ ಶಕ್ತಿಯನ್ನು ಹೀರಿ ಬಿಟ್ಟಿರುವುದು. ಹಲವು ಸಂದರ್ಭಗಳಲ್ಲಿ ನಾವು ಬಾಲ್ಯ ವಿವಾಹದ ಸಂತಾನರಾಗಿರುವೆವು. ಆರೋಗ್ಯ ಮತ್ತು ಕ್ಷೇಮರಕ್ಷಣೆಯ ನಿಯಮಗಳನ್ನು ನಾವು ಅಲಕ್ಷಿಸಿರುವುದರಿಂದ ನಮ್ಮ ದೇಹಗಳು ಬೆಂಡಾಗಿರುವವು. ಕಲ್ಮಷಜನಕವಾದ ಮಸಾಲೆಗಳಿಂದೊಡಗೂಡಿದ ಕಪ್ಪಾದ ಮತ್ತು ನ್ಯೂನತೆಯುಳ್ಳ ನಮ್ಮ ಆಹಾರಪದ್ಧತಿಯು ನಮ್ಮ ಜೀರ್ಣಕೋಶವನ್ನು ಹಾಳುಮಾಡಿರುವುದು. ಈಗ ನಮಗೆ ಬೇಕಾಗಿರುವುದು ಗರ್ಭನಿರೋಧಕ ಸಾಧನೆಗಳ ಪ್ರಯೋಗ ಪಾಠವಲ್ಲ. ನಮ್ಮ ಇಂದ್ರಿಯ ತೃಷ್ಣೆಯನ್ನು ತೃಪ್ತಿಗೊಳಿಸುವ ಶಕ್ತಿಯನ್ನು ಪಡೆಯಲು ಸಹಾಯ ಮಾಡಬೇಕಾಗಿಲ್ಲ. ಈಗ ನಮಗೆ ಆ ತೃಷ್ಣೆಯನ್ನು ನಿರೋಧಿಸುವುದಕ್ಕೂ ಕೆಲವು ಸಂದರ್ಭಗಳಲ್ಲಿ ಸಂಪೂರ್ಣ ಬ್ರಹ್ಮಚರ್ಯವನ್ನು ಆಚರಿಸುವುದಕ್ಕೂ ನಮಗೆ ನಿರಂತರ ಪಾಠಗಳು ಬೇಕಾಗಿವೆ. ಉಪದೇಶದಿಂದಲೂ ಉದಾಹರಣೆಯಿಂದಲೂ ಬ್ರಹ್ಮಚರ್ಯವು ಸಾಧ್ಯ ಮತ್ತು ನಾವು ದೈಹಿಕ ಮತ್ತು ಮಾನಸಿಕ ದುರ್ಬಲತೆ ಇಲ್ಲದೆ ಇರಬೇಕಾದರೆ ಅದರ ಸಾಧನೆಯು ಅತ್ಯಾವಶ್ಯಕ ಎಂದು ಬೋಧಿಸುವ ಶಿಕ್ಷಣವು ನಮಗೆ ಬೇಕಾಗಿದೆ. ನಾವು ಕೇವಲ ಮಾನವ ಪ್ರತಿಮೆಗಳ ಜನಾಂಗವಾಗದಿರಬೇಕಾದರೆ ಪ್ರತಿನಿತ್ಯವೂ ನಾವು ದುಂದುಮಾಡುತ್ತಿರುವ ಚೇತನ ಶಕ್ತಿಯನ್ನು ಕಾಪಾಡಿಕೊಂಡು ಅದನ್ನು ಹೆಚ್ಚಿಸಿಕೊಳ್ಳಬೇಕೆಂದು ನಮಗೆ ಸಾರಿ ಹೇಳಬೇಕಾಗಿದೆ. ನಮ್ಮ ಯುವತಿಯರಾದ ವಿಧವೆಯರು ಗುಪ್ತವಾಗಿ ಪಾಪಾಚರಣೆಯನ್ನು ಮಾಡದೆ ಧೈರ್ಯದಿಂದ ಮುಂದೆ ಬಂದು ಯುವಕ ವಿಧುರರಂತೆ ತಮಗೂ ಮದುವೆಯ ಹಕ್ಕಾಗಿರುವುದೆಂದು ಸಾಧಿಸಲು ಹೇಳಬೇಕಾಗಿದೆ. ಬಾಲ್ಯ ವಿವಾಹವನ್ನು ಅಸಾಧ್ಯವಾಗಿ ಮಾಡಲು ಸಾರ್ವಜನಿಕ ಅಭಿಪ್ರಾಯವನ್ನು ಕೃಷಿ ಮಾಡಬೇಕಾಗಿದೆ. ಹಲವೆಡೆಗಳಲ್ಲಿ ನಮಗೆ ಕಂಡುಬರುವ ಕಲ್ಪನಾಶಕ್ತಿಯ ಲೋಪವೂ ಕಷ್ಟತರವಾದ ದುರ್ಘಕೆಲಸವನ್ನು ಮಾಡುವುದರಲ್ಲಿ ತೋರುವ ಚಂಚಲತೆ ಮತ್ತು ಉಪೇಕ್ಷೆಯೂ ಸಾಹಸಪರವಾದ ಕೆಲಸಗಳನ್ನು ಮಾಡುವುದರಲ್ಲಿ ದೈಹಿಕ ಅಶಕ್ತತೆಯೂ ಅತ್ಯಪೂರ್ವ ಲಕ್ಷಣ

ದಿಂದ ಪ್ರಾರಂಭಿಸಲ್ಪಟ್ಟ ಮಹೋದ್ಯಮಗಳು ಕುಸಿದುಬಿದ್ದಿರುವುದೂ ಹೆಚ್ಚಾಗಿ ಅತಿ ಸಂಭೋಗದ ಕಾರಣದಿಂದಲೆ ಎಂದು ಹೇಳಬಹುದು ಸಂತಾನೋತ್ಪಾದನೆ ಇಲ್ಲದೆ ಇರುವಾಗ ಸಂಭೋಗದಿಂದ ದೌರ್ಬಲ್ಯ ವುಂಟಾಗುವುದಿಲ್ಲವೆಂಬ ಮೋಸದ ನಂಬಿಕೆಗೆ ಯುವಕರು ಒಳಗಾಗಲಾ ರರೆಂದು ನಾನು ನಂಬಿರುವೆನು. ಸಂತಾನವಾಗದಂತೆ ಅಸ್ವಾಭಾವಿಕ ರಕ್ಷಣೆಯಿಂದೊಡಗೂಡಿದ ಸಂಭೋಗಕ್ರಿಯೆಯಿಂದ ಪೂರ್ಣ ಜವಾಬ್ದಾ ರಿಯನ್ನರಿತು ಆಚರಿಸಿದ ಸಂಭೋಗಕ್ರಿಯೆಗಿಂತಲೂ ಹೆಚ್ಚು ಶಕ್ತಿ ವ್ಯಯವಾಗುವುದು ನಿಜ.

" **ಪುಣ್ಯೋಽಹಂ ಪುಣ್ಯಕರ್ಮಾಹಂ ಪುಣ್ಯಾತ್ಮಾ ಪುಣ್ಯಸಂಭವಃ**" ಎಂಬೀ ಪುಣ್ಯಮಯವಾದ ಸಂಕಲ್ಪದಿಂದಲೂ ಭಾವನೆಯಿಂದ ಲೂ ಮನುಷ್ಯನು ನಿಸ್ಸಂದೇಹವಾಗಿಯೂ ಪುಣ್ಯಾತ್ಮನಾಗುವನು. "ಪಾಪೋಽಹಂ ಪಾಪಕರ್ಮಾಹಂ ಪಾಪಾತ್ಮಾ ಪಾಪಸಂಭವಃ" ಎಂಬೀ ಪಾಪಮಯ ಭಾವನೆಯಿಂದ ಮನುಷ್ಯನು ನಿಜವಾಗಿಯೂ ಪಾಪಾತ್ಮ ನಾಗುವ ಸಂಭವವಿರುವುದು.

ಪಾಶವಿಕ ಕಾಮಾಚಾರ ಮಗ್ನತೆಯು ಅತ್ಯಾವಶ್ಯಕವೆಂದೂ, ಅದು ಪಾಪಕರವಲ್ಲ ಮತ್ತು ಅಪಾಯಕರವಲ್ಲವೆಂದೂ ನಂಬಲಾರಂಭಿಸಿ ದರೆ ಆಗ ನಾವು ಅದನ್ನು ನಿಗ್ರಹವಮಾಡದೆ ನಿರೋಧಿಸಲಶಕ್ತರಾಗು ವೆವು. ಆದರೆ ಅಂತಹ ವಿಷಯ ಮಗ್ನತೆಯು ಅಪಾಯಕರ, ಪಾಪಕರ, ಅನಾವಶ್ಯಕ. ಅದನ್ನು ನಿಗ್ರಹಿಸಬಲ್ಲೆವು ಎಂಬೀ ನಂಬಿಕೆಯಲ್ಲಿ ನಾವು ಶಿಕ್ಷಣವನ್ನು ಪಡೆದರೆ ಆಗ ಆತ್ಮ ಸಂಯಮವು ಸಂಪೂರ್ಣ ಸಾಧ್ಯವೆಂದು ನಮಗೆ ಗೊತ್ತಾಗುವುದು. ನವೀನ ಸತ್ಯ ಮತ್ತು ಮಾನವ ಸ್ವಾತಂತ್ರ್ಯವೆಂಬೀ ಹೆಸರಿನಿಂದ ಪಾಶ್ಚಾತ್ಯ ದೇಶವು ನಮಗೆ ಕಳುಹಿ ಸುತ್ತಿರುವ ಪ್ರಬಲವಾದ ಸ್ವೈರವಿಹಾರ ಮದಿರೆಯಿಂದ ನಾವು ದೂರ ವಾಗಿರುವಾ. ನಮ್ಮ ಪೂರ್ವಜರ ಬುದ್ಧಿಗಿಂತಲೂ ನಮ್ಮ ಬುದ್ಧಿಯು ಅತಿಶಯವಾಗಿ ಬೆಳೆದಿದ್ದರೆ, ಪಾಶ್ಚಾತ್ಯ ದೇಶದ ಜ್ಞಾನಿಗಳ ಅನುಭವ ದಿಂದ ಕೆಲವುವೇಳೆ ನಮ್ಮ ಕಡೆ ಗಾಳಿಸಿ ಬರುವ ಶಾಂತವಿಚಾರಧ್ವನಿಗೆ ನಾವು ಕಿವಿಗೊಡುವಾ,

ಚಾರ್ಲಿ ಆಂಡ್ರೂಜರು ಅಮೆರಿಕಾ ದೇಶದ 'ದಿ ಓಪಸ್ ಕೋರ್ಟ್' ಎಂಬ ಮಾಸಪತ್ರಿಕೆಯ ಸನ್ ೧೯·೬ನೆಯ ಸಾಲಿನ ಮಾರ್ಚಿ ತಿಂಗಳ ಸಂಚಿಕೆಯಲ್ಲಿ ವಿಲಿಯಮ್ ಲಾಫ್ಟಸ್ ಹೇರ್ ಎಂಬಾತನು ಬರೆದು ಪ್ರಕಟಿಸಿರುವ "ಉತ್ಪಾದನೆ ಮತ್ತು ಪುನರುಜ್ಜೀವನ" ಎಂಬ ಲೇಖನವೊಂದನ್ನು ನನಗೆ ಕಳುಹಿಸಿರುವರು. ಅದು ವಿಶೇಷ ವಿವೇಕಯುಕ್ತವಾದ ವಿಜ್ಞಾನಪ್ರಬಂಧವಾಗಿದೆ. ಶರೀರ ರಚನೆಗಾಗಿ ಅಂತರುತ್ಪಾದನೆ, ಜಾತಿಯು ಶಾಶ್ವತವಾಗಿ ಮುಂದುವರಿಯಲು ಬಹಿರುತ್ಪಾದನೆ—ಎಂಬೀ ಎರಡು ಬಗೆಯ ಕಾರ್ಯಗಳನ್ನು ಪ್ರತಿಯೊಂದು ದೇಹವೂ ಮಾಡುತ್ತಿರುವುದೆಂದು ಲೇಖಕನು ಅದರಲ್ಲಿ ಸಿದ್ಧಾಂತಗೊಳಿಸಿರುವನು. ಈ ಕ್ರಿಯಾ ವಿಧಾನಗಳಿಗೆ ಆತನು ಉತ್ಪಾದನೆ ಮತ್ತು ಪುನರುಜ್ಜೀವನವೆಂದು ಹೆಸರಿಟ್ಟಿರುವನು. "ಪುನರುಜ್ಜೀವನ ಕ್ರಿಯೆ—ಎಂಬ ಅಂತರುತ್ಪಾದನೆಯು—ವ್ಯಕ್ತಿಗೆ ಮೂಲವಾಗಿರುವುದರಿಂದ ಅದು ಅತ್ಯಾವಶ್ಯಕವಾದ ಕರ್ತವ್ಯವಾಗಿರುವುದು. ಬಹಿ ಬಹಿರುತ್ಪಾದನಾ ಕ್ರಿಯೆಯು ಕೇವಲ ಅತಿರಿಕ್ತ ಅರೆಗಳಿಂದಾಗುವುದರಿಂದ ಅದು ಗೌಣವಾಗಿರುವುದು.. ....ಈ ಸ್ಥಿತಿಯಲ್ಲಿ ಜೀವಾಣುಗಳ ಅರೆಗಳನ್ನು ಪುನರುಜ್ಜೀವನ ಕ್ರಿಯೆಗಾಗಿ ಒದಗಿಸುವುದು ಮೊದಲನೆಯ ಕೆಲಸ, ಸಂತಾನೋತ್ಪಾದನೆಗಾಗಿ ಒದಗಿಸುವುದು ಎರಡನೆಯ ಕೆಲಸ. ದೈಹಿಕ ನ್ಯೂನತೆಯಲ್ಲಿ ಪುನರುಜ್ಜೀವನ ಕ್ರಿಯೆಗೆ ಮೊದಲು ಎಡೆಗೊಡಬೇಕು. ಆಗ ಸಂತಾನೋತ್ಪಾದನೆಯ ಕ್ರಿಯೆಯನ್ನು ನಿಲ್ಲಿಸಿಯೆ ಬಿಡಬೇಕು. ಈ ಬಗೆಯಿಂದ ಮೊದಲು ನಾವು ಸಂತಾನೋತ್ಪಾದನೆಯನ್ನು ನಿಲ್ಲಿಸುವುದನ್ನರಿತು, ಮುಂದೆ ಬ್ರಹ್ಮಚರ್ಯೆಯ ಮತ್ತು ತಪೋನಿಷ್ಠತೆಯ ಸೋಪಾನಗಳನ್ನಡರಬಹುದು. ಅಂತರುತ್ಪಾದನೆಯನ್ನು ಮರಣ ಸಂಭವಿಸುವವರೆಗೂ ನಿಲ್ಲಿಸಲಾಗುವುದಿಲ್ಲ. ಇದರಿಂದಲೇ ಅದರ ಯಥಾವಸ್ಥಿತ ಮೂಲ ಸ್ವರೂಪವು ವ್ಯಕ್ತವಾಗುವುದು." ಜೀವ ಶಾಸ್ತ್ರೀಯ ಪುನರುಜ್ಜೀವನ ಕ್ರಿಯೆಯನ್ನು ವರ್ಣಿಸಿದ ತರುವಾಯ ಆ ಲೇಖಕರು ಮುಂದೆ ಹೀಗೆ ಬರೆದಿರುವರು:—"ನಾಗರಿಕ ಮಾನವರಲ್ಲಿ ಸಂತಾನೋತ್ಪಾದನೆಗೆ ಆವಶ್ಯಕವಾದುದಕ್ಕಿಂತಲೂ

ಹೆಚ್ಚಾಗಿ ಸ್ತ್ರೀ ಸಂಭೋಗವನ್ನು ಮಾಡುತ್ತಿರುವರು. ಇದರಿಂದ ಅಂತರುತ್ಪಾದನಾ ಕ್ರಿಯೆಯು ಕುಗ್ಗಿ ಶರೀರವು ವ್ಯಾಧಿಗಳಿಗೂ ಮರಣಕ್ಕೂ ಇತರ ಉಪದ್ರವಗಳಿಗೂ ಗುರಿಯಾಗುತ್ತಿರುವುದು. ''

ಹಿಂದೂಗಳ ವೇದಾಂತವನ್ನು ತಿಳಿದವರು ಮಿ॥ ಹೇರ್‌ನ ಪ್ರಬಂಧದಲ್ಲಿರುವ ಮುಂದಿನ ವಾಕ್ಯಗಳ ಅರ್ಥವನ್ನು ಸುಲಭವಾಗಿ ಗ್ರಹಿಸಬಹುದು :—'' ಪುನರುಜ್ಜೀವನ ಕ್ರಿಯಾ ವಿಧಾನವು ಕೇವಲ ಯಂತ್ರಕಾರನ ಕೆಲಸದಂತೆ ನಡೆಯುವುದಿಲ್ಲ. ಜೀವಾಣುಗಳ ಆದಿಮ ವಿಚ್ಛೇದನ ಮತ್ತು ಜನನ ಕ್ರಿಯೆಯಂತೆ ಅದು ಚೇತನ ಮಯ ಕ್ರಿಯೆಯಾಗಿರುವುದು. ಜೀವವು ಕೇವಲ ಯಾಂತ್ರಿಕ ಕ್ರಿಯೆಯಂತೆ ವಿಚ್ಛೇದನವನ್ನೂ ವಿವಿಧತ್ವವನ್ನೂ ಪೃಥಕ್ಕರಣವನ್ನೂ ಹೊಂದುವುದೆಂದು ತಿಳಿಯುವುದು ಕಲ್ಪನಾತೀತವಾದುದು. ಈ ಮೂಲಕ್ರಿಯೆಗಳು ನಮಗೆ ಗೋಚರವಾಗದೆ, ಅವು ಮಾನವನ ಅಥವ ಪ್ರಾಣಿಯ ಇಚ್ಛೆಯ ಸ್ವಾಧೀನವಾಗಿಲ್ಲವೆಂಬಂತೆ ತೋರುತ್ತಿರುವುದು ನಿಜ. ಒಂದುಕ್ಷಣ ಧ್ಯಾನಿಸಿ ನೋಡಿದರೆ, ಪ್ರೌಢ ಮಾನವ ಪ್ರಾಣಿಯ ಇಚ್ಛಾಶಕ್ತಿಯು ಅವನ ಪ್ರತಿಯೊಂದು ಬಹಿರಂಗ ಚಲನೆಯನ್ನೂ ಕ್ರಿಯೆಯನ್ನೂ ಬುದ್ಧಿಯ ಸಹಾಯದಿಂದ—ಹಾಗೆ ಮಾರ್ಗದರ್ಶನ ಮಾಡಿಸುವುದು ಅದರ ಕಾರ್ಯ ಭಾಗವಾಗಿದೆ---ನಡೆಯಿಸುವಂತೆಯೇ, ಸುತ್ತುಮುತ್ತಣ ವಾತಾವರಣಕ್ಕನುಸಾರವಾದ ಮಿತಿಯಲ್ಲಿ, ಶರೀರವನ್ನು ಕ್ರಮವಾಗಿ ವ್ಯವಸ್ಥೆಯಿಂದ ಬೆಳೆಯಿಸುವ ಕ್ರಿಯೆಯ ಪ್ರಥಮಾವಸ್ಥೆಯು ಕೂಡ ಒಂದು ಬಗೆಯ ಬುದ್ಧಿಗೊಳಗಾದ ಇಚ್ಛಾಶಕ್ತಿಯ ನೇತೃತ್ವದಲ್ಲಿಯೆ ಮುಂದುವರಿಯಬೇಕಾಗಿರುವುದೆಂದು ತಿಳಿದು ಬರುವುದು. ಇದಕ್ಕೆ ಈಗ ಮಾನಸ ಶಾಸ್ತ್ರಜ್ಞರು '' ದೇಹಭಾವವಿಲ್ಲದ ಜೀವ ಅಥವಾ ಅಸ್ವಯವಿಲ್ಲದ ಜೀವ '' ಎಂದು ಹೆಸರಿಟ್ಟಿರುವರು. ಆದರೆ ಈ ಜೀವವು ಕೂಡ ನಮ್ಮ ನಿತ್ಯಜೀವನದ ಒಂದು ಭಾಗವಾಗಿದ್ದಾಗ್ಗೂ ಅದು ಸಾಮಾನ್ಯವಾಗಿ ನಮ್ಮ ನಿತ್ಯಾಲೋಚನೆಯೊಂದಿಗೆ ಸಂಬಂಧಪಟ್ಟಿರುವುದಿಲ್ಲ. ಆದಾಗ್ಗೂ ಈ ಜೀವವು ತನ್ನ ಕಾರ್ಯಭಾಗವನ್ನು ಯಾವಾಗಲೂ ವಿಶೇಷ ಎಚ್ಚರಿಕೆಯಿಂದಲೂ ಚುರುಕಾಗಿಯೂ ಮಾಡುವುದು. ನಮ್ಮ ದೇಹಭಾವವು

ನಿದ್ರಾವಸ್ಥೆಯಲ್ಲಿರುವಾಗಲೂ ಇದು ವಿಶ್ರಾಂತಿಯಿಲ್ಲದೆ ತನ್ನ ಕೆಲಸ ಮಾಡುತ್ತಿರುವುದು.

ಕೇವಲ ಭೋಗಕ್ಕಾಗಿ ಆಚರಿಸಲ್ಪಡುವ ಸಂಭೋಗ ಕ್ರಿಯೆಯಿಂದ ನಮ್ಮ ನಮ್ಮ ಇರುವಿಕೆಯ ಶಾಶ್ವತಭಾಗವಾದ ಈ ದೇಹಭಾವವಿಲ್ಲದೆ ಜೀವನಕ್ಕಾಗುವಂತಹ ಮತ್ತೆ ನೇರ್ಪಡಿಸಲಾಗದ ಅಪಾಯದ ಪರಿಣಾಮವನ್ನು ತಿಳಿಯಬಲ್ಲರು? 'ಸಂತಾನೋತ್ಪಾದನೆಯ ಪ್ರತಿದಂಡನೆಯೇ ಮರಣವಾಗಿರುವದು. ಸಂಭೋಗ ಕ್ರಿಯೆಯೆಯು ಪುರಷನ ಮೃತ್ಯುಮಾರ್ಗದ ಚಲನೆಯಾಗಿರುವುದು. ಪ್ರಸೂತಿಯು (ಹೆರಿಗೆಯು) ಸ್ತ್ರೀಯರ ಮೃತ್ಯುಮಾರ್ಗದ ಚಲನೆಯಾಗಿರುವುದು.' ಆದುದರಿಂದ ಆ ಲೇಖಕನು ಹೀಗೆ ಬರೆದಿರುವನು :–ಪುನರುಜ್ಜೀವನಕ್ಕಾಗಿ ಊರ್ಧ್ವಗಾಮಿಗಳಾಗಿರುವ ಜೀವಾಣುಗಳನ್ನು ಸಂತಾನೋತ್ಪಾದನೆಗಾಗಿ ಅಥವಾ ಕೇವಲ ಭೋಗಕ್ಕಾಗಿ ಸೆಳೆಯುವುದರಿಂದ ಅವಯವಗಳಲ್ಲಿ ತುಂಬಿರುವ ಚೇತನ ಶಕ್ತಿಯ ಸಂಗ್ರಹವು ನಿಧಾನವಾಗಿ ಕೊನೆಗಾಣಿಸುವ ವರೆಗೆ ಕಡಿಮೆಯಾಗುತ್ತ ಹೋಗುವುದು. ಇಂದ್ರಿಯ ನಿಗ್ರಹದ ಮೂಲತತ್ವಗಳನ್ನು ತಿಳಿಸಿ, ಮಿತಾಚರಣೆಯನ್ನು ಬೋಧಿಸುವ ಮಾನನಿಗೆ ಸಂಬಂಧಪಟ್ಟ ಸಂಭೋಗದ ಆಚಾರ ನೀತಿಗಳ ಏರ್ಪಾಡಿಗೆ ಹಿಂದೆ ಹೇಳಿದ ಆಚಾರ ವಿಚಾರಗಳೇ ಕಾರಣವಾಗಿರುವವು." ಈ ಲೇಖಕನು ರಾಸಾಯನಿಕ ಮತ್ತು ಯಾಂತ್ರಿಕ ವಿಧಾನದಿಂದ ಗರ್ಭನಿರೋಧಮಾಡುವುದಕ್ಕೆ ವಿರೋಧವಾಗಿ ಹೀಗೆ ಬರೆದಿರುವರು :–"ಇದರಿಂದ ಆತ್ಮನಿಗ್ರಹದ ವಿವೇಕ ಪೂರ್ಣವಾದ ಉದ್ದೇಶ್ಯಗಳಿಗೆಲ್ಲವೂ ನಿರ್ಮೂಲವಾಗುವುವಲ್ಲದೆ ದಾಂಪತ್ಯ ಜೀವನದಲ್ಲಿ ಆಸೆಯು ಅಂತ್ಯವಾಗುವವರೆಗೆ ಅಥವಾ ಮುಪ್ಪು ಬರುವವರೆಗೆ ಸಂಭೋಗಾಚರಣೆಯನ್ನು ಮಾಡಲು ಅವಕಾಶವುಂಟಾಗಿರುವುದು. ಅಷ್ಟುಮಾತ್ರವಲ್ಲದೆ ದಾಂಪತ್ಯ ಜೀವನದ ಆವರಣದಿಂದ ಹೊರಗಿರುವವರ ಮೇಲೂ ಅದು ಒಂದು ಬಗೆಯ ಪರಿಣಾಮವನ್ನುಂಟುಮಾಡುವುದು. ಈಗಣ ಕೈಗಾರಿಕೆ, ಸಮಾಜಶಾಸ್ತ್ರ, ರಾಜನೀತಿ ಇವುಗಳ ದೃಷ್ಟಿಯಿಂದಲೂ ವಿಶೇಷ ಅಪಾಯಗಳಿಂದ ತುಂಬಿರುವ ಅಕ್ರಮವಾದ ತಾರತ

ಮ್ಯವರಿಯದ ನಿಷ್ಫಲವಾದ ಸಂಭೋಗಕ್ಕೆ ಅದು ಹೆದ್ದಾರಿಯನ್ನುಂಟು ಮಾಡುವುದು. ಇವುಗಳನ್ನು ಇಲ್ಲಿ ಸವಿಸ್ತಾರವಾಗಿ ತಿಳಿಯಿಸಲಾಗು ವುದಿಲ್ಲ. ಆದರೆ ಇಷ್ಟು ಹೇಳಿದರೆ ಸಾಕು. ಗರ್ಭನಿರೋಧದಿಂದ ವಿವಾಹಿತ ಮತ್ತು ಅವಿವಾಹಿತ ಜೀವನದಲ್ಲಿ ಮಿತಿಮೀರಿದ ಸಂಭೋಗ ಮಗ್ನತೆಗೆ ಸೌಕರ್ಯ ದೊರೆತಂತಾಗುವುದು ಆದರಿಂದ ನಾನು ಹಿಂದೆ ಹೇಳಿದ ಶಾರೀರ ಶಾಸ್ತ್ರವಾದಗಳು ಸರಿಯಾಗಿದ್ದರೆ ವ್ಯಕ್ತಿಗಳಿಗೂ ಮಾನವ ಜಾತಿಗೂ ಅಪಾಯವು ಬಂದೇ ಬರಬೇಕು. "

ಮಿ॥ ಬ್ಯೂರೊಯವರು ತಮ್ಮ ಗ್ರಂಥದ ಕೊನೆಯಲ್ಲಿ ಕೊಟ್ಟಿರುವ ವಾಕ್ಯವನ್ನು ಹಿಂದೂಸ್ಥಾನದ ಯುವಕ ಯುವತಿಯರು ತಮ್ಮ ಹೃದಯದಲ್ಲಿ ಕೊರೆದಿಟ್ಟುಕೊಳ್ಳಲಿ.

" ಭವಿಷ್ಯವು ಪವಿತ್ರ ವ್ರತಾಚರಣೆಯುಳ್ಳ ಜನಾಂಗಕ್ಕೆ ಸೇರಿರುವುದು. "

## ೨ ಗರ್ಭನಿರೋಧ*

**ವಿಶೇಷ** ಸಂದೇಹದಿಂದಲೂ ಮನಸ್ಸು ಒಲ್ಲೆನೆನುತ್ತಿದ್ದರೂ ನಾನು ಈ ವಿಷಯವನ್ನು ಬರೆಯಲಾರಂಭಿಸಿರುವೆನು. ನಾನು ಹಿಂದೂ ಸ್ಥಾನಕ್ಕೆ ಬಂದಾಗಿನಿಂದಲೂ ಗರ್ಭನಿರೋಧಕ್ಕಾಗಿ ಕೃತ್ರಿಮ ಸಾಧನ ಗಳನ್ನು ಉಪಯೋಗಿಸುವ ವಿಚಾರದಲ್ಲಿ ಅನೇಕರು ನನಗೆ ಬರೆಯುತ್ತಿ ರುವರು. ಅವರ ಪತ್ರಗಳಿಗೆ ಸ್ವಕೀಯ ಉತ್ತರಗಳನ್ನು ಕೊಟ್ಟಿದ್ದರೂ, ಇದುವರೆಗೆ ನಾನು ಆದರ ವಿಚಾರವಾಗಿ ಬಹಿರಂಗವಾಗಿ ಬರೆದಿರಲಿಲ್ಲ. ಈಗ್ಗೆ ೩೫ ವರ್ಷಗಳ ಹಿಂದೆ ನಾನು ವಿಲಾಯಿತಿಯಲ್ಲಿ ವಿದ್ಯಾರ್ಥಿಯಾಗಿ ದ್ದಾಗ ಈ ವಿಚಾರದ ಕಡೆ ನನ್ನ ದೃಷ್ಟಿಯು ತಿರುಗಿತು. ಆಗ ಈ ವಿಚಾರದಲ್ಲಿ ಕೇವಲ ನೈಸರ್ಗಿಕ ಉಪಾಯವನ್ನೆ ಅವಲಂಬಿಸಬೇಕೆಂದು ಹೇಳುತ್ತಿದ್ದ ನೀತಿವಾದಿಯೊಬ್ಬನೂ ಕೃತ್ರಿಮ ಉಪಾಯವನವಲಂಬಿಸಲು ಬಹುದೆಂದು ಹೇಳುತ್ತಿದ್ದ ವೈದ್ಯಶಾಸ್ತ್ರಜ್ಞನೊಬ್ಬನೂ ದೊಡ್ಡ ಚರ್ಚೆ ನಡೆಯಿಸಿದ್ದರು. ನನ್ನ ಜೀವನದ ಆ ಪ್ರಾಥಮಿಕಾವಸ್ಥೆಯಲ್ಲಿ ಸ್ವಲ್ಪ ಕಾಲ ಕೃತ್ರಿಮ ಉಪಾಯಗಳ ಕಡೆಗೆ ನನ್ನ ಮನಸ್ಸು ಒಲಿದಿದ್ದರೂ, ಕೊನೆಗೆ ನಾನು ಆದರ ಪೂರ್ಣ ವಿರೋಧಿಯಾದೆನು. ಈಗ ಹಲವು ಹಿಂದೀ ವರ್ತಮಾನಪತ್ರಿಕೆಗಳಲ್ಲಿ ಈ ಉಪಾಯಗಳ ವಿಚಾರವಾಗಿ, ಸಭ್ಯರಿಗೆ ಅಸಹ್ಯವಾಗುವ ರೀತಿಯಲ್ಲಿ ಬಹಿರಂಗವಾಗಿಯೆ ವರ್ಣನೆಗಳು ಪ್ರಕಟಗೊಳ್ಳುತ್ತಿರುವುದನ್ನು ನಾನು ನೋಡುತ್ತಿರುವೆನು. ಅದರಲ್ಲಿ ಒಬ್ಬ ಲೇಖಕನಂತೂ ಗರ್ಭನಿರೋಧಕ್ಕೆ ಕೃತ್ರಿಮ ಉಪಾಯಗಳನ್ನು ಸಮರ್ಥಿಸುವವರ ನಾಮಾವಳಿಯಲ್ಲಿ ಸ್ವಲ್ಪವೂ ಹಿಂಜರಿಯದೆ ನನ್ನ ಹೆಸರನ್ನೂ ಸೇರಿಸಿಬಿಟ್ಟಿರುವನು. ಅಂತಹ ಉಪಾಯಗಳನ್ನು ಸಮ ರ್ಥಿಸಿ ನಾನು ಮಾತಾಡಿದ ಅಥವಾ ಬರೆದ ಒಂದು ಸಂದರ್ಭವೂ ನನ್ನ ಜ್ಞಾಪಕದಲ್ಲಿಲ್ಲ. ಅಲ್ಲದೆ ಅದರಲ್ಲಿ ಮತ್ತಿಬ್ಬರು ಪ್ರಸಿದ್ಧಪುರುಷರ ಹೆಸ ರನ್ನೂ ಸೇರಿಸಲಾಗಿದೆ. ಆದರೆ ಅವರಿಗೆ ತಿಳಿಸದೇ ನಾನು ಅವರ ಹೆಸ ರನ್ನು ಪ್ರಕಟಿಸಲಿಚ್ಛಿಸುವುದಿಲ್ಲ.

---

* ೧೯೨೫ನೆಯ ಸಾಲಿನ ಮಾರ್ಚಿ ೧೨ನೆಯ ತಾರೀಖಿನ ಯಂಗ್ ಇಂಡಿಯಾ ಪತ್ರಿ ಕೆಯಿಂದ ಪುನರ್ಮುದ್ರಿತವಾದುದು.

ಗರ್ಭನಿರೋಧನ ಆವಶ್ಯಕತೆಯ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿಲ್ಲ. ಆದರೆ ಅದಕ್ಕಾಗಿ ಪರಂಪರಾಗತವಾಗಿ ಅನುಸರಿಸಿರುವ ಮಾರ್ಗವೆಂದರೆ ಆತ್ಮಸಂಯಮ ಅಥವಾ ಬ್ರಹ್ಮಚರ್ಯೆಯೊಂದೇ. ಅದನ್ನು ಸಾಧಿಸಿದವರಿಗೆ ತಪ್ಪನೇ ಕಲ್ಯಾಣವನ್ನೂ ಹಿತವನ್ನೂ ಉಂಟುಮಾಡತಕ್ಕ ಏಕಮಾತ್ರ ಉಪಾಯವು ಅದಾಗಿರುವುದು. ವೈದ್ಯಶಾಸ್ತ್ರಜ್ಞರು ಗರ್ಭನಿರೋಧಕ್ಕೆ ಕೃತ್ರಿಮ ಉಪಾಯಗಳನ್ನು ಹುಡುಕುವುದಕ್ಕೆ ಬದಲಾಗಿ ಆತ್ಮಸಂಯಮನದ ಮಾರ್ಗಗಳನ್ನು ಕಂಡುಹಿಡಿದರೆ ಮಾನವವರ್ಗವೇ ಅವರಿಗೆ ಕೃತಜ್ಞವಾಗಿರುವುದು. ಸ್ತ್ರೀಪುರುಷ ಸಂಯೋಗವು ಕೇವಲ ಸಂತಾನೋತ್ಪಾದನೆಗಾಗಿಯೆ ವಿನಾ ಸುಖಕ್ಕಾಗಿ ಅಲ್ಲ. ಸಂತಾನೋತ್ಪಾದನೆಯ ಉದ್ದೇಶ್ಯವಿಲ್ಲದೇ ಆಗುವ ಸ್ತ್ರೀಪುರುಷ ಸಂಯೋಗವು ಪಾಪಕೃತ್ಯವಾಗಿರುವುದು.

ಕೃತ್ರಿಮ ಉಪಾಯಗಳು ದುರ್ಗುಣವನ್ನು ಸಂಭಾವನೆ ಮಾಡುವಂತಿರುವವು. ಅವು ಸ್ತ್ರೀಪುರುಷರನ್ನು ಅಜಾಗರೂಕರನ್ನಾಗಿ ಮಾಡುವವು. ಅವುಗಳಿಗೆ ಕೊಡುವ ಆದರದಿಂದ, ಸಾರ್ವಜನಿಕ ಗೌರವಕ್ಕೆ ಪಾತ್ರವಾಗಿರುವ ಆತ್ಮಸಂಯಮ ವಿಧಿಗಳು ಶಿಥಿಲಗೊಳ್ಳಲೇಬೇಕಾಗುವುದು. ನಿಸ್ಸತ್ವವೂ ನರಗಳ ದೌರ್ಬಲ್ಯವೂ ಕೃತ್ರಿಮ ಉಪಾಯ ಸಾಧನೆಯ ಫಲವಾಗಿ ಪರಿಣಮಿಸುವವು. ಅದರಿಂದ ರೋಗಕ್ಕಿಂತಲೂ ಔಷಧಿಯೆ ಅಪಾಯಕರವೆಂದು ಗೊತ್ತಾಗುವುದು. ತನ್ನ ಕ್ರಿಯೆಯ ಫಲವನ್ನು ತಪ್ಪಿಸಿಕೊಳ್ಳಲೆತ್ನಿಸುವುದು ನೀತಿವಿರುದ್ಧವೂ ಮಹದಪರಾಧವೂ ಆಗಿರುವುದು. ಮಿತಿಮೀರಿ ತಿನ್ನುವವನು ಹೊಟ್ಟೇನೋವಿನಿಂದ ನರಳಿ, ಉಪವಾಸ ಮಾಡುವುದು ಒಳ್ಳೆಯದು. ಆದರೆ ಬಾಯಿ ರುಚಿಯನ್ನು ತೃಪ್ತಿಗೊಳಿಸಲು ಮಿತಿಮೀರಿ ತಿಂದು, ಅದರ ಪರಿಣಾಮವನ್ನು ತಪ್ಪಿಸಿಕೊಳ್ಳುವುದಕ್ಕಾಗಿ 'ಟಾನಿಕ್' ಗಳನ್ನಾಗಲಿ ಬೇರೆ ಔಷಧಗಳನ್ನಾಗಲಿ ತೆಗೆದುಕೊಳ್ಳುವುದು ಕೆಟ್ಟದ್ದು. ಅಂತೆಯೆ ಮಾನವನು ಇಂದ್ರಿಯ ತೃಷ್ಣೆಯನ್ನು ತೃಪ್ತಿಗೊಳಿಸುವುದರಲ್ಲಿ ಮಗ್ನನಾಗಿ, ಆ ಕ್ರಿಯೆಯಿಂದುಂಟಾಗುವ ಪರಿಣಾಮಗಳಿಂದ ತಪ್ಪಿಸಿಕೊಳ್ಳಲೆತ್ನಿಸುವುದ ಇನ್ನೂ ಕೀಳಾದುದು. ನಿಸರ್ಗದೇವತೆಯು ಕರುಣೆಯಿಲ್ಲದವಳು. ತನ

ನಿಯಮಗಳನ್ನುಲಂಘಿಸುವವರ ಮೇಲೆ ತನ್ನ ಸೇಡನ್ನು ಪೂರ್ಣವಾಗಿ ಸಾಧಿಸದೆ ಬಿಡುವವಳಲ್ಲ. ನೈತಿಕ ನಿಗ್ರಹದಿಂದ ನೈತಿಕ ಪರಿಣಾಮವು ಗಳೇ ಆಗುವವು. ಇತರ ಎಲ್ಲ ನಿಗ್ರಹಮಾರ್ಗಗಳು ಅವುಗಳು ಯಾವ ಉದ್ದೇಶದಿಂದ ನಿರ್ಮಿತವಾಗಿರುವವೊ ಆ ಮೂಲ ಉದ್ದೇಶವನ್ನೇ ಹಾಳುಮಾಡುವವು. ಕೃತ್ರಿಮೋಪಾಯ ವಾದವು ಸಂಭೋಗವು ಜೀವನಕ್ಕೆ ಆವಶ್ಯಕವೆಂಬ ತರ್ಕವನ್ನಾದರಿಸಿರುವುದು. ಈ ತರ್ಕಕ್ಕಿಂತಲೂ ದೊಡ್ಡದಾದ ಭ್ರಮೆಯು ಮತ್ತೊಂದಿಲ್ಲ. ಜನರ ಸಂಖ್ಯೆಯನ್ನು ಮಿತಿಯಾಗಿಡಬೇಕೆನ್ನುವವರು ಪ್ರಾಚೀನಕಾಲದವರು ಮಾಡಿದ್ದ ನ್ಯಾಯಸಮ್ಮತವಾದ ಉಪಾಯಗಳನ್ನು ಹುಡುಕಿ ತೆಗೆದು, ಅವುಗಳನ್ನು ಹೇಗೆ ಪುನರುಜ್ಜೀವನಗೊಳಿಸಬೇಕೆಂಬ ಮಾರ್ಗವನ್ನು ಕಂಡುಹಿಡಿಯಲಿ. ಅದರ ಮುಂದಿರುವ ಅಗತೆಯ ಕೆಲಸವು ಬಹಳ ದೊಡ್ಡದಾಗಿದೆ. ಜನಸಂಖ್ಯೆಯು ಹೆಚ್ಚುವುದಕ್ಕೆ ಬಾಲ್ಯವಿವಾಹವೂ ಒಂದು ಕಾರಣವಾಗಿದೆ. ನಿರೋಧವಿಲ್ಲದ ಜನನ ಸಂಖ್ಯೆಯು ಮಿತಿಮೀರಿ ಬೆಳೆಯುತ್ತಿರುವುದಕ್ಕೆ ಈಗಣ ಜೀವನಕ್ರಮವೂ ಪ್ರಬಲವಾದ ಕಾರಣಗಳಲ್ಲೊಂದಾಗಿದೆ. ಈ ಕಾರಣಗಳನ್ನು ಸರಿಯಾಗಿ ಶೋಧಿಸಿ ಅದರ ನಿವಾರಣೆಯನ್ನು ಮಾಡಿದರೆ, ಸಮಾಜವು ಕೂಡ ಅದರಿಂದ ನೈತಿಕೋನ್ನತಿಯನ್ನು ಹೊಂದುವುದು. ಸುಧಾರಣೆಯ ಆತುರವುಳ್ಳ ಅಂಧಶ್ರದ್ಧಾಳುಗಳು ಇದನ್ನು ದುರ್ಲಕ್ಷಿಸಿದರೆ, ಕೃತ್ರಿಮ ಉಪಾಯಗಳು ನಿತ್ಯಸಾಧನಗಳಾದರೆ, ಆಗ ನೈತಿಕ ಅವನತಿಯು ವಿನಾ ಮತ್ತಾವ ಪರಿಣಾಮವೂ ಆಗಲಾರದು.

ಹಲವು ಕಾರಣಗಳಿಂದ ಈಗಾಗಲೆ ದುರ್ಬಲವಾಗಿರುವ ಸಮಾಜವು ಕೃತ್ರಿಮ ಉಪಾಯಗಳನ್ನವಲಂಬಿಸಿ ಇನ್ನೂ ಹೆಚ್ಚು ದುರ್ಬಲವಾಗುವುದೆಂಬುದರಲ್ಲಿ ಸಂದೇಹವಿಲ್ಲ. ಆದುದರಿಂದ ಮುಂದಾಲೋಚನೆಯಿಲ್ಲದೆ ಕೃತ್ರಿಮ ಉಪಾಯಗಳ ವಾದಿಗಳಾದವರು ಈ ವಿಷಯವನ್ನು ಮತ್ತೊಮ್ಮೆ ಚೆನ್ನಾಗಿ ಅಧ್ಯಯನ ಮಾಡುವುದುತ್ತಮವಲ್ಲದೆ, ಅವರು ಅಪಾಯಕರವಾದ ತಮ್ಮ ಚಳವಳವನ್ನು ನಿಲ್ಲಿಸಿ ವಿವಾಹಿತ ಅವಿವಾಹಿತರಿಬ್ಬರಲ್ಲಿಯೂ ಬ್ರಹ್ಮಚರ್ಯೆಯನ್ನು ಬೋಧಿಸುವುದು ಶ್ರೇಯಸ್ಕರವಾದುದು. ಗರ್ಭನಿರೋಧಕ್ಕೆ ಇದೊಂದೇ ಘನವಾದ ಮತ್ತು ಸರಳವಾದ ಮಾರ್ಗವಾಗಿದೆ.

## ೩ ಕೆಲವು ವಿತರ್ಕಗಳ ವಿವೇಚನೆ *

ಮುಂಚೆ ನಿರೀಕ್ಷಿಸಿದ್ದಂತೆ ಗರ್ಭನಿರೋಧ ವಿಚಾರದಲ್ಲಿ ನಾನು ಬರೆದಿದ್ದ ಲೇಖನವು ಕೃತ್ರಿಮ ಉಪಾಯಗಳ ಪರವಾಗಿ ಉತ್ಸಾಹಪೂರ್ಣವಾದ ಪತ್ರವ್ಯವಹಾರಕ್ಕೆ ಅವಕಾಶವಿತ್ತಿರುವುದು. ಅದರಲ್ಲಿ ನಾನು ಮೂರು ಪತ್ರಗಳನ್ನು ಮಾತ್ರ ಆರಿಸುವೆನು. ನಾಲ್ಕನೆಯ ಕಾಗದವೊಂದಿದೆ. ಅದು ಬ್ರಹ್ಮಜ್ಞಾನದ ವಿಚಾರಗಳಿಂದ ತುಂಬಿರುವುದು. ಆದುದರಿಂದ ಅದನ್ನು ಇಲ್ಲಿ ನಾನು ಪ್ರಕಟಿಸುವುದಿಲ್ಲ. ಮೂರು ಪತ್ರಗಳಲ್ಲಿ ಒಂದರ ಒಕ್ಕಣೆಯು ಹೀಗಿರುವುದು :—

"ನೀವು 'ಗರ್ಭನಿರೋಧ' ವೆಂಬ ವಿಷಯವಾಗಿ ಬರೆದ ಲೇಖನವನ್ನು ವಿಶೇಷ ಆಸಕ್ತಿಯಿಂದ ನಾನು ಓದಿದೆನು. ಆ ವಿಷಯವು ಈಗ ಬಹುಜನ ವಿದ್ಯಾವಂತರ ಮನಸ್ಸನ್ನು ಆಕರ್ಷಿಸಿರುವುದು. ಆ ಸಂಬಂಧವಾಗಿ ನಾವು ಕಳೆದ ವರ್ಷ ದೀರ್ಘವೂ ಆವೇಶಪೂರ್ಣವೂ ಆದ ವಾದವಿವಾದಗಳನ್ನು ಮಾಡಿದೆವು. ಅದರಿಂದ ತಿಳಿದುಬಂದುದೇನಂದರೆ :—(೧) ಈ ಸಮಸ್ಯೆಯ ವಿಚಾರದಲ್ಲಿ ಯುವಕರು ವಿಶೇಷ ಆಸಕ್ತಿಯನ್ನು ತೋರುತ್ತಿರುವರು. (೨) ಅದರ ಸಂಬಂಧವಾಗಿ ವಿಶೇಷ ಲಜ್ಜೆಯೂ ದುರ್ನಿರ್ಣಯವೂ ಪ್ರಚಾರದಲ್ಲಿರುವುದು. (೩) ಅದರ ಸಂಬಂಧವಾಗಿ ನಿರಾತಂಕವಾದ ಬಹಿರಂಗ ಚರ್ಚೆಯನ್ನು ಮಾಡುವಾಗ ಸಭ್ಯತನವೆಂಬದರ ಅರಿವಿಗೆ ವಿಶೇಷ ಧಕ್ಕೆಯುಂಟಾಗಲಾರದು. ನಿಮ್ಮ ಲೇಖನವು ನನಗೆ ಹೊಸ ಆಲೋಚನೆಯ ಮಾರ್ಗವನ್ನು ತೋರಿಸಿದೆ. ನನ್ನ ಮನಸ್ಸಿನಲ್ಲಿ ಉದಯಿಸತಕ್ಕ ಅನೇಕ ಸಂಶಯಗಳನ್ನು ನಿವಾರಿಸುವುದಕ್ಕೆ ಸ್ವಲ್ಪ ಹೆಚ್ಚು ಜ್ಞಾನವನ್ನು ಉಂಟುಮಾಡಿಕೊಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

"ಗರ್ಭನಿರೋಧದ ಅವಶ್ಯಕತೆಯ ವಿಷಯವಾಗಿ ಭಿನ್ನಾಭಿಪ್ರಾಯಗಳು ಇಲ್ಲವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. 'ಬ್ರಹ್ಮಚರ್ಯವು ಆದರ್ಶ ಸಾಧನೆಮಾಡುವವರಿಗೆ ತಪ್ಪದೆ ಹಿತವನ್ನುಂಟುಮಾ

* ಸನ್ ೧೯೨೫ನೆ ಏಪ್ರಿಲ್ ತಿಂಗಳ ೨ನೆಯ ತಾರೀಖಿನ ಯಂಗ್ ಇಂಡಿಯಾದಿಂದ.

ಡುವ ಏಕಮಾತ್ರ ಉಪಾಯವಾಗಿದೆ' ಎಂಬುದನ್ನು ಕೂಡ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈ ಸಮಸ್ಯೆಯು ಆತ್ಮಸಂಯಮನದ್ದಾಗಿರದೆ ಗರ್ಭನಿರೋಧದ್ದಾಗಿಲ್ಲವೆ ಎಂಬುದು ನನ್ನ ಪ್ರಶ್ನೆ. ಹಾಗಾದರೆ ಸಾಮಾನ್ಯ ಮನುಷ್ಯನಿಗೆ ಆತ್ಮಸಂಯಮದಿಂದ ಗರ್ಭನಿರೋಧ ಮಾಡುವುದು ಸಾಧ್ಯವೇ ಎಂಬುದನ್ನು ನೋಡೋಣ.

"ಈ ಸಮಸ್ಯೆಯನ್ನು ವ್ಯಕ್ತಿ ಮತ್ತು ಸಮಾಜ ಎಂಬ ಎರಡು ಬಗೆಯ ದೃಷ್ಟಿಯಿಂದ ಪರೀಕ್ಷಿಸಬಹುದೆಂದು ನನ್ನ ನಂಬಿಕೆ. ಪ್ರತಿಯೊಬ್ಬ ವ್ಯಕ್ತಿಯು ತನ್ನ ಇಂದ್ರಿಯ ತೃಷ್ಣೆಗಳನ್ನು ನಿರೋಧಿಸಿ, ತನ್ನ ಆತ್ಮಶಕ್ತಿಯನ್ನು ವಿಕಾಸಗೊಳಿಸುವುದು ಅವನ ಕರ್ತವ್ಯವಾಗಿರುವುದು. ಈ ಉಚ್ಚವಾದ ಧ್ಯೇಯವನ್ನು ತಮ್ಮ ಮುಂದಿಟ್ಟುಕೊಂಡು ಅದನ್ನೇ ಸಾಧಿಸುವ ವಿಶೇಷ ನೈತಿಕ ಬಲವುಳ್ಳ ಕೆಲವು ಜನರು ಎಲ್ಲಾ ಕಾಲದಲ್ಲಿಯೂ ಇದ್ದೇ ಇರುವರು. ಆದರೆ ಈಗ ನಾವು ಬಿಡಿಸಲೆತ್ನಿಸಿರುವ ಗರ್ಭನಿರೋಧ ಸಮಸ್ಯೆಯ ಕಣ್ಣಾರಿಕೆಯು ಅವರಿಗೇನಾದರೂ ಇರುವುದೇ ಎಂದು ನನ್ನ ಭಾವನೆ. ಸನ್ಯಾಸಿಯು ಮುಕ್ತಿಗೋಸ್ಕರ ಹೊರಟಿರುವನು, ಗರ್ಭನಿರೋಧಕ್ಕಾಗಿ ಅಲ್ಲ.

"ಆದರೆ ಬಹು ಪಕ್ಷದ ಜನರಿಗೆ ವಿಶೇಷ ಮಹತ್ವದ್ದೆನಿಸಿರುವ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಪ್ರಶ್ನೆಗಳನ್ನು ಒಂದು ನ್ಯಾಯಸಮ್ಮತವಾದ ನಿಯಮಿತಕಾಲದೊಳಗಾಗಿ ಈ ಉಪಾಯವು ಬಿಡಿಸಬಲ್ಲುದೆ? ಈಗಲೂ ವಿವೇಚನೆಯುಳ್ಳ ಮತ್ತು ವಿವೇಕಿಯಾದ ಪ್ರತಿಯೊಬ್ಬ ಗೃಹಸ್ಥನೂ ಈ ಸಮಸ್ಯೆಯನ್ನು ಬಿಡಿಸಬೇಕಾಗಿದೆ. ಒಬ್ಬನು ಎಷ್ಟು ಜನ ಮಕ್ಕಳ ಹೊಟ್ಟೆ ಬಟ್ಟೆ ನೋಡಿ, ಅವರಿಗೆ ವಿದ್ಯಾಭ್ಯಾಸ ಮಾಡಿಸಿ, ಅವರ ಜೀವನ ಕ್ರಮವನ್ನು ನಿರ್ಣಯಿಸಬಲ್ಲನು ಎಂಬೀ ಪ್ರಶ್ನೆಗೆ ತಡವಿಲ್ಲದೆ ಉತ್ತರವು ದೊರೆಯಬೇಕಾಗಿದೆ. ಸಂತಾನೋತ್ಪಾದನೆಯ ಆವಶ್ಯಕತೆಯು ನಿವಾರಣೆಯಾದನಂತರ ಸಂಭೋಗ ಸುಖವನ್ನು ಅನೇಕ ಜನರು ಸಂಪೂರ್ಣವಾಗಿ ಬಿಟ್ಟುಬಿಡುವರೆಂದು ನಿಮಗೆ ಗೊತ್ತಿರುವ ಮಾನವ ಸ್ವಭಾವದ ಅನುಭವದಿಂದ ನೀವು ನಿರೀಕ್ಷಿಸಬಲ್ಲಿರಾ? ಆದರೆ ನಮ್ಮ ಸ್ಮೃತಿಕಾರರ ಸಮ್ಮತಿಯನ್ನು ಪಡೆದ

ನ್ಯಾಯಸಮ್ಮತವಾದ ಮತ್ತು ಮಿತಿಯುಳ್ಳ ರೀತಿಯಲ್ಲಿ ಇಂದ್ರಿಯ ಭೋಗಸಾಧನೆ ಮಾಡುವುದಕ್ಕ ನೀವು ಅನುಮತಿಯನ್ನು ಕೊಡುವಿರೆಂದು ನಾನು ನಂಬುತ್ತೇನೆ. ಬಹುಪಕ್ಷದ ಜನರು ಇಂದ್ರಿಯ ತೃಷ್ಣೆಯಲ್ಲಿ ಮಗ್ನರಾಗದೆ ಅಥವಾ ಅದನ್ನು ಒತ್ತಿಡದೆ ಕೇವಲ ಮಿತಿಗೊಳಿಸುವಂತೆ ನಾವು ಬೋಧಿಸಬಹುದು. ಆದರೆ ಇದು ಸಾಧ್ಯವಾದರೂ ಕೂಡ ಇದರಿಂದ ಜನನ ಸಂಖ್ಯೆಯು ನಿರೋಧವಾಗಬಲ್ಲುದೆ? ಆಗ ನಾವು ಉತ್ತಮರಾದ ಜನರನ್ನು ಉಂಟಾಗಿರಬಹುದು. ಆದರೆ ಅದರಿಂದ ಜನಸಂಖ್ಯೆಯು ಕಡಿಮೆಯಾಗಲಾರದು. ನಿಜವಾಗಿ ನೋಡಿದರೆ ಕಾರ್ಯಸಾಧಕವಲ್ಲದುದಕ್ಕಿಂತಲೂ ಕಾರ್ಯಪರ ಜನತೆಯ ಬೆಳವಣಿಗೆಯು ಜಾಗ್ರತೆಯಾಗಿ ಆಗುವುದರಿಂದ ಆಗ ಜನಸಂಖ್ಯೆಯ ಸಮಸ್ಯೆಯು ವಿಶೇಷ ತೀವ್ರವಾಗುವುದು. ಪಶುಗಳನ್ನು ಚೆನ್ನಾಗಿ ಸಾಕುವ ಕಲೆಯಿಂದ ನಮಗೆ ಹೆಚ್ಚು ಮತ್ತು ಉತ್ತಮವಾದ ಪಶುಗಳು ದೊರೆಯುವವು. ಅದರಿಂದ ಪಶುಗಳ ಸಂಖ್ಯೆಯು ಕಡಿಮೆಯಾದಂತಾಗುವುದಿಲ್ಲ.

"'ಸಂಭೋಗವು ಸಂತಾನೋತ್ಪಾದನೆಗಾಗಿಯೇ ವಿನಾ ಸುಖಕ್ಕಲ್ಲ' ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ ಸುಖವೇ-ಅದು ಮುಖ್ಯವಲ್ಲವಾದರೂ-ಅದರ ಏಕಮಾತ್ರವಾದ ಪ್ರೇರಣೆಯಾಗಿದೆ ಎಂಬುದನ್ನು ನೀವು ಒಪ್ಪಲೇಬೇಕು. ತನ್ನ ಉದ್ದೇಶ್ಯವನ್ನು ಸಾಧಿಸುವುದಕ್ಕೆ ನಿಸರ್ಗವು ಅದೊಂದು ಮೋಹವನ್ನು ಉಂಟುಮಾಡಿರುವುದು. ಸುಖವಿಲ್ಲದಿದ್ದಲ್ಲಿ ಎಷ್ಟು ಜನರು ಅದನ್ನು ನೆರವೇರಿಸಲೆತ್ನಿಸುತ್ತಿದ್ದರು? ಮತ್ತು ಎಷ್ಟು ಜನರು ನೆರವೇರಿಸಿಯೇ ಬಿಡುತ್ತಿದ್ದರು? ಎಷ್ಟು ಜನರು ಸುಖಕ್ಕಾಗಿ ಹೋಗಿ ಸಂತಾನ ಹೊಂದುತ್ತಿದ್ದರು? ಮತ್ತು ಎಷ್ಟು ಜನರು ಸಂತಾನೋತ್ಪಾದನೆಗೆ ಹೋಗಿ ಸುಖವನ್ನು ಪಡೆಯುತ್ತಿದ್ದರು? 'ಸಂತಾನೋತ್ಪಾದನೆಯ ಇಚ್ಛೆಯಿಲ್ಲದ ಸಂಯೋಗವು ನೀಚಕೃತ್ಯ' ಎಂದು ನೀವು ಹೇಳುವಿರಿ. ಹಾಗೆ ಹೇಳುವುದು ನಿಮ್ಮಂತಹ ಸನ್ಯಾಸಿಗಳಿಗೆ ಒಪ್ಪುವುದು. ಏಕೆಂದರೆ ಇತರರನ್ನು ಹೆಚ್ಚಾಗಿ ಪ್ರೀತಿಸದವನು ತನ್ನನ್ನೂ ಕಡಿಮೆಯಾಗಿಯೇ ಪ್ರೀತಿಸಿಕೊಳ್ಳುವನು. ತನಗೆ

ಆವಶ್ಯವಾದುದಕ್ಕಿಂತಲೂ ಹೆಚ್ಚು ಧನವುಳ್ಳವನು 'ಕಳ್ಳ' ಮತ್ತು 'ದರೋಡೆ ಮಾಡುವವನು' ಎಂದೆನಿಸಿಕೊಳ್ಳುವನು ಎಂದು ನೀವೇ ಬೋಧಿಸಿಲ್ಲವೇ? ಆದರೆ ದುರ್ಬಲರಾದ ಬಡ ಮಾನವರ ವಿಚಾರದಲ್ಲಿ ನೀವೇಕೆ ಅಷ್ಟು ಕ್ರೂರರಾಗಿರುವಿರಿ? ಸಾಮಾನ್ಯ ಸಂದರ್ಭಗಳಲ್ಲಿ ಸಂತಾನೋತ್ಪಾದನೆಯ ಇಚ್ಛೆಯು ಮದುವೆಯಾದ ಕೆಲವು ವರುಷಗಳ ನಂತರ ಇರುವುದೇ ಇಲ್ಲ. ಅನಂತರದ ಸಂಯೋಗವು ನೀಚ ಕೃತ್ಯವಾಗುವುದೊ? ಆ ನೀಚ ಕೃತ್ಯವನ್ನು ಮಾಡಲು ಭಯಪಡುವ ಮನುಷ್ಯನು ವಿಶ್ರಾಂತಿಯನ್ನೀಯದ ಅವನ ಇಂದ್ರಿಯ ತೃಷ್ಣೆಗಳನ್ನು ಬಲವಾಗಿ ಬದಿಗೊತ್ತುವುದರಿಂದ ನೈತಿಕ ಯಶಸ್ಸನ್ನು ಹೊಂದುವನೆಂದು ನೀವು ತಿಳಿಯುವಿರೊ? ಕೊನೆಗೆ, ತನಗೆ ಆವಶ್ಯವಿರುವುದಕ್ಕಿಂತಲೂ ಹೆಚ್ಚಾದ ಸಂಪತ್ತನ್ನುಳ್ಳ 'ಕಳ್ಳ'ರಿಗೆ ನೀವು ಸಹಾನುಭೂತಿಯನ್ನು ತೋರಿ, ಸಂತಾನೋತ್ಪಾದನೆಯ ತೃಷ್ಣೆಯು ತೃಪ್ತಿಯಾದನಂತರ ಸಂಭೋಗವನ್ನು ಮಾಡುವ 'ಅಪರಾಧಿ'ಗಳನ್ನು ನೀವು ತಿರಸ್ಕರಿಸುವುದೇಕೆ? ಪ್ರಾಯಶಃ ಸುಧಾರಣೆ ಮಾಡುವುದಕ್ಕೆ 'ಕಳ್ಳರು' ಹೆಚ್ಚು ಸಂಖ್ಯೆಯಿಂದಲೂ ಪ್ರಬಲರಾಗಿಯೂ ಇರುವರೆಂದೋ?

"'ಕೃತ್ರಿಮ ಉಪಾಯಗಳು ದುರ್ಗುಣಗಳನ್ನು ಸಂಭಾವಿಸುವಂತಿರುವವು. ಅವುಗಳು ಸ್ತ್ರೀಪುರುಷರನ್ನು ಅಜಾಗರೂಕರನ್ನಾಗಿ ಮಾಡುವವು' ಎಂದು ಹೇಳುವಿರಿ. ಇದು ನಿಜವಾಗಿದ್ದರೆ ದೊಡ್ಡ ಅಪರಾಧವೇ ಸರಿ. ಅತಿಸಂಭೋಗವನ್ನು ನಿರೋಧಿಸುವ ವಿಚಾರದಲ್ಲಿ ಸಾರ್ವಜನಿಕ ಅಭಿಪ್ರಾಯವು ಯಾವಾಗಲಾದರು ಪ್ರಬಲವಾಗಿದ್ದೀತೇ ಎಂದು ನಾನು ಕೇಳುತ್ತೇನೆ. ಕುಡುಕರು ಅಂತಹ ಅಭಿಪ್ರಾಯಗಳಿಗೆ ಹೆದರಿ ತಮ್ಮ ತೃಷ್ಣೆಯನ್ನು ನಿಗ್ರಹಿಸಿರುವ ಉದಾಹರಣೆಗಳು ನನಗೆ ಗೊತ್ತಿರುವುದು. ಆದರೆ 'ಹುಟ್ಟಿಸಿದ ದೇವರು ಹುಲ್ಲು ಮೇಯಿಸುವನೆ' 'ದೇವರು ಕೊಟ್ಟಷ್ಟು ಮಕ್ಕಳಾಗುವವು' ಅಥವಾ 'ಅದೃಷ್ಟದಲ್ಲಿದ್ದಷ್ಟು ಸಂತಾನ' ಎಂಬೀ ನಾಣ್ಣುಡಿಗಳನ್ನೂ, 'ಹೆಚ್ಚು ಮಕ್ಕಳ ಸಂಖ್ಯೆಯು ತಂದೆಯ ಗಂಡಸುತನವನ್ನು ತೋರುವುದೆಂಬ ಹೇಳಿಕೆಯನ್ನೂ' ನಾನು ಕೇಳಿರುವೆನು. ಈ ಅಭಿಪ್ರಾಯದಿಂದ ಸಂಭೋಗ

ಕ್ರಿಯೆಯು ವಿವಾಹದ ಬಂಧನವೆಂದು ತಿಳಿದು ತಮ್ಮ ಪತ್ನಿಯರ ಮೇಲೆ ಅಧಿಕಾರ ನಡೆಯಿಸುವ ಪತಿಗಳ ಉದಾಹರಣೆಗಳು ನನಗೆ ಗೊತ್ತಿವೆ. ಆದರೆ, 'ಕೃತ್ರಿಮ ಉಪಾಯಗಳಿಂದ ಸತ್ವಹೀನತೆಯೂ ನರಗಳ ದೌರ್ಬಲ್ಯವೂ ಉಂಟಾಗಬೇಕೆಂಬುದು' ನಿಜವೆ? ಉಪಾಯಗಳ ವಿಧಾನಗಳು ಎಷ್ಟೋ ವಿಧವಾಗಿರುವವು. ವಿಜ್ಞಾನಶಾಸ್ತ್ರವು ನಿರ್ಬಾಧಕ ಉಪಾಯವನ್ನು ಈಗಾಗಲೆ ಕಂಡುಹಿಡಿದಿರಬಹುದು. ಅಥವಾ ಶೀಘ್ರದಲ್ಲಿಯೇ ಕಂಡುಹಿಡಿಯಬಹುದು. ಇದೇನೂ ಮನುಷ್ಯನ ಬುದ್ಧಿಗೆ ಮೀರಿದುದಲ್ಲ.

“ಆದರೆ ಆ ಉಪಾಯವು ಎಷ್ಟು ನಿರ್ಬಾಧಕವಾಗಿದ್ದರೂ ಅದನ್ನು ಉಪಯೋಗಿಸಬಾರದು. ಏಕೆಂದರೆ, ತನ್ನ ಕ್ರಿಯೆಯ ಪರಿಣಾಮದಿಂದ ತಪ್ಪಿಸಿಕೊಳ್ಳಲೆತ್ನಿಸುವುದು ನೀತಿವಿರುದ್ಧವಾದ ಮಹದಪರಾಧವಾಗಿರುವುದೆಂದು' ನೀವು ಹೇಳುತ್ತೀರಿ. ಇದು ಅವಜ್ಞ್ಯವಾದುದು. ಸಂತಾನೋತ್ಪಾದನೆಯ ಇಚ್ಛೆಯಿಲ್ಲದೆ, ಮಿತಿಯಾಗಿಯಾದರೂ ಇಂದ್ರಿಯ ತೃಷ್ಣೆಯನ್ನು ತೃಪ್ತಿಗೊಳಿಸುವುದು ನೀತಿ ವಿರುದ್ಧವೆಂದು ನೀವು ತಿಳಿಯುವಿರಿ. ತನ್ನ ಕ್ರಿಯೆಯ ಪರಿಣಾಮವಾಗಿ ಫಲಿಸುವ ಸಂತಾನೋತ್ಪಾದನೆಯ ಭಯದಿಂದ ಯಾರಾದರೂ ನಿಗ್ರಹಕ್ಕೊಳಗಾಗಿರುವರೇನು ? ಅದು ಏನೇ ಇರಲಿ, ಅನೇಕರು ತಮ್ಮ ಆರೋಗ್ಯ ಮತ್ತು ಸುಖದ ವಿಚಾರದಲ್ಲಿ ಜಾಗರೂಕತೆಯನ್ನು ವಹಿಸದೇ ಅಳಲೇಕಾಯಿ ಪಂಡಿತರ ಸಹಾಯವನ್ನು ಪಡೆಯಲೆತ್ನಿಸುವರು. 'ತನ್ನ ಕ್ರಿಯೆಯ ಪರಿಣಾಮದಿಂದ ತಪ್ಪಿಸಿಕೊಳ್ಳಲೆತ್ನಿಸಿ,' ಎಷ್ಟು ಗರ್ಭಪಾತಗಳು ಆಗುತ್ತಿಲ್ಲ ? ಆದರೆ ಆ 'ಭಯವು' ಪರಿಣಾಮಕರವಾದ ಫಲವನ್ನು ಕೊಡುವ ನಿಗ್ರಹ ವಿಧಾನವಾಗಿದ್ದರೂ ಅದರಿಂದಾಗುವ ನೈತಿಕ ಫಲದ ಪರಿಣಾಮವು ಕಡಿಮೆಯಾಗಿಯೆ ಇರುವುದು. ಅದಲ್ಲದೆ ತಂದೆತಾಯಿಗಳ ಪಾಪದ ಹೊರೆಯು ಅವರ ಸಂತಾನದ ತಲೆಯ ಮೇಲೆ ಬೀಳಬೇಕೆಂಬುದೂ, ವ್ಯಕ್ತಿಗಳ ಅವಿಚಾರದಿಂದ ಸಮಾಜಕ್ಕೆ ಕೆಡುಕಾಗುವುದೂ ಯಾವ ನ್ಯಾಯ. 'ನಿಸರ್ಗದೇವತೆಯ ನಿಷ್ಕರುಣೆಯೆಂಬುದೂ, ತನ್ನ

ನಿಯಮೋಲ್ಲಂಘನೆಯನ್ನು ಮಾಡಿದವರಿಗೆ ಪೂರ್ಣ ಪ್ರತೀಕಾರ ಮಾಡ ದಿರುವುದಿಲ್ಲವೆಂಬುದೂ' ನಿಜ. ಆದರೆ ಕೃತ್ರಿಮ ಉಪಾಯಗಳ ಸಾಧ ನೆಯೇ **ಆ ನಿಯಮೋಲ್ಲಂಘನೆ**ಯೆಂದು ಏಕೆ ತಿಳಿದುಕೊಳ್ಳಬೇಕು? ಕೃತ್ರಿಮವಾದ ಹಲ್ಲುಗಳನ್ನೂ ಕಣ್ಣುಗಳನ್ನೂ ಅವಯವಗಳನ್ನೂ ಇಟ್ಟುಕೊಳ್ಳುವುದು 'ಅಸ್ವಾಭಾವಿಕ' ವೆಂದು ಯಾರೂ ಹೇಳುವು ದಿಲ್ಲ. ಯಾವುದು ನಮ್ಮ ಯೋಗಕ್ಷೇಮಕ್ಕೆ ಹಿತಕರವಾಗಿರುವುದಿಲ್ಲವೊ ಅದು ಅಸ್ವಾಭಾವಿಕವೆಂದು ಹೇಳಬಹುದು. ಮಾನವ ಜಾತಿಯು ಸ್ವಾಭಾವಿಕವಾಗಿ ದುಷ್ಟವಾಗಿರುವುದೆಂತಲೂ ಈ ಕೃತ್ರಿಮ ವಿಧಾನಗ ಳಿಂದ ಅದರ ದುಷ್ಟ ಗುಣವು ಹೆಚ್ಚುವುದೆಂತಲೂ ನಾನು ನಂಬುವು ದಿಲ್ಲ. ಈಗ ಹಿಂದೂಸ್ಥಾನದಲ್ಲಿಯೂ ಕೂಡ ಸಂಭೋಗ ವಿಚಾರದಲ್ಲಿ ಬೇಕಾದಷ್ಟು ಸ್ವಾತಂತ್ರ್ಯವಿದೆ. ಈ ಹೊಸ ಉಪಾಯವನ್ನು ದುರು ಪಯೋಗಪಡಿಸುವಷ್ಟೇ ಪರಿಮಾಣದಲ್ಲಿ ಅದನ್ನು ಸರಿಯಾದ ರೀತಿಯ ಲ್ಲಿಯೂ ಉಪಯೋಗಪಡಿಸಬಹುದೆಂಬುದನ್ನು ಸುಲಭವಾಗಿ ಸಿದ್ಧಾಂತ ಪಡಿಸಬಹುದು. ಆದರೆ ಮಾನವನು ತನ್ನೀ ಮಹಾಪರಿಮಾಣವುಳ್ಳ ಶಕ್ತಿಯಿಂದ ನಿಸರ್ಗವನ್ನು ಗೆಲ್ಲುವ ಸ್ಥಿತಿಗೆ ಬಂದಿರುವನೆಂಬುದನ್ನು ನಾವು ಒಪ್ಪಿಕೊಳ್ಳಬೇಕು. ಅದನ್ನು ದುರ್ಲಕ್ಷಿಸಿದರೆ ನಮಗೇ ಹಾನಿ. ಸಾಧ್ಯವಾದ ಮಟ್ಟಿಗೆ ಕೃತ್ರಿಮ ಸಾಧನೆಗಳ ಪರಿಣಾಮವು ಹೆಚ್ಚು ಬೆಳೆ ಯದಂತೆ ಪ್ರಯತ್ನಿಸುವುದು ಬುದ್ಧಿವಂತಿಕೆಯೆನಿಸಿಕೊಳ್ಳುವುದು. ಅದ ನ್ನು ನಿಷೇಧಿಸುವುದು ಬುದ್ಧಿವಂತಿಕೆಯಲ್ಲ. ಕೆಲವು ಮಹಾ ಉದಾರ ಭಾವದ ಸಮಾಜಸೇವಕರು ಈ ಉಪಾಯಗಳನ್ನು ಮಾನವರು ಆತ್ಮ ಸಂಯಮ ಸಾಧನೆಗೆ ಅಣಿಯಾಗುವಂತೆ ಸಹಾಯಮಾಡಲು ಪ್ರಚಾರ ಮಾಡುತ್ತಿರುವರೇ ಹೊರತು ಇಂದ್ರಿಯ ಭೋಗಮಗ್ನತೆಗಾಗಿ ಅದನ್ನು ಮಾಡುತ್ತಿಲ್ಲ. ಮತ್ತೆ ಸ್ತ್ರೀ ಮತ್ತು ಅವಳ ಆವಶ್ಯಕತೆಗಳನ್ನು ನಾವು ಬಹುಕಾಲದಿಂದ ದುರ್ಲಕ್ಷಿಸಿರುವೆವು. ಆಕೆಯು ಕೂಡ ಈ ವಿಚಾರ ದಲ್ಲಿ ತನ್ನ ಹೇಳಿಕೆಯನ್ನು ಮುಂದೂಡಬೇಕೆಂದಿರುವಳು. ಏಕೆಂದರೆ ಮಾನವನು ತನ್ನ ಶರೀರವನ್ನು ಕೇವಲ 'ಸಂತಾನೋತ್ಪಾದನೆಗಾಗಿ

ರುವ ಉತ್ತಿದಭೂಮಿ ' ಯೆಂದು ತಿಳಿದು ಅದರಂತೆ ವರ್ತಿಸುವುದನ್ನು ಆಕೆಯು ತಿರಸ್ಕರಿಸುವಳು.

" ನಿತ್ಯಕ್ಲೇಶ ಮತ್ತು ಅಗಚಾಟಲುಗಳಿಂದ ಯುಕ್ತವಾದ ದೊಡ್ಡ ಕುಟುಂಬವನ್ನು ಸ್ತ್ರೀಯು ಅರೈಕೆ ಮಾಡಲು, ಈಗಣ ನಾಗರಿಕತೆಯ ದಾವತಿಯ ಪರಿಮಾಣವು ಅವಳನ್ನು ಬಿಡುವಂತಿಲ್ಲ. ಡಾ|| ಮೇರಿ ಸ್ಟೋಪ್ಸ್‌ಳೂ ಮಿಸ್ ಎಲ್ಲೆನ್ ಕೀ ಎಂಬಾಕೆಯೂ ಸ್ತ್ರೀಯ ' ನರಗಳ ದೌರ್ಬಲ್ಯ ' ಉಂಟಾಗಬೇಕೆಂದು ಎಂದಿಗೂ ಅಪೇಕ್ಷಿಸುವುದಿಲ್ಲ. ಅವರಿಬ್ಬರೂ ಹೇಳುವ ಉಪಾಯಗಳು ಫಲಕಾರಿಯಾಗಬೇಕಾಗರೆ ಅದಕ್ಕೆ ಸ್ತ್ರೀಯ ಸಹಾಯವು ಅತ್ಯಗತ್ಯವಾಗಿರುವುದು. ಅದರಿಂದ ಅಜಾಗರೂಕ ಸಂಭೋಗ ಮಗ್ನತೆಗಿಂತಲೂ ಜ್ಞಾನಪೂರ್ಣವಾದ ಮಾತೃತ್ವವು ವಿಕಾಸಗೊಳ್ಳುವ ಸಂಭವವೇ ಹೆಚ್ಚಾಗಿರುವುದು. ಅದು ಹೇಗೆ ಇರಲಿ ಕಡಿಮೆಯು ತೊಂದರೆಯ ಉಪಾಯಗಳಿಂದ ದೊಡ್ಡ ದುಃಖದ ಸಾಧನಗಳು ನಿವಾರಣೆಯಾಗುವ ಸಂದರ್ಭಗಳಿರುವವು. ' ನರಗಳ ದೌರ್ಬಲ್ಯವನ್ನು ' ಕೂಡ ಲಕ್ಷಿಸದೆ ಉಪಾಯದಿಂದ ತಪ್ಪಿಸಿಕೊಳ್ಳಬೇಕಾದ ಭಯಂಕರ ರೋಗಗಳೂ ಇರುವವು. ಸಂಯೋಗದಿಂದ ತಪ್ಪಿಸಿಕೊಳ್ಳಲಾಗದಂತಹ ಸ್ವಾಭಾವಿಕವಾಗಿ ಮಗುವು ಮೊಲೆಯುಣ್ಣುವ ತಿಂಗಳುಗಳಿರುವವು. ಆಗ ಗರ್ಭ ನಿಂತರೆ ಅಪಾಯಕರ. ಕೆಲವರು ಹೆಂಗಸರ್‍ಯಾವಾಗಲೂ ಆರೋಗ್ಯದಿಂದಿರುವರು ಆದರೆ ಅವರು ಕೇವಲ ತಮ್ಮ ಪ್ರಾಣಾಪಾಯಕ್ಕೆ ಗುರಿಯಾಗಿ ಮಕ್ಕಳನ್ನು ಹೆರಬಲ್ಲರು.

" ನೀವು ಗರ್ಭ ನಿರೋಧಕ ಚಳವಳಗಾರರಾಗಬೇಕೆಂದು ನಾನು ನಿರೀಕ್ಷಿಸುವುದಿಲ್ಲ. ಅದು ನನ್ನ ಅಪೇಕ್ಷೆಯೂ ಅಲ್ಲ. **ಸತ್ಯ** ಮತ್ತು **ಬ್ರಹ್ಮಚರ್ಯೆಯ** ಶುದ್ಧವಾದ ಜ್ಯೋತಿಯನ್ನು ಹಿಡಿದು, ಅದರ ಸಹಾಯವನ್ನಪೇಕ್ಷಿಸುವವರಿಗೆ ಅದನ್ನು ತೋರುತ್ತಿರುವುದಕ್ಕೆ ನೀವು ಅರ್ಹರಾಗಿರುವಿರಿ. ಅವಿವೇಕಿಗಳಾದ ದಂಪತಿಗಳಿಗಿಂತಲೂ ವಿವೇಕಿಗಳಾದ ದಂಪತಿಗಳೇ ಆ ಬೆಳಕನ್ನು ವಿಶೇಷವಾಗಿ ಅಪೇಕ್ಷಿಸುವರು. ಗರ್ಭನಿರೋಧದ ಆವಶ್ಯಕತೆಯನ್ನರಿತವನು ಆತ್ಮಸಂಯಮದ ವಿಕಾ

ಸವನ್ನು ಸುಲಭವಾಗಿ ಹೊಂದಬಹುದು. ಈಗಣ ಸ್ವಾತಂತ್ರ್ಯವೂ, ಅಜ್ಞಾನವೂ, ವಿಚಾರಶೂನ್ಯತೆಯೂ, ನೀವು ಕೂಡ ಅರಣ್ಯರೋದನ ಮಾಡುತ್ತಿರುವೆನೆಂದು ಭಾವಿಸುವಷ್ಟು ಹೆಚ್ಚಾಗಿರುವವು. ಈಗ ನಿಮ್ಮ ಧರ್ಮಪ್ರತಿಪಾದನೆಯು ಮತ್ತು 'ಮನಸ್ಸಿಲ್ಲದಿದ್ದರೂ ಬರೆದಿರುವ' ಲೇಖನಗಳಿಗಿಂತಲೂ ಜ್ಞಾನಪೂರ್ಣವಾದ ಚರ್ಚೆಯ ಆವಶ್ಯಕತೆಯು ಹೆಚ್ಚಾಗಿರುವುದು. ಅದರಲ್ಲಿ ನೀವು ಸೇರುವುದಿಲ್ಲವಾದರೂ ಅದರ ಆವಶ್ಯಕತೆಯನ್ನು ಒಪ್ಪಿಕೊಳ್ಳಲೇಬೇಕು. ಮತ್ತೆ ಅವಶ್ಯವಿದ್ದರೆ ಮುಂಚಿತವಾಗಿಯೆ ನೀವು ಅದಕ್ಕೆ ಮಾರ್ಗದರ್ಶನ ಮಾಡಿಸಬೇಕು. ಇಲ್ಲವಾದರೆ ಮುಂದೆ ದೊಡ್ಡ ತೆರೆಗಳಿಂದ ಧಕ್ಕೆಯುಂಟಾಗಬಹುದು. ಅಪಾಯವನ್ನು ನೋಡಿ ನಾವು ಕೈಲಾಗದವರಂತೆ ಕಣ್ಣು ಮಿಳಿಕಿಸುತ್ತಿರುವುದರಿಂದಲೂ ಮತ್ತೆ ಈ ವಿಚಾರದಲ್ಲಿ ನಾವು ಹಿಂಜರಿದು ನಿಲ್ಲುವುದರಿಂದಲೂ ಯಾವ ಪ್ರಯೋಜನವೂ ಆಗಲಾರದು."—

ನಾನು ಸನ್ಯಾಸಿಯಾಗಿ ಲೇಖನವನ್ನು ಬರೆದಿಲ್ಲ. ಮತ್ತು ಸನ್ಯಾಸಿಗಾಗಿಯೂ ಬರೆದಿಲ್ಲವೆಂದು ಹೇಳಿ ವಾಚಕರ ಸಂದೇಹವನ್ನು ನಿವಾರಿಸಬೇಕಾಗಿದೆ. ಅದರ ನಿಜವಾದ ಅರ್ಥದಲ್ಲಿ ನಾನು ಸನ್ಯಾಸಿಯಾಗಿರ್ಪವೆನೆಂದು ಹೇಳಿಕೊಳ್ಳಲಾರೆನು ೨೫ ವರುಷ ಕಾಲವನ್ನು ಬಿಟ್ಟು ಉಳಿದ ದೀರ್ಘಕಾಲದಲ್ಲಿ ನಾನು ಮಾಡುತ್ತಿದ್ದ ಪ್ರಯೋಗಗಳ ಅನುಭವವೂ, ಮತ್ತು ಆ ಪ್ರಯೋಗವಲ್ಲಿ ಘಟಿತಾರ್ಥವನ್ನು ನಿಶ್ಚಯಿಸಲು ಸಾಕಾದಷ್ಟು ದೀರ್ಘಕಾಲ ನನ್ನೊಂದಿಗೆ ಸಹಕರಿಸಿದವರ ಅನುಭವವೂ ನನ್ನ ಮಾತುಗಳಿಗೆ ಆಧಾರವಾಗಿರುವವು ನನ್ನಾ ಪ್ರಯೋಗದಲ್ಲಿ ಯುವಕರೂ ಪ್ರೌಢರೂ ಸ್ತ್ರೀಯರೂ ಸೇರಿರುವರು. ಆ ಪ್ರಯೋಗದಲ್ಲಿ ಕೆಲಮಟ್ಟಿಗೆ ಶಾಸ್ತ್ರೀಯ ತಥ್ಯವಿರುವುದೆಂದು ನಾನು ಹೇಳಬಲ್ಲೆನು. ಅದು ಕಡಾಕಡಿಯಾದ ನೈತಿಕ ತತ್ವದ ಆಧಾರವನ್ನುಳ್ಳದಾಗಿರುವುದೆಂಬುದರಲ್ಲಿ ಸಂದೇಹವಿಲ್ಲ. ಆದರೆ ಅದು ಮೊದಲು ಗರ್ಭನಿರೋಧದ ಆಸೆಯಿಂದಲೇ ಪ್ರಾರಂಭವಾಯಿತು. ನನ್ನ ಸ್ವಂತ ವಿಚಾರವಂತೂ ಅದೇ ಉದ್ದೇಶ್ಯ ಪೂರ್ಣವಾಗಿದ್ದಿತು. ಅನೇಕ ನೈತಿಕ ಫಲಗಳು ಪುನರಾಲೋಚನೆಯ ಸ್ವರೂಪದಲ್ಲಿ ಅನಂತರ ವಿಕಾಸಗೊಂಡವು. ಆದರೆ

ಪುನರಾಲೋಚನೆಯು ಸ್ವಾಭಾವಿಕವಾಗಿ ಸಂಪೂರ್ಣ ಸಮನ್ವಯವುಳ್ಳ ರೀತಿಯಲ್ಲಿ ಉಂಟಾದುದು ಸಾರಾಸಾರವಿವೇಕದಿಂದ ನಡೆದರೆ ಆತ್ಮ ಸಂಯಮವನ್ನು ಸುಲಭವಾಗಿ ಸಾಧಿಸಬಹುದೆಂದು ನನ್ನ ಅನುಭವ ದಿಂದ ನಾನು ಸಾರಿ ಹೇಳಬಲ್ಲೆನು. ಹೀಗೆ ಹೇಳುವವನು ನಿಜವಾ ಗಿಯೂ ನಾನೊಬ್ಬನೇ ಆಗಿಲ್ಲ. ಜರ್ಮನಿ ಮತ್ತು ಇತರ ದೇಶಗಳ ನಿಸರ್ಗನಿದಾನ ಶಾಸ್ತ್ರಜ್ಞರೂ ಕೂಡ ಇದನ್ನೆ ಸಾರುತ್ತಿರುವರು. ನೀರಿನ ಗುಣದಿಂದಲೂ ಮಣ್ಣಿನ ಪಟ್ಟುಗಳಿಂದಲೂ ಉಷ್ಣವನ್ನುಂಟುಮಾ ಡದ ಮತ್ತು ಮುಖ್ಯವಾಗಿ ಫಲಗಳೆ ಇರುವ ಆಹಾರದಿಂದಲೂ ಉದ್ರೇ ಕಗೊಳ್ಳುವ ನರಗಳನ್ನು ಶಾಂತಗೊಳಿಸಬಹುದಲ್ಲದೆ, ಆದರಿಂದ ಇಂ ದ್ರಿಯ ವಾಸನೆಯನ್ನು ಸ್ವಾಧೀನಕ್ಕೆ ತಂದುಕೊಂಡು ಶರೀರವನ್ನು ಪುಷ್ಟೀಕರಿಸಬಹುದು. ಉಚ್ಚತರವಾದ ಸಾಧನೆಯ ವಿಚಾರವನ್ನು ಬಿಟ್ಟು ಶಾಸ್ತ್ರೀಯ ರೀತಿಯಿಂದ ಪ್ರಾಣಾಯಾಮವನ್ನು ಮಾಡುವುದ ರಿಂದಲೂ ಇದೇ ಫಲಗಳು ಲಭಿಸುವವೆಂದು ರಾಜಯೋಗಿಗಳು ಸಾರು ವರು. ಈ ವಿಚಾರದಲ್ಲಿ ಪಾಶ್ಚಾತ್ಯಪೌರ್ವಾತ್ಯ ಉಪಾಯಗಳೆರಡೂ ಸನ್ಯಾಸಿಗಾಗಿ ನಿರ್ಮಿತವಾಗದೇ ಕೇವಲ ಗೃಹಸ್ಥನಿಗಾಗಿ ಅನುಗ್ರಹಿಸ ಲ್ಪಟ್ಟಿರುವುವು. ಜನಾಂಗದಲ್ಲಿ ಜನಸಂಖ್ಯೆಯು ಮಿತಿ ಮೀರುತ್ತಿರುವ ದರಿಂದ ಗರ್ಭನಿರೋಧವನ್ನು ಮಾಡಬೇಕೆಂದರೆ, ನಾನು ಆ ವಾದ ವನ್ನು ಖಂಡಿಸುವೆನು. ಅದನ್ನಾರೂ ಸಿದ್ಧಾಂತಗೊಳಿಸಿಲ್ಲ. ನನ್ನ ಅಭಿಪ್ರಾಯದಲ್ಲಿ ಸರಿಯಾದ ಭೂವಿಭಾಗ, ಉತ್ತಮವಾದ ಕೃಷಿ ಮತ್ತು ಉಪಾಂಗವಾಗಿರುವ ಕೈಗಾರಿಕೆ-ಇವುಗಳಿಂದ ಈ ದೇಶವು ಈಗಿನಗಿಂ ತಲೂ ಎರಡರಷ್ಟು ಜನರನ್ನು ಪೋಷಿಸಬಲ್ಲದಾಗಿದೆ. ಆದರೆ, ದೇಶದ ಈಗಣ ರಾಜಕೀಯ ಪರಿಸ್ಥಿತಿಯ ದೃಷ್ಟಿಯಿಂದ ನಾನು ಗರ್ಭನಿರೋಧ ವಾದಿಗಳ ಪಂಗಡದೊಂದಿಗೆ ಸೇರಿಕೊಂಡಿರುವೆನು.

ಸಂತಾನೋತ್ಪಾದನೆಯ ಆವಶ್ಯಕತೆಯು ಮುಗಿದನಂತರ ಇಂ ದ್ರಿಯಭೋಗಮಗ್ನತೆಯನ್ನು ಬಿಟ್ಟುಬಿಡಬೇಕೆಂದು ನಾನು ಸೂಚಿಸು ವೆನು. ಆತ್ಮಸಂಯಮದ ಉಪಾಯವು ಲೋಕಪ್ರೀತಿಗೆ ಪಾತ್ರವಾಗು ವಂತೆಯೂ ಪರಿಣಾಮಕರವಾಗುವಂತೆಯೂ ಮಾಡಬಹುದು. ಸುಶಿ

ಕ್ಷಿತ ಜನರು ಅದನ್ನು ಈವರೆಗೆ ಪರೀಕ್ಷಿಸಿಲ್ಲ. ಆದರೆ ದೈವಾನುಗ್ರಹ ದಿಂದ ಅವಿಭಕ್ತಕುಟುಂಬ ಪದ್ಧತಿಯ ದೆಸೆಯಿಂದ ಅವರಿಗೆ ಅದರ ಆವ ಶ್ಯಕತೆ ಇನ್ನೂ ತೋರಿಬಂದಿಲ್ಲ. ಅದರಲ್ಲಡಕವಾಗಿರುವ ನೈತಿಕ ಫಲ ಗಳ ಕಡೆಗೆ ಅವರ ಗಮನವು ಹೋಗಿಲ್ಲ. ಸಂತತಿಯ ಸಂಖ್ಯೆಯನ್ನು ಮಿತಗೊಳಿಸುವ ನಿಶ್ಚಿತ ಉದ್ದೇಶ್ಯದಿಂದ ಆತ್ಮಸಂಯಮವನ್ನು ಪ್ರಚಾ ರಗೊಳಿಸಲು, ಬ್ರಹ್ಮಚರ್ಯ ವಿಷಯಕವಾದ ಕೆಲವು ಉಪನ್ಯಾಸ ಗಳನ್ನು ಕೊಡುವುದಲ್ಲದೇ ಮತ್ತಾವ ಕೆಲಸವೂ ಆಗಿಲ್ಲ. ಸಂಸಾರವು ದೊಡ್ಡದಾಗಿದ್ದಷ್ಟೂ ಶುಭ ಸೂಚಕವಾದುದರಿಂದ, (ಹೆಚ್ಚು ಮಕ್ಕ ಳಿಂದ) ಸಂಸಾರವನ್ನು ಬೆಳೆಸುವುದೊಳ್ಳೆಯದು ಎಂಬೀ ಮೂಢ ವಿಶ್ವಾಸವಿನ್ನೂ ತೊಲಗಿಲ್ಲ. ಕೆಲವು ಸಂದರ್ಭಗಳಲ್ಲಿ ಸಂತಾನೋ ತ್ಪಾದನೆಯಂತೆಯೇ ಸಂತಾನ ನಿರೋಧವೂ ಧಾರ್ಮಿಕವಾಗಿರುವುದೆಂ ಬುದನ್ನು ನಮ್ಮ ಧರ್ಮ ಗುರುಗಳು ಸಾಮಾನ್ಯವಾಗಿ ಬೋಧಿಸುತ್ತಿಲ್ಲ.

ಸಂತಾನ ನಿರೋಧವಾದಿಗಳು ಮಾನವನ ಕಾಮುಕ ವೃತ್ತಿಯ ನ್ನು ಸ್ವೇಚ್ಛೆಯಾಗಿ ಬಿಡುವುದು ಜೀವನಕ್ಕೆ ಆವಶ್ಯಕ ಮತ್ತು ಹಿತಕ ರವೆಂದು ವಾದಿಸುವರೆಂಬ ಭಯವು ನನಗಿದೆ. ಸ್ತ್ರೀಯರ ವಿಚಾರದಲ್ಲಿ ಈ ಸಂಬಂಧವಾಗಿ ಅವರು ತೋರವ ಹಂಬಲವು ಬಹು ವಿಷಾದಜನಕ ವಾಗಿದೆ. ಕೃತ್ರಿಮ ವಿಧಾನಗಳಿಂದ ಗರ್ಭನಿರೋಧವನ್ನುಂಟುಮಾಡು ವುದು ಅವರಿಗೆ ಹಿತಕರವಾಗಿರುವುದೆಂದು ಹೇಳುವುದೆಂದರೆ ಸ್ತ್ರೀ ಜಾತಿ ಯ ನಿಂದೆಯನ್ನು ಮಾಡಿದಂತೆಯೇ ಸರಿ. ಗರ್ಭನಿರೋಧವಾದಿಗಳ ಅಭಿಪ್ರಾಯವು ಎಷ್ಟೋ ಒಳ್ಳೆಯದಾಗಿರಬಹುದು. ಆದರೆ ಈಗಣ ಪರಿಸ್ಥಿತಿಯಲ್ಲಿ ಪುರುಷನು ಕೇವಲ ತನ್ನ ಕಾಮುಕ ವೃತ್ತಿಯಿಂದ ಸ್ತ್ರೀ ಯನ್ನು ಅವನತಿಗೆ ತಂದಿರುವನು. ಈ ಕೃತ್ರಿಮ ವಿಧಾನಗಳಿಂದ ಅವ ನು ಅವಳನ್ನು ಮತ್ತಷ್ಟು ಹೀನಸ್ಥಿತಿಗೆ ತರುವನು. ಈ ವಿಧಾನಗ ಳನ್ನು ಈಗಣ ಸ್ತ್ರೀಯರು ಅನುಮೋದಿಸಿ ಸಮರ್ಥಿಸಿರುವರೆಂದು ನನಗೆ ಗೊತ್ತಿದೆ. ಆದರೆ ಸ್ತ್ರೀಯರಲ್ಲಿ ಹೆಚ್ಚಿನ ಸಂಖ್ಯೆಯವರು ಇದು ತಮ್ಮ ಗೌರವಕ್ಕೆ ವಿರುದ್ಧವಾಗುವುದು—ಎಂದು ತಿರಸ್ಕರಿಸಿರುವರೆಂದು ನಾನು ನಿಸ್ಸಂದೇಹವಾಗಿ ಹೇಳಬಲ್ಲೆ. ಪುರುಷನು ನಿಜವಾಗಿಯೂ ಸ್ತ್ರೀಯ

ಹಿತವನ್ನು ಬಯಸುವವನಾದರೆ ತನ್ನನ್ನು ತಾನು ಸ್ವಾಧೀನದಲ್ಲಿಟ್ಟು ಕೊಳ್ಳುವ ಸಾಧನೆಯನ್ನು ಸಾಧಿಸಲಿ. ಪಾಪಮೋಹನೆಯ ಪ್ರೇರಣೆ ಯನ್ನು ಮಾಡುವವಳು (ಅಬಲೆಯೆನಿಸಿದ) ಸ್ತ್ರೀಯಲ್ಲ; ಈ ವಿಚಾರ ದಲ್ಲಿ (ಸಬಲನೆನಿಸಿದ) ಪುರುಷನೇ ಮೊದಲು ಅತಿಕ್ರಮಿಸುವುದರಿಂದ ಅವನೇ ತಪ್ಪಿತಸ್ಥನೂ ಪಾಪಕ್ಕೆ ಮೂಲಕಾರಣನೂ ಆಗಿರುವನು.

ಗರ್ಭನಿರೋಧವಾದಿಗಳು ಕೃತ್ರಿಮ ವಿಧಾನಗಳ ಮುಂದಣ ಪರಿ ಣಾಮಗಳನ್ನು ಕುರಿತು ಚೆನ್ನಾಗಿ ಆಲೋಚಿಸಬೇಕೆಂದು ನಾನು ಒತ್ತಿ ಹೇಳುವೆನು. ಈ ವಿಧಾನಗಳ ವಿಶೇಷ ಪ್ರಚಾರದಿಂದ ವಿವಾಹ ಬಂಧ ನವು ಹರಿದುಹೋಗಿ ಸ್ವೈರ ವಿಹಾರವೇ ಫಲವಾಗಿ ಪರಿಣಮಿಸುವ ಸಂಭವವಿರುವುದು. ಇಂದ್ರಿಯಭೋಗಮಗ್ನತೆಯು ಮಾನವನ ಜೀವ ನಕ್ಕೆ ಆವಶ್ಯಕವೇ ಆಗಿದ್ದರೆ, ಅವನು ದೀರ್ಘಕಾಲ ಮನೆಯನ್ನು ಬಿಟ್ಟು ಪ್ರವಾಸದಲ್ಲಿರುವಾಗ, ಅಥವಾ ಅವನು ಚಿರಕಾಲದ ಯುದ್ಧ ದಲ್ಲಿ ಸೈನಿಕನಾಗಿ ಕೆಲಸ ಮಾಡುವಾಗ ಅಥವಾ ಕೃತ್ರಿಮ ವಿಧಾನಗ ಳನ್ನೂ ಕೂಡ ಉಪಯೋಗಿಸಲಾಗದಂತೆ ಅವನ ಪತ್ನಿಯು ಕಾಹಿಲೆ ಯಾಗಿ ಮಲಗಿರುವಾಗ ಅಥವಾ ಅವನು ವಿಧುರನಾದಾಗ ಅವನು ಏನು ಮಾಡಬೇಕು? ಆದರೆ ಎರಡನೆಯ ಲೇಖಕನು ನನಗೆ ಹೀಗೆ ಬರೆ ದಿರುವನು :—

"ಮೊನ್ನೆ ಪತ್ರಿಕೆಯಲ್ಲಿ ನೀವು ಬರೆದ ಗರ್ಭನಿರೋಧ ವಿಚಾರ ವಾದ ಲೇಖನ ವಿಚಾರದಲ್ಲಿ ಕೃತ್ರಿಮ ಉಪಾಯಗಳು ಅಪಾಯಕರ ವೆಂದು ಹೇಳುವಾಗ, ನೀವು ಕೂಡ ಪ್ರಮಾಣರಹಿತವಾದ ಆ ಮೂಢ ವಿಶ್ವಾಸವನ್ನೇ ಸ್ವೀಕರಿಸಿ ನಿಮ್ಮ ಲೇಖನವನ್ನು ಬರೆಯಲಾರಂಭಿಸಿರು ವಿರೆಂದು ನಿಮಗೆ ನಾನು ಸವಿನಯಪೂರ್ವಕವಾಗಿ ತಿಳಿಸಬೇಕಾಗಿದೆ ಕಳೆದ ಅಂತರ್‍ರಾಷ್ಟ್ರೀಯ ಗರ್ಭನಿರೋಧಕ ಸಭೆ (ಲಂಡನ್ ೧೯೨೨) ಯ ಗರ್ಭನಿರೋಧಕ ಸಾಧನಾ ವಿಭಾಗದಲ್ಲಿ ಕೇವಲ ವೈದ್ಯ ವ್ಯವಸಾ ಯದ ಸದಸ್ಯರುಗಳೇ ಹಾಜರಿದ್ದು ಮುಂದಿನ ಗೊತ್ತುವಳಿಯನ್ನು,— ೧೬೪ ಜನರಲ್ಲಿ ೩ ಜನರು ಮಾತ್ರವೆ ವಿರೋಧವಾಗಿ--ಮಂಜೂರು ಮಾಡಿದರು. 'ಶಾರೀರಕ, ಕಾನೂನು ಮತ್ತು ನೈತಿಕ ದೃಷ್ಟಿಯಿಂದ

ಆರೋಗ್ಯ ನಿಯಮವನ್ನು ಅನುಸರಿಸಿ ನಿರ್ಮಿಸಲ್ಪಟ್ಟ ಗರ್ಭನಿರೋಧಕ ಸಾಧನೆಗಳಿಂದ ಆಗುವ ಗರ್ಭನಿರೋಧವು ಗರ್ಭಪಾತವನ್ನು ಹೊಂದುವ ವಿಧಾನಕ್ಕೆ ಸಂಪೂರ್ಣ ವ್ಯತಿರಿಕ್ತವಾಗಿರುವುದೆಂದು ವೈದ್ಯವ್ಯವಸಾಯದ ಸದಸ್ಯರಿಂದ ಕೂಡಿದ ಈ ಐದನೆಯ ಅಂತರ್ರಾಷ್ಟ್ರೀಯ ಗರ್ಭನಿರೋಧಕ ಸಭೆಯು ಈ ಮೂಲಕ ವ್ಯಕ್ತಪಡಿಸುವುದು. ಅಲ್ಲದೆ ಅತ್ಯುತ್ತಮ**ವಾದ ಗರ್ಭನಿರೋಧಕ ಉಪಾಯಗಳಿಂದ ಆರೋಗ್ಯಕ್ಕೆ ಯಾವುದಾದರೂ ಹಾನಿಯಾಗುವುದೆಂದು ಅಥವಾ ಅದು ಬಂಜೆತನಕ್ಕೆ ನೆರವಾಗುವುದೆಂದು ಸಾಕ್ಷ್ಯವೇ ದೊರೆತಿಲ್ಲವೆಂಬ ಅದರ ಅಭಿಪ್ರಾಯವನ್ನು** ಅದು ಈ ಮೂಲಕ ದಾಖಲೆ ಮಾಡಿಡುವುದು.

"ಈಗ ಅವರ ಉದ್ಯೋಗದಲ್ಲಿ ಬಹು ಪ್ರಸಿದ್ಧರಾಗಿ ಹೆಸರು ಹೊಂದಿದ ವೈದ್ಯಕೀಯ ಸ್ತ್ರೀ ಪುರುಷರ ಮಹಾ ಸಭೆಯ ಅಭಿಪ್ರಾಯವನ್ನು ಲೇಖನಿಯ ಒಂದು ಗೀಟಿನಿಂದ ಹೊಡೆದು ಹಾಕುವುದು ಸಾಧ್ಯವಲ್ಲ. 'ಕೃತ್ರಿಮ ಉಪಾಯಗಳಿಂದ ನಪುಂಸಕತ್ವವೂ ನರಗಳ ದೌರ್ಬಲ್ಯವೂ **ಉಂಟಾಗಲೇ ಬೇಕು**' ಎಂದು ನೀವು ಹೇಳುವಿರಿ. '**ಆಗಲೇ ಬೇಕು**' ಎಂಬುದೇಕೆ? ಅಪಾಯಕರವಾದ ಸಾಧನೆಗಳ ಉಪಯೋಗದಿಂದ ಒಂದುವೇಳೆ ಅಜ್ಞಾನದ ಮೂಲಕ, ಏನಾದರೂ ಅಪಾಯ ಸಂಭವಿಸಬಹುದಾದರೂ ಈಗಣ ಶಾಸ್ತ್ರೀಯವಾಗಿ ರಚಿಸಲ್ಪಟ್ಟ ಸಾಧನಗಳಿಂದ ಅಂತಹ ಅಪಾಯಗಳು ಸಂಭವಿಸುವುದೇ ಇಲ್ಲವೆಂದು ನಾನು ಧೈರ್ಯವಾಗಿ ಹೇಳಬಲ್ಲೆನು. ಆದುದರಿಂದ ಅವಶ್ಯಕತೆಯಿರುವವರೆಲ್ಲರಿಗೆ ಎಂದರೆ ಸಂತಾನೋತ್ಪಾದಕ ಶಕ್ತಿಯುಳ್ಳ ಪ್ರೌಢರೆಲ್ಲರಿಗೂ ಸರಿಯಾದ ಶಾಸ್ತ್ರೀಯ ಸಾಧನಗಳ ವಿಚಾರವಾಗಿ ಸರಿಯಾದ ಶಿಕ್ಷಣಕೊಡಬೇಕೆಂಬುದಕ್ಕೆ ಇದೊಂದು ಬಲವಾದ ಕಾರಣವಾಗಿರುವುದು. ಈ ವಿಧಾನಗಳು ಕೃತ್ರಿಮವಾಗಿರುವವೆಂದು ನೀವು ಅವುಗಳನ್ನು ದೂಷಿಸುವಿರಿ, ಮತ್ತೆ ವೈದ್ಯಶಾಸ್ತ್ರಜ್ಞರು "ಆತ್ಮಸಂಯಮದ ವಿಧಾನಗಳನ್ನು" ಕಂಡುಹಿಡಿಯಬೇಕೆಂದು ಅಪೇಕ್ಷಿಸುವಿರಿ. ನೀವು ಹೀಗೆ ಮಾಡುವುದರ ಅರ್ಥವೇನೋ ನನಗೆ ತಿಳಿಯದಾಗಿದೆ. ಆದರೆ ನೀವು ವೈದ್ಯಶಾಸ್ತ್ರಜ್ಞರನ್ನು ಕುರಿತು ಸಂಬೋಧಿಸಿರುವುದರಿಂದ ಅವರು ತೋರುವ 'ಆತ್ಮ

ಸಂಯಮ ವಿಧಾನಗಳು' ಕೂಡ ಕೃತ್ರಿಮವಾಗಿರುವುದಿಲ್ಲವೆ? ಎಂದು ನಾನು ಕೇಳುವೆನು. 'ಸ್ತ್ರೀಪುರುಷರ ಸಂಯೋಗವುಂಟಾಗುವುದು ಸುಖಕ್ಕಾಗಿ ಅಲ್ಲ, ಕೇವಲ ಸಂತಾನೋತ್ಪಾದನೆಗಾಗಿ ಆಗ ವುದೆಂದು ತಿಳಿಯಬೇಕು' ಎಂದು ನೀವು ಹೇಳುತ್ತೀರಿ. ಹಾಗೆ ಹೇಳಿರುವವರು ಯಾರು? ದೇವರೆ? ಹಾಗಾದರೆ ಆವನು ಇಂದ್ರಿಯ ವಾಸನೆಗಳನ್ನೇಕೆ ಸೃಷ್ಟಿಸಿದನು? ಮತ್ತೆ 'ನಿಸರ್ಗದೇವತೆಯು ಕರುಣೆಯಿಲ್ಲದವಳು. ಆವಳ ನಿಯಮವನ್ನುಲ್ಲಂಘಿಸುವವರಿಗೆ ಆವಳು ಸಂಪೂರ್ಣ ದಂಡನೆ ಯನ್ನು ಕೊಡದೇ ಬಿಡಳು' ಎಂದು ನೀವು ಹೇಳುತ್ತೀರಿ. ಆದರೆ ದೇವರು ಒಬ್ಬ ವ್ಯಕ್ತಿಯೆಂದು ಭಾವಿಸಿರುವಂತೆ ನಿಸರ್ಗವನ್ನು ವ್ಯಕ್ತಿ ಯೆಂದು ಭಾವಿಸಲಾಗುವುದಿಲ್ಲ. ಅದು ಯಾರಿಗಾದರೂ ಆಜ್ಞೆಯನ್ನು ಮಾಡುವುದಿಲ್ಲ ನಿಸರ್ಗನಿಯಮಗಳನ್ನು ಉಲ್ಲಂಘಿಸುವುದು ಸಾಧ್ಯವೇ ಅಲ್ಲ. ಪ್ರಕೃತಿಯಲ್ಲಿ ಕ್ರಿಯೆಯ ಪರಿಣಾಮದಿಂದ ತಪ್ಪಿಸಿಕೊಳ್ಳಲಾ ಗುವುದಿಲ್ಲ. ಆ ಪರಿಣಾಮಕ್ಕೆ ಕೆಟ್ಟದ್ದು ಒಳ್ಳೆಯದು ಎಂಬ ವಿಶೇಷಣ ವನ್ನು ನಾವು ಉಪಯೋಗಿಸುವೆವು. ಕೃತ್ರಿಮವಿಧಾನಗಳನ್ನು ಉಪ ಯೋಗಿಸದವರು ಅದರ ಪರಿಣಾಮಕ್ಕೆ ಹೇಗೆ ಬದ್ಧರಾಗಿರುವರೊ ಹಾ ಗೆಯೆ ಅವುಗಳನ್ನುಪಯೋಗಿಸುವವರು ಅವುಗಳಿಂದಾಗುವ ಪರಿಣಾಮ ವನ್ನು ಸ್ವೀಕರಿಸಲು ಸಿದ್ಧರಾಗಿರುವರು. ಆದುದರಿಂದ ಕೃತ್ರಿಮ ವಿಧಾನಗಳು ಅಪಾಯಕರವೆಂದು ನೀವು ಸರಿಯಾಗಿ ಸಿದ್ಧಾಂತಗೊಳಿ ಸುವವರೆಗೆ ನಿಮ್ಮ ವಾದವು ನಿರರ್ಥಕವಾಗಿರುವುದು. ಸರಿಯಾದ ಸಾಧನೆಗಳ ಉಪಯೋಗದಿಂದ ಯಾವ ಅಪಾಯವೂ ಆಗುವುದಿಲ್ಲ ವೆಂದು ನಾನು ಪರೀಕ್ಷೆಯಿಂದಲೂ ಅನುಭವದಿಂದಲೂ ಕಂಠೋಕ್ತ ವಾಗಿ ಹೇಳುವೆನು. ನೈತಿಕ ಅಥವಾ ಅನೈತಿಕ ಫಲದಿಂದ ಕಾರ್ಯ ಗಳ ಪರಿಣಾಮವನ್ನು ನಿರ್ಣಯಿಸಬೇಕಲ್ಲದೆ, ಕೇವಲ ಕಾರಣಯುಕ್ತ ಕಾರ್ಯದ ಮೇಲಿನ ನಂಬಿಕೆಯಿಂದ ಅದರ ನೈತಿಕತ್ವವನ್ನು ನಿರ್ಣ ಯಿಸಕೂಡದು.

"ನೀವು ಪ್ರತಿಪಾದಿಸುವ ವಿಧಾನವನ್ನು ಮಾಲ್‌ಥೂಸ್ ಎಂಬಾ ತನು ಕೂಡ ಪ್ರತಿಪಾದಿಸಿದ್ದನು. ಆದರೆ ಅದು ನಿಮ್ಮಂತಹ ಕೆಲವು

ಉತ್ತಮ ವ್ಯಕ್ತಿಗಳ ಹೊರತು ಉಳಿದವರಿಗೆ ಸಂಪೂರ್ಣವಾಗಿ ಅಸಾಧ್ಯ ವಾಗಿರುವುದು. ಸಾಧನೆಗೆ ಸಾಧ್ಯವಾಗದ ವಿಧಾನಗಳ ಪ್ರತಿಪಾದನೆ ಯಿಂದೇನು ಪ್ರಯೋಜನ? **ಬ್ರಹ್ಮಚರ್ಯೆ**ಯಿಂದಾಗುವ ಹಿತ ಗಳನ್ನು ಅತಿಯಾಗಿ ವರ್ಣಿಸಲಾಗಿದೆ. ಧಾರ್ಮಿಕ ದುರಾಗ್ರಹವಿಲ್ಲದ ಆಧುನಿಕ ವೈದ್ಯ ಶಾಸ್ತ್ರಜ್ಞರು ೨೨ ವರುಷ ವಯಸ್ಸಾದನಂತರ ಬ್ರಹ್ಮ ಚರ್ಯೆಯಿಂದ ಖಂಡಿತವಾಗಿ ಅಪಾಯವಾಗುವುದೆಂದು ಅಭಿಪ್ರಾಯ ಪಟ್ಟಿರುವರು. ಸಂತಾನೋತ್ಪಾದನೆಗಲ್ಲದೆ ಸಂಯೋಗವಾಗುವುದು ಪಾಪವೆಂದು ನೀವು ಹೇಳುವುದು ನಿಮ್ಮಲ್ಲಿರುವ ಧಾರ್ಮಿಕ ದುರಾ ಗ್ರಹದಿಂದ! ಮುಂದಾಗುವ ಫಲದ ಭರವಸೆಯನ್ನು ಈಗಲೇ ಯಾರು ಹೇಳಲಾರರಾದ್ದರಿಂದ, ಪ್ರತಿಯೊಬ್ಬನೂ ಸಂಪೂರ್ಣ ಬ್ರಹ್ಮಚರ್ಯೆ ಯನ್ನಾಚರಿಸಬೇಕೆಂದೂ ಇಲ್ಲವಾದರೆ ಯದೃಚ್ಛೆಯ ಪಾಪಕ್ಕೊಳಗಾಗ ಬೇಕೆಂದೂ ನೀವು ಅಂತ್ಯಾಜ್ಞೆಯನ್ನಿತ್ತಿರುವಿರಿ. ಇದು ಶಾರೀರ ಶಾಸ್ತ್ರದ ಬೋಧನೆಯನ್ನನುಸರಿಸಿಲ್ಲ. ವಿಶ್ವಾಸ ಬೋಧನೆಯ ಪರ ವಾಗಿ ವಿಜ್ಞಾನವನ್ನು ಲಕ್ಷಿಸಬೇಡಿ ಎಂದು ಜನರಿಗೆ ಬೋಧಿಸುವ ಸಮಯವು ಈಗ ಮಿಂಚಿಹೋಗಿದೆ.''

ಈ ಲೇಖಕನು ನನ್ನ ವಿಶ್ವಾಸಕ್ಕೆ ವಿರೋಧವಾದ ಅವಸ್ಥಾನ ವನ್ನು ತಳೆದಿರುವನು. ವಿವಾಹಬಂಧನದ ಪವಿತ್ರತೆಯನ್ನು ಸ್ವೀಕರಿಸಿ, ಕಾಪಾಡಿಕೊಳ್ಳಬೇಕೆಂದರೆ ನಮ್ಮ ಜೀವನ ನಿಯಮವು ಆತ್ಮಸಂಯಮ ವಾಗಿರಬೇಕೇ ಹೊರತು ಇಂದ್ರಿಯಭೋಗವನ್ನನುಸರಿಸಕೂಡದೆಂಬು ದಕ್ಕೆ ನಾನು ವಾಚಕರಿಗೆ ಸಾಕಾದಷ್ಟು ಉದಾಹರಣೆಗಳನ್ನು ಕೊಟ್ಟಿ ರುವೆನೆಂದು ನಾನು ನಂಬಿರುವೆನು. ಇನ್ನೂ ಸ್ವರೂಪ ಹೊಂದದಿರು ವುದಾವುದನ್ನೂ ನಾನು ಸ್ವೀಕಾರ ಮಾಡಿಲ್ಲ. ಕೃತ್ರಿಮ ಸಾಧನಗಳು ಎಷ್ಟೇ ಯೋಗ್ಯವಾಗಿದ್ದರೂ, ಅಪಾಯಕರವೆಂದು ಈಗಲೂ ನಾನು ವಿವಾದಿಸುವೆನು. ಅವುಗಳ ಮೂಲಕವೇ ಅಪಾಯವುಂಟಾಗದಿದ್ದರೂ ಅವುಗಳಿಂದ ಇಂದ್ರಿಯ ತೃಷ್ಣೆಯು ಕ್ರಮೇಣ ಹೆಚ್ಚಾಗುವ ಅಪಾಯ ವುಂಟಾಗುವುದು. ಇಂದ್ರಿಯ ಭೋಗವು ನ್ಯಾಯಸಮ್ಮತವಾದುದು, ಅಪೇಕ್ಷಣೀಯವಾದುದೆಂದು ಹೇಳುವ ಮನಸ್ಸಿಗೆ ಕಿವಿಗೊಡುವವನು

ಇಂದ್ರಿಯ ಭೋಗಕ್ಕೆ ತುತ್ತಾಗಿ ಕೊನೆಗೆ ತನ್ನ ಇಚ್ಛೆಯ ಬಲವನ್ನೇ ಸಂಪೂರ್ಣವಾಗಿ ಕಳೆದುಕೊಳ್ಳುವಷ್ಟು ದುರ್ಬಲನಾಗುವನು. ಇಂದ್ರಿಯಭೋಗದ ಪ್ರತಿಯೊಂದು ಕ್ರಿಯೆಯಿಂದಲೂ, ದೇಹದಿಂದಾಗಲಿ, ಮನಸ್ಸಿನಿಂದಾಗಲಿ, ಆತ್ಮದಿಂದಾಗಲಿ ಸ್ತ್ರೀ ಅಥವಾ ಪುರುಷನನ್ನು ಸಶಕ್ತರಾಗಿಡಬೇಕಾದರೆ ಅತ್ಯಾವಶ್ಯಕವಾಗಿರುವ ಅತ್ಯಮೌಲ್ಯವಾದ ಚೇತನತತ್ವವೇ ನಾಶಗೊಳ್ಳುವುದೆಂದು ನಾನು ಸಮರ್ಥಿಸುವೆನು. ಈಗ ಮಾತ್ರ ನಾನು 'ಆತ್ಮ' ವೆಂಬ ಪದವನ್ನು ಸೇರಿಸಿರುವೆನು. ಅದರ ಅಸ್ತಿತ್ವವನ್ನು ಲಕ್ಷಿಸದೆ ನನ್ನ ಪತ್ರವ್ಯವಹಾರದ ಮಿತ್ರರ ವಾದಗಳಿಗೆ ಉತ್ತರ ಬರೆದ ಲೇಖನ ಮಾಲೆಯಲ್ಲಿ ಆ ಪದವನ್ನು ನಾನು ಉಪಯೋಗಿಸಿರಲಿಲ್ಲ. ವಿವಾಹಿತರಾದ ಮತ್ತು ದುರ್ಬಲರಾದ ಹಿಂದೂಸ್ಥಾನದವರು ತಾವು ಕಳೆದುಕೊಂಡಿರುವ ಚೈತನ್ಯವನ್ನು ಮತ್ತೆ ಹೊಂದಬೇಕಾದರೆ, ಅವರಿಗೆ ಕೃತ್ರಿಮ ವಿಧಾನದಿಂದ ಇಂದ್ರಿಯಭೋಗ ಮಗ್ನತೆಯನ್ನು ಬೋಧಿಸದೇ, ಆತ್ಮಸಂಯಮದ ಶಿಕ್ಷಣವನ್ನು ಕೊಡಬೇಕಾಗಿರುವುದು. ನಮ್ಮ ದೇಶದ ವರ್ತಮಾನ ಪತ್ರಿಕೆಗಳ ಅಂದವನ್ನೇ ಕೆಡಿಸುತ್ತಿರುವ ಅನೈತಿಕ ಔಷಧಗಳ ಪ್ರಕಟಣೆ (ಜಾಹೀರಾತು) ಗಳು ಗರ್ಭನಿರೋಧ ಪ್ರತಿಪಾದಕರಿಗೆ ಎಚ್ಚರಿಕೆಯನ್ನು ಕೊಡಲಿ! ಲಜ್ಜೆಯಾಗಲಿ, ಸುಳ್ಳು ವಿನಯವಾಗಲಿ ಈ ವಿಷಯವನ್ನು ಚರ್ಚಿಸಲು ನನ್ನನ್ನು ನಿರೋಧಿಸುತ್ತಿಲ್ಲ. ಇಂದ್ರಿಯಭೋಗದ ಪರವಾಗಿ ಮುಂದೂಡಿದ ಸತ್ಯಾಭಾಸದ ವಾದಗಳಿಗೆ ಚೇತನಹೀನರಾದ ದುರ್ಬಲರಾದ ದೇಶೀಯ ಯುವಕರು ತುತ್ತಾಗುವರಲ್ಲಾ ಎಂಬ ದೃಢವಾದ ಜ್ಞಾನವೇ ಈ ವಿಚಾರ ಚರ್ಚೆಯಲ್ಲಿ ನನ್ನನ್ನು ನಿರೋಧಿಸುತ್ತಿರುವುದು.

ಇನ್ನು ಎರಡನೆಯ ಲೇಖಕನು ತೋರಿಸಿರುವ ವೈದ್ಯಕೀಯ ಸಾಕ್ಷ್ಯ ಪತ್ರಗಳನ್ನು ಖಂಡಿಸುವುದು ನನಗೆ ಅನಾವಶ್ಯಕವಾಗಿದೆ. ಏಕೆಂದರೆ ಅದು ನನ್ನ ವಿಚಾರಕ್ಕೆ ಸ್ವಲ್ಪವೂ ಸಂಬಂಧಪಟ್ಟಿಲ್ಲ. ಶಾಸ್ತ್ರೀಯ ರೀತಿಯಲ್ಲಿ ತಯಾರಿಸಿದ ಕೃತ್ರಿಮ ಸಾಧನಗಳಿಂದ ಇಂದ್ರಿಯಗಳಿಗೆ ಅಪಾಯವಾಗುವುದು, ಅಥವಾ ಅವುಗಳಿಂದ ಬಂಜೆತನವೂ ಉಂಟಾಗುವುದು ಎಂಬುದನ್ನು ನಾನು ಕಂಠೋಕ್ತವಾಗಿ

ನುಡಿಯುವುದೂ ಇಲ್ಲ, ಅಥವಾ ತಿರಸ್ಕರಿಸುವುದೂ ಇಲ್ಲ. ಕೇವಲ ತಮ್ಮ ವಿವಾಹಿತ ಪತ್ನಿಯರೊಂದಿಗೇ ಇಂದ್ರಿಯ ಭೋಗದಲ್ಲಿ ಮಗ್ನ ವಾಗಿ ತಮ್ಮ ಜೀವವನ್ನೇ ನಾಶಗೊಳಿಸಿಕೊಂಡ, ನಾನು ನೋಡಿರುವ, ನೂರಾರು ಯುವಕರ ಉದಾಹರಣೆಗಳನ್ನು ಆ ಚತುರ ವೈದ್ಯಶಾಸ್ತ್ರೀಯ ಅಸಂಖ್ಯಾಕ ವಾದಗಳೂ ಸುಳ್ಳುಮಾಡಲಾರವು.

ಮೊದಲನೆಯ ಲೇಖಕನು ಕೊಟ್ಟಿರುವ ಕೃತ್ರಿಮ ಹಲ್ಲುಗಳು ನಿಜ ವಾಗಿಯೂ ಅಸ್ವಾಭಾವಿಕವಾದವುಗಳು ಮತ್ತು ಕೃತ್ರಿಮವಾದವುಗಳು. ಆದರೆ ಅವುಗಳಿಂದ ಆವಶ್ಯಕ ಉದ್ದೇಶ್ಯವು ನೆರವೇರಬಹುದು. ಆದರೆ ಕೃತ್ರಿಮ ವಿಧಾನಗಳು, ಕೇವಲ ತನ್ನ ಹೆಸರನ್ನು ಅಣಗಿಸುವುದಕ್ಕೆ ಬದಲಾಗಿ ಬಾಯಿ ರುಚಿಗಾಗಿ ತಿನ್ನುವ ಉದ್ದೇಶದಿಂದ ತೆಗೆದುಕೊಳ್ಳುವ ಪ್ರತ್ಯೌಷಧಗಳನ್ನು ಹೋಲುವವು. ಕೇವಲ ಸುಖಕ್ಕಾಗಿ ಮಾಡುವ ಇಂದ್ರಿಯಭೋಗದಂತೆಯೆ ಕೇವಲ ರುಚಿಯ ಸುಖಕ್ಕಾಗಿ ತಿನ್ನುವುದು ಕೂಡ ಪಾಪಕಾರ್ಯವಾಗಿರುವುದು.

ಕೊನೆಯ (ಮೂರನೆಯ) ಲೇಖಕನ ಪತ್ರವು ಅದರಲ್ಲಡಕವಾಗಿ ರುವ ವಿಷಯಗಳಿಂದ ವಾಚಕರಿಗೆ ಪ್ರಯೋಜನವನ್ನುಂಟುಮಾಡುವು ದಾಗಿದೆ. ಆ ಲೇಖಕನು ಹೀಗೆ ಬರೆದಿರುವನು:—"ಈ ವಿಷಯವು ಜಗತ್ತಿನ ಎಲ್ಲ ಸರಕಾರದವರನ್ನೂ ಪೀಡಿಸುತ್ತಿದೆ. ನಾನು ಹೇಳು ವುದು 'ಗರ್ಭನಿರೋಧ'ದ ವಿಚಾರವಾಗಿ ಎಂದರೆ ನೀವು ಬರೆದ ಲೇಖನ ವಿಚಾರ. ಅದರ ಪ್ರಚಾರ ವಿಚಾರದಲ್ಲಿ ಅಮೇರಿಕನ್ ಸರ ಕಾರವು ಎಷ್ಟು ಹಗೆಯುಳ್ಳದ್ದಾಗಿರುವುದೆಂದು ನಿಮಗೆ ಗೊತ್ತೇ ಇದೆ. ಒಂದು ಪೌರ್ವಾತ್ಯ ರಾಜ್ಯವು-ಎಂದರೆ ಜಪಾನ್ ಸಾಮ್ರಾಜ್ಯವು ಅದರ ಪ್ರಚಾರಕ್ಕೆ ಕೊಟ್ಟಿರುವ ಸ್ವಾತಂತ್ರ್ಯ ವಿಚಾರವೂ ನಿಮಗೆ ತಿಳಿದಿರು ವುದರಲ್ಲಿ ಸಂದೇಹವಿಲ್ಲ. ಪ್ರತಿಯೊಬ್ಬರಿಗೂ ಗೊತ್ತಿರುವ ಕಾರಣ ಕ್ಕೋಸ್ಕರ, ಕೃತ್ರಿಮ ವಿಧಾನದಿಂದಾಗಲಿ ನೈಸರ್ಗಿಕ ವಿಧಾನದಿಂದಾ ಗಲಿ ಗರ್ಭನಿರೋಧ ಮಾಡುವುದನ್ನು ಒಂದು ದೇಶವು ಕಾನೂನಿಗೆ ವಿರೋಧವೆಂದು ನಿಯಮಿಸಿರುವುದು. ಸಾರ್ವತ್ರಿಕವಾಗಿ ಎಲ್ಲರಿಗೂ ತಿಳಿದಿರುವ ಕಾರಣಗಳಿಗೋಸ್ಕರವೇ ಮತ್ತೊಂದು ದೇಶವು ಅದಕ್ಕೆ

ಪ್ರೋತ್ಸಾಹವನ್ನೀಯುತ್ತಿರುವುದು. ನನ್ನ ಅಭಿಪ್ರಾಯದ ಪ್ರಕಾರ ಮೊದಲನೆಯದರ ಕೃತ್ಯದಲ್ಲಿ ಮೆಚ್ಚುವಂತಹ ವಿಚಾರವೇನೂ ಇಲ್ಲ. ಆದರೆ ಎರಡನೆಯ ದೇಶವು ಅನುಸರಿಸಿರುವ ಮಾರ್ಗದಲ್ಲಿ ಹೆಚ್ಚು ತಿರಸ್ಕಾರಯೋಗ್ಯವಾದುದೇನಾದರೂ ಇದೆಯೆ? ವಸ್ತುಸ್ಥಿತಿಗೆ ಎದೆಗೊಟ್ಟು ನಿಂತುದಕ್ಕಾದರೂ ಜಪಾನೀಯರ ಸರಕಾರಕ್ಕೆ ಕೀರ್ತಿಯನ್ನು ಕೊಡಬೇಕೆಂದು ನಿಮಗೂ ಅನಿಸುವುದಿಲ್ಲವೇ? ಅವರು ಸಂತಾನೋತ್ಪಾದನೆಯನ್ನು ನಿಲ್ಲಿಸಬೇಕಾಗಿರುವುದು. ಅದೇ ಸಂದರ್ಭದಲ್ಲಿ ಮಾನವ ಸ್ವಭಾವದ ಈಗಣ ಶಕ್ತಿಯನ್ನು ಅವರು ಆಲೋಚಿಸಬೇಕಾಗಿರುವುದು. ಇಂತಹ ಪರಿಸ್ಥಿತಿಯಲ್ಲಿ ಪಾಶ್ಚಾತ್ಯ ದೇಶದವರು ಈಗ ತಿಳಿದುಕೊಂಡಿರುವ ಗರ್ಭನಿರೋಧಕ ಉಪಾಯವೇ ಅವರಿಗೆ (ಜಪಾನಿಯರಿಗೆ) ಏಕಮಾತ್ರ ಉಪಾಯವಾಗಿಲ್ಲವೆ? ನೀವು "**ಖಂಡಿತವಾಗಿ ಅಲ್ಲ**" ಎಂದು ಹೇಳುವಿರೆಂದು ನನಗೆ ಗೊತ್ತಿದೆ. ಆದರೆ ನೀವು ಹೇಳುವ ಮಾರ್ಗವು ಸಾಮಾನ್ಯರ ಸಾಧನೆಗೆ ಸಾಧ್ಯವೆ? **ಅದು ಅತ್ಯುತ್ತಮವಾದ ಧ್ಯೇಯವಾಗಿರಬಹುದು, ಆದರೆ ಅದು ಕ್ರಿಯಾತ್ಮಕವಾದುದೆ?** ಗಣನೆಗೆ ತರುವಷ್ಟು ಮಟ್ಟಿಗಾದರೂ ಇಂದ್ರಿಯಭೋಗದ ಸುಖವನ್ನು ವರ್ಜಿಸಲು ಮಾನವ ಜಾತಿಯು ಸಿದ್ಧವಾಗುವುದೆಂದು ನಿರೀಕ್ಷಿಸುವುದು ಸಾಧ್ಯವೆ? ಆತ್ಮಸಂಯಮವನ್ನಾಗಲಿ ಬ್ರಹ್ಮಚರ್ಯೆಯನ್ನಾಗಲಿ ಆಚರಿಸುವ ಕೆಲವು ಮಹಾ ಪುರುಷರನ್ನು ಕಂಡುಹಿಡಿಯುವುದು ಸುಲಭ. ಆದರೆ ಸಾಮಾನ್ಯ ಜನತೆಯ ಚಳವಳಕ್ಕೆ ಈ ವಿಧಾನವನ್ನವಲಂಬಿಸುವುದು ಸಾಧ್ಯವೆ? ಈಗ ಹಿಂದೂಸ್ಥಾನದಲ್ಲಣ ವಸ್ತುಸ್ಥಿತಿಯನ್ನೆದುರಿಸಲು ಸಾಮಾನ್ಯ ಜನತೆಗೆ ರುಚಿಸುವಂತಹ ಚಳವಳದ ಹೊರತು ಬೇರೆ ಉಪಾಯವೇ ಇಲ್ಲ."

ಅಮೆರಿಕಾ ಮತ್ತು ಜಪಾನ್ ದೇಶಗಳ ಸಂಗತಿಗಳು ನನಗೆ ಗೊತ್ತಿಲ್ಲವೆಂದು ನಾನು ಒಪ್ಪಿಕೊಳ್ಳುವೆನು. ಜಪಾನ್ ದೇಶವು ಗರ್ಭನಿರೋಧವನ್ನು ಪ್ರತಿಪಾದಿಸುವ ಕಾರಣವು ನನಗೆ ಗೊತ್ತಿಲ್ಲ. ಈ ಲೇಖಕನು ಹೇಳುವಂತೆ ಅದು ರೂಢಿಯಲ್ಲಿರುವುದಾದರೆ, ಆ ಉತ್ತಮ

ವಾದ ಜನಾಂಗವು ತನ್ನ ನೈತಿಕ ನಾಶದ ಮಾರ್ಗದಲ್ಲಿ ವೇಗವಾಗಿ ಓಡುತ್ತಿರುವುದೆಂದು ನಾನು ಧೈರ್ಯವಾಗಿ ಹೇಳಬಲ್ಲೆನು.

ನಾನು ಹೇಳುವ ಅಭಿಪ್ರಾಯವೆಲ್ಲವೂ ತಪ್ಪಾಗಿರಬಹುದು. ನನ್ನ ನಿರ್ಣಯಗಳಿಗೆ ಸುಳ್ಳು ಸಿದ್ಧಾರ್ಥಗಳೇ ಆಧಾರವಾಗಿರಬಹುದು. ಆದರೆ ಕೃತ್ರಿಮ ವಿಧಾನವಾದಿಗಳು ತಾಳ್ಮೆಯುಳ್ಳವರಾಗಿರಬೇಕು. ಈಗಣ ಉದಾಹರಣೆಗಳ ವಿನಾ ಅವರಿಗೆ ಮತ್ತಾವ ಸಿದ್ಧಾಂತವೂ ಆಧಾರ ವಾಗಿಲ್ಲ. ಮಾನವ ಜಾತಿಯ ನೈತಿಕ ಭಾವನೆಗೆ ಒಗ್ಗದ ನಿಗ್ರಹ ಪದ್ಧತಿಯ ವಿಚಾರವಾಗಿ ಅದರಿಂದ ಮುಂದೆ ಇಂತಹ ಪರಿಣಾಮವೇ ಆಗುವುದೆಂದು ಹೇಳುವುದಕ್ಕೆ ಖಂಡಿತವಾಗಿಯೂ ಈಗ ಕಾಲವಲ್ಲ. ತಾರುಣ್ಯ ಸ್ವಭಾವವನ್ನು ಕ್ಷುಲ್ಲಕವೆಂದೆಣಿಸುವುದು ಬಹು ಸುಲಭ. ಆದರೆ ಅಂತಹ ತುಚ್ಛೀಕಾರದಿಂದಾಗುವ ಪರಿಣಾಮವನ್ನು ನಿವಾರಿಸು ವುದು ಬಹು ಕಷ್ಟಕರವಾಗಿರುವುದು.

## ೪. ಬ್ರಹ್ಮಚರ್ಯೆಯ ಆವಶ್ಯಕತೆ

ಹಿಂದಿನ ಪ್ರಕರಣಗಳನ್ನು ಧ್ಯಾನಪೂರ್ವಕ ಓದಿದವರೆಲ್ಲರು ಈ ಪ್ರಕರಣವನ್ನೂ ವಿಶೇಷ ಧ್ಯಾನಪೂರ್ವಕರಾಗಿ ಓದಿ ಅದರ ಸಂಬಂಧ ವಾಗಿ ಚೆನ್ನಾಗಿ ಆಲೋಚನೆ ಮಾಡಬೇಕೆಂದು ನನ್ನ ಪ್ರಾರ್ಥನೆ. ಇನ್ನೂ ಅನೇಕ ಉಪಯುಕ್ತವಾದ ಪ್ರಕರಣಗಳನ್ನು ಬರೆಯಬೇಕಾ ಗಿದೆ. ಆದರೆ ಈ ವಿಷಯದಲ್ಲಿ ಇದಕ್ಕಿಂತಲೂ ಮುಖ್ಯವಾದ ಪ್ರಕರ ಣವು ಮತ್ತೊಂದಿಲ್ಲ. ನಾನು ಮುಂಚೆಯೆ ಹೇಳಿರುವಂತೆ ನನ್ನ ಸ್ವಂತ ಅನುಭವವಿಲ್ಲದ ಅಥವಾ ಸತ್ಯವೆಂದು ದೃಢವಾಗಿ ನಾನು ನಂಬಲಾಗದ ಯಾವ ವಿಚಾರವನ್ನೂ ಈ ಪುಸ್ತಕದಲ್ಲಿ ನಾನು ಬರೆದಿಲ್ಲ.

---

* ಈ ಪ್ರಕರಣವು ಈ ಗ್ರಂಥಕರ್ತರ 'ಆರೋಗ್ಯಸಾಧನ' ವೆಂಬ ಗುಜರಾತಿ ಗ್ರಂಥದ, ಭಾಗ ೧, ೯ನೆಯ ಅಧ್ಯಾಯ (ಗುಹ್ಯಪ್ರಕರಣ) ದ ಭಾಷಾಂತರವಾಗಿದೆ.

ಆರೋಗ್ಯಕ್ಕೆ ಹಲವು ಬಗೆಯ ಕುಂಚಿಕೆಗಳಿರುವವು, ಅವುಗಳೆಲ್ಲವೂ ಮುಖ್ಯವಾದವುಗಳೇ. ಆದರೆ ಅವುಗಳಲ್ಲಿ ಮುಖ್ಯವಾದ ಕುಂಚಿಕೆಯು ಬ್ರಹ್ಮಚರ್ಯೆಯಾಗಿರುವುದು. ಶುದ್ಧವಾದ ಗಾಳಿ, ಶುದ್ಧವಾದ ನೀರು, ಆರೋಗ್ಯವಾದ ಆಹಾರ ಇವೇ ಮೊದಲಾದವುಗಳಿಂದ ನಮಗೆ ಆರೋಗ್ಯ ಲಾಭವಾಗುವುದು. ಆದರೆ ನಮಗೆ ಲಭಿಸಿದ ಆರೋಗ್ಯವನ್ನೆಲ್ಲ ನಷ್ಟಪಡಿಸಿಕೊಂಡರೆ, ನಾವು ಆರೋಗ್ಯವಾಗಿರುವುದು ಹೇಗೆ? ಗಳಿಸಿದ ದುಡ್ಡನ್ನೆಲ್ಲ ಖರ್ಚು ಮಾಡಿದರೆ ನಾವು ಪಾಪರುಗಳಾಗದಿರುವುದು ಹೇಗೆ? ಆದುದರಿಂದ ಸ್ತ್ರೀಪುರುಷರಿಬ್ಬರೂ ಆರೋಗ್ಯವನ್ನೂ ಬಲವನ್ನೂ ಸಂಗ್ರಹಿಸಬೇಕಾದರೆ ಬ್ರಹ್ಮಚರ್ಯೆಯನ್ನು ಆವಶ್ಯಕವಾಗಿ ಸಾಧಿಸಬೇಕೆಂಬುದರಲ್ಲಿ ಯಾರಿಗೂ ಸಂದೇಹವಿರಲಾರದು. ವೀರ್ಯ ರಕ್ಷಣೆಯನ್ನು ಮಾಡಿಕೊಂಡವರೇ ವೀರ್ಯವಂತರು ಬಲಿಷ್ಟರು ಎನ್ನಿಸಿಕೊಳ್ಳುವರು.

ಹಾಗಾದರೆ ಬ್ರಹ್ಮಚರ್ಯೆಯೆಂದರೇನು? ಪುರುಷನು ಸ್ತ್ರೀಯ, ಸ್ತ್ರೀಯು ಪುರುಷನ ಭೋಗಮಾಡದಿರುವುದೇ ಬ್ರಹ್ಮಚರ್ಯೆಯೆನಿಸುವುದು. ಎಂದರೆ ಒಬ್ಬನು ಮತ್ತೊಬ್ಬಳನ್ನು ಕೇವಲ ವಿಷಯೇಚ್ಛೆಯಿಂದ ಸ್ಪರ್ಶಿಸ ಕೂಡದು, ಪರಸ್ಪರ ವಿಷಯೇಚ್ಛೆಯನ್ನೂ ಮಾಡಕೂಡದು, ಅಷ್ಟು ಮಾತ್ರವಲ್ಲದೆ ಸ್ವಪ್ನದಲ್ಲಿ ಕೂಡ ಇದರ ಸಂಬಂಧವನ್ನು ಹೊಂದಕೂಡದು. ಸ್ತ್ರೀಪುರುಷರು ಪರಸ್ಪರ ನೋಟದಿಂದ ವಿಹ್ವಲರಾಗಕೂಡದು. ಪ್ರಕೃತಿಯು ನಮಗೆ ಅನುಗ್ರಹಪೂರ್ವಕವಾಗಿ ಕೊಟ್ಟಿರುವ ಗುಪ್ತಶಕ್ತಿಯನ್ನು ಆತ್ಮ ಸಂಯಮನದಿಂದ ಸಂಗ್ರಹಿಸಿಕೊಂಡು, ಅದರಿಂದ ನಮ್ಮ ಆರೋಗ್ಯವನ್ನೂ ಶಕ್ತಿಯನ್ನೂ ಹೆಚ್ಚಿಸಿಕೊಳ್ಳಬೇಕು, ಮತ್ತು ಆ ಆರೋಗ್ಯವು ಕೇವಲ ಶರೀರಕ್ಕೆ ಮಾತ್ರ ಸಂಬಂಧ ಪಟ್ಟಿದುದಾಗಿರದೇ ನಮ್ಮ ಮನಸ್ಸು, ಬುದ್ಧಿ ಮತ್ತು ಸ್ಮರಣಶಕ್ತಿಗೂ ಲಭಿಸುವಂತಿರಬೇಕು.

ಆದರೆ ನಮ್ಮ ಸುತ್ತಮುತ್ತಲೂ ನಮಗೆ ಕಾಣುತ್ತಿರುವ ನೋಟವೆಂತಹದು? ಚಿಕ್ಕವರು, ದೊಡ್ಡವರು, ಸ್ತ್ರೀಪುರುಷರಾದಿಯಾಗಿ ಎಲ್ಲರೂ ಈ ಮೋಹನದಿಯಲ್ಲಿ ಮುಳುಗೇಳುತ್ತಿರುವರು. ಅವರೆಲ್ಲರೂ

ಸಾಮಾನ್ಯವಾಗಿ ಕಾಮೇಂದ್ರಿಯದ ಗುಲಾಮರಾಗಿ ಬುದ್ಧಿಚಾಂಚಲ್ಯ ವನ್ನೂ ದೃಷ್ಟಿಮಾಂದ್ಯವನ್ನೂ ಹೊಂದುವರು. ಕಾಮಪೀಡಿತರಾದ ಸ್ತ್ರೀಪುರುಷರೂ ಬಾಲಕ ಬಾಲಿಕೆಯರೂ ಹುಚ್ಚರಂತೆ ವರ್ತಿಸುವುದನ್ನೂ ನಾನು ನೋಡಿರುವೆನು. ಕಾಮಪೀಡಿತನಾದಾಗ ನಾನು ಕೂಡ ಹಾಗೆ ವರ್ತಿಸಿರುವೆನು. ಆ ಅವಸ್ಥೆಯಲ್ಲಿ ನಾನು ಮೈಮರೆತವನಂತೆ ವರ್ತಿಸುತ್ತಿದ್ದೆನು. ಆ ವಿಷಯವೇ ಹಾಗಿರುವುದು, ಕೇವಲ ಒಂದು ಕ್ಷಣದ ಸುಖಕ್ಕಾಗಿ ನಾವು ವಿಶೇಷ ಪರಿಶ್ರಮದಿಂದ ಸಂಗ್ರಹಿಸಿಟ್ಟುಕೊಂಡಿರುವ ಚೇತನ ಶಕ್ತಿಯನ್ನು ಒಂದು ನಿಮಿಷದೊಳಗಾಗಿ ಕಳೆದುಕೊಳ್ಳುವೆವು. ಮದವಿಳಿದ ಕೂಡಲೆ ನಮ್ಮ ಅವಸ್ಥೆಯು ವಿಷಾದಜನಕವಾಗುವುದು. ಮರುದಿನ ಮನಸ್ಸಿಗೆ ವಿಶ್ರಾಂತಿಯಿರದು, ಶರೀರದಲ್ಲಿ ಸುಸ್ತಾಗುವುದು, ಮನಸ್ಸು ಚಂಚಲವಾಗಿರುವುದು. ಆಗ ಅದರ ನಿವಾರಣೆಗಾಗಿ ನಾವು ಸೇರುಗಟ್ಟಲೆ ಹಾಲು ಕುಡಿಯುವೆವು. ಗಜವೇಲಿಕಾ ಚೂರ್ಣವನ್ನೂ, ಯಾಕುತಿಗಳನ್ನೂ (ಮುತ್ತು ಸೇರಿದ ಔಷಧಗಳನ್ನೂ) ಸೇವಿಸಲಾರಂಭಿಸುವೆವು. ಸಾಲದುದಕ್ಕೆ ವೈದ್ಯರ ಬಳಿಗೆ ಹೋಗಿ ಬಲಬರುವುದಕ್ಕೆ ಔಷಧಿ (ಟಾನಿಕ್) ಗಳನ್ನು ತೆಗೆದುಕೊಳ್ಳುವೆವು. ಆಮೇಲೆ ಯಾವುದನ್ನು ಸೇವಿಸಿದರೆ ಕಾಮೋದ್ದೀಪನವಾಗುವುದೆಂಬ ಶೋಧನೆಯಲ್ಲಿ ಮಗ್ನರಾಗುವೆವು. ಹೀಗೆಯೆ ದಿನಗಳೂ ಕಳೆದು ನಾವು ಶರೀರದಿಂದಲೂ ಬುದ್ಧಿಯಿಂದಲೂ ಹೀನರಾಗಿ ವೃದ್ಧಾಪ್ಯದಲ್ಲಡಿಯಿಡುವೆವು.

ಆದರೆ ಹೀಗಾಗುವುದು ಪ್ರಕೃತಿ ನಿಯಮವಾಗಿಲ್ಲ. ನಮಗೆ ವಯಸ್ಸಾದಂತೆಲ್ಲ ನಮ್ಮ ಬುದ್ಧಿಯು ತೇಜಃಪೂರ್ಣವಾಗಿರಬೇಕು: ನಾವು ಜೀವಿಸಿದಷ್ಟು ದೀರ್ಘಕಾಲವೂ, ನಮ್ಮ ಶರೀರದ ಮೂಲಕ ಉಂಟಾದ ಅನುಭವದ ಉಪಯುಕ್ತತೆಯು ಬೇರೆಯವರಿಗೂ ಉಂಟಾಗುವಂತೆ ಮಾಡಬೇಕು. ನಿಜವಾಗಿಯೂ ಬ್ರಹ್ಮಚರ್ಯಪಾಲನೆ ಮಾಡುವವರ ಸ್ಥಿತಿಯು ಹಾಗಿರುವುದು. ಅವರಿಗೆ ಮೃತ್ಯು ಭಯವೇ ಇರುವುದಿಲ್ಲ, ಅವರು ಮರಣೋನ್ಮುಖರಾಗಿದ್ದಾಗಲೂ ದೇವರನ್ನು ಮರೆಯುಲಾರರು. ಮೃತ್ಯುಸಮಯದಲ್ಲಿ ಅವರು ಯಾವ ಆಸೆಯನ್ನೂ ಇಟ್ಟುಕೊಳ್ಳುವುದಿಲ್ಲ, ನಗುತ್ತ ನಗುತ್ತ ಅವರು ತಮ್ಮ ಶರೀರವನ್ನು ತ್ಯಜಿಸು

ದೇವರೆದುರಿಗೆ ಧೈರ್ಯವಾಗಿ ತಮ್ಮ ಪವಿತ್ರ ಜೀವನ ಸಾಕ್ಷ್ಯವನ್ನು ಕೊಡಲು ಹೊರಟುಹೋಗುವವರು. ಅವರೇ ನಿಜವಾದ ಪುರುಷಸಿಂಹರು. ಈಬಗೆಯಾಗಿ ದೇಹವನ್ನು ತ್ಯಜಿಸಬಲ್ಲ ಸ್ತ್ರೀಯೇ ನಿಜವಾದ ಸ್ತ್ರೀರತ್ನವು. ಅಂತಹವರು ಮಾತ್ರವೇ ಆರೋಗ್ಯಸಾಧಕರೆನಿಸಿಕೊಳ್ಳಬಲ್ಲರು.

ಈ ಪ್ರಪಂಚದಲ್ಲಿ ಹೆಮ್ಮೆ, ಪ್ರಮಾದ, ಮತ್ಸರ, ದುರಭಿಮಾನ, ಅಡಂಬರ, ಕ್ರೋಧ, ಅಧೈರ್ಯ ಇವೇ ಮೊದಲಾದವುಗಳಿಗೆ ಬ್ರಹ್ಮಚರ್ಯ ಭಂಗವೇ ಕಾರಣವಾಗಿರುವುದೆಂಬುದನ್ನು ನಾವು ಆಲೋಚಿಸುವುದಿಲ್ಲ. ಮನಸ್ಸು ನಮ್ಮ ವಶದಲ್ಲಿರದಿದ್ದರೆ, ಒಂದು ಅಥವಾ ಹೆಚ್ಚುಬಾರಿ ನಾವು ಮಕ್ಕಳಿಗಿಂತಲೂ ಮೂರ್ಖರಾಗಿ ವರ್ತಿಸಿದರೆ, ತಿಳಿದೊ ತಿಳಿಯದೆಯೊ ನಾವು ಎಷ್ಟು ಪಾಪಕರ್ಮಗಳನ್ನಾಚರಿಸುವುದಿಲ್ಲ? ಆಗ ಘೋರ ಪಾಪಕರ್ಮಗಳನ್ನಾಚರಿಸಲು ಸ್ವಲ್ಪವಾದರೂ ಹಿಂದೆಮುಂದೆ ನಾವು ನೋಡಬಲ್ಲೆವೆ ?

ಆದರೆ 'ಈ ಅರ್ಥದಲ್ಲಿ ನಿಜವಾದ ಬ್ರಹ್ಮಚಾರಿಯನ್ನು ಯಾರು ನೋಡಿರುವರು ? ಜನರೆಲ್ಲರೂ ಇಂತಹ ಬ್ರಹ್ಮಚರ್ಯೆಯನ್ನು ಪಾಲಿಸಲಾರಂಭಿಸಿದರೆ ಮಾನವ ಜಾತಿಯೂ ಸಮಗ್ರ ಪ್ರಪಂಚವೂ ನಾಶವಾಗುವುದಿಲ್ಲವೆ?' ಎಂದು ಕೇಳಬಹುದು. ಇದರಲ್ಲಿ ಧಾರ್ಮಿಕ ವಿಚಾರದ ಭಾಗವನ್ನು ಬಿಟ್ಟು ಕೇವಲ ಸಾಂಸಾರಿಕ ದೃಷ್ಟಿಯಿಂದ ವಿಚಾರ ಮಾಡುವ. ಈ ಪ್ರಶ್ನೆಗಳೆಲ್ಲ ನಮ್ಮ ಅಂಜುಬುರುಕುತನವನ್ನೂ ದೌರ್ಬಲ್ಯವನ್ನೂ ತೋರಿಸುವವಾಗಿರುವೆಂದು ನನ್ನ ಅಭಿಪ್ರಾಯ. ನಾವು ಬ್ರಹ್ಮಚರ್ಯೆಯನ್ನಾಚರಿಸಲು ಇಚ್ಛಾಬಲವಿಲ್ಲದವರಾಗಿರುವೆವು. ಆದ್ದರಿಂದ ನಮ್ಮ ಕರ್ತವ್ಯದಿಂದ ತಪ್ಪಿಸಿಕೊಳ್ಳಲು ಏನಾದರೊಂದು ಉಪಾಯವನ್ನು ಹುಡುಕುವೆವು. ನಿಜವಾದ ಬ್ರಹ್ಮಚರ್ಯೆಯನ್ನಾಚರಿಸುವ ಬಹು ಜನರು ಈ ಪ್ರಪಂಚದಲ್ಲಿರುವರು. ಆದರೆ ಅವರು ಬೇಕು ಬೇಕಾದಲ್ಲಿ ಸಿಕ್ಕಿದರೆ ಬ್ರಹ್ಮಚರ್ಯೆಗೆ ಹೆಚ್ಚು ಗೌರವವನ್ನು ನಾವು ಕೊಡುತ್ತಿದ್ದೆವೆ? ವಜ್ರವನ್ನು ಹುಡುಕುವುದಕ್ಕಾಗಿ ಸಾವಿರಾರು ಜನ ಕೂಲಿಕಾರರು ಭೂಮಿಯನ್ನು ಕೊರೆದು ಗಣಿಯೊಳಗೆ ನುಗ್ಗುವರು. ಅಲ್ಲಿ ಕೊನೆಗೆ ಪರ್ವತಾಕಾರವಾದ ಕಲ್ಲುರಾಶಿಗಳ ಮಧ್ಯದಲ್ಲಿ ಕೇವಲ

ಒಂದು ಹಿಡಿ ತುಂಬುವಷ್ಟು ವಜ್ರದ ತುಣುಕುಗಳು ದೊರೆಯಬಹುದು. ಹಾಗಾದರೆ ಬ್ರಹ್ಮಚಾರಿಯೆಂಬ ಅಮೌಲ್ಯರತ್ನವನ್ನು ಶೋಧಿಸುವುದರಲ್ಲಿ ಎಷ್ಟು ಪ್ರಯತ್ನಮಾಡಬೇಕಾಗುವುದೆಂಬುದನ್ನು ವಾಚಕರೇ ತ್ರೈರಾಶಿಯ ಲೆಖ್ಖದಿಂದ ಕಂಡುಹಿಡಿಯಬಹುದು. ಬ್ರಹ್ಮಚರ್ಯ ಪಾಲನೆಯಲ್ಲಿ ಪ್ರಪಂಚವು ನಾಶವಾಗುವುದಾದರೆ ಅದರ ವಿಚಾರವನ್ನು ನಾವೇಕೆ ಮಾಡಬೇಕು? ಪ್ರಪಂಚ ವಿಚಾರವನ್ನು ಮಾಡಲು ನಾವು ದೇವರೆ? ಅದನ್ನು ಸೃಷ್ಟಿಸಿದವನು ಅದರ ರಕ್ಷಣೆಯನ್ನೂ ಮಾಡುವನು. ಇತರರು ಬ್ರಹ್ಮಚರ್ಯಪಾಲನೆ ಮಾಡುತ್ತಿರುವರೊ ಇಲ್ಲವೊ ಎಂಬುದನ್ನುಕೂಡ ನಾವು ತಿಳಿಯುವ ಅವಶ್ಯಕತೆಯಿಲ್ಲ. ವ್ಯಾಪಾರ, ವಕೀಲಿ, ವೈದ್ಯ- ಇವೇ ಮೊದಲಾದ ಕಸಬುಗಳನ್ನವಲಂಬಿಸುವಾಗ, ಪ್ರಪಂಚದವರೆಲ್ಲಾ ಆ ವೃತ್ತಿಯನ್ನವಲಂಬಿಸಿದರೆ ಮುಂದೆ ನಮ್ಮಗತಿಯೇನೆಂದು ಆಲೋಚಿಸುವೆವೆ? ಬ್ರಹ್ಮಚರ್ಯಪಾಲನೆ ಮಾಡುವ ಸ್ತ್ರೀಪುರುಷರು ಕಾಲಕ್ರಮೇಣ ಈ ಪ್ರಶ್ನೆಗಳಿಗೆ ತಾವಾಗಿಯೇ ಉತ್ತರವನ್ನು ಕಂಡುಕೊಳ್ಳುವರು.

ಸಾಂಸಾರಿಕ ಮನುಷ್ಯರು ಈ ವಿಚಾರಗಳನ್ನು ಹೇಗೆ ಸಾಧನೆಗೆ ತರಬಲ್ಲರು. ವಿವಾಹಿತರೇನು ಮಾಡಬೇಕು? ಮಕ್ಕಳೊಂದಿಗರು ಏನು ಮಾಡಬೇಕು? ಕಾಮಶಕ್ತಿಯನ್ನು ಜಯಿಸಲಾಗದವರೇನು ಮಾಡಬೇಕು? ಈ ವಿಷಯದಲ್ಲಿ ಎಲ್ಲಕ್ಕಿಂತಲೂ ಉತ್ತಮವೆಂದಾರಿಸಿರುವ ಉಪಾಯದ ಆದರ್ಶವನ್ನು ಮುಂದಿಟ್ಟುಕೊಂಡು ಸಾಧ್ಯವಾದಮಟ್ಟಿಗೆ ಅದರ ಸಾಧನೆಯಲ್ಲಿ ಮಗ್ನವಾಗಬೇಕು. ಮಕ್ಕಳಿಗೆ ವರ್ಣಮಾಲೆಯನ್ನು ಕಲಿಸುವಾಗ ನಾವು ಉತ್ತಮೋತ್ತಮ ಅಕ್ಷರಗಳನ್ನು ಬರೆದು ತೋರಿಸುವೆವು. ಅವರು ತಮ್ಮ ಕೈಲಾದಮಟ್ಟಿಗೆ ಅದರ ನಕಲನ್ನು ಮಾಡಲೆತ್ನಿಸುವರು. ಆದರಂತೆಯೇ ನಾವು ಕೂಡ ಅಖಂಡ ಬ್ರಹ್ಮಚರ್ಯೆಯ ಆದರ್ಶವನ್ನು ನಮ್ಮ ಕಣ್ಣೆದುರಿಗಿಟ್ಟುಕೊಂಡು ಅದನ್ನನುಸರಿಸಲು ಅಭ್ಯಾಸ ಮಾಡಲಾರಂಭಿಸಿದರೆ ಕ್ರಮೇಣ ನಮಗೆ ಅದರಲ್ಲಿ ಪೂರ್ಣತೆಯು ಲಭಿಸಬಹುದು. ನಮಗೆ ಮದುವೆಯಾಗಿದ್ದರೇನಾಯಿತು? ದಂಪತಿಗಳಿಗೆ ಸಂತಾನೇಚ್ಛೆಯುಂಟಾದಾಗ ಮಾತ್ರ ಬ್ರಹ್ಮಚರ್ಯ ಭಂಗ

ವಾಗುವುದು ಸೃಷ್ಟಿನಿಯಮವನ್ನನುಸರಿಸಿರುವುದು. ಈ ನಿಯಮವನ್ನು ಸ್ಮರಣೆಯಲ್ಲಿಟ್ಟುಕೊಂಡು ಯಾರು ಎರಡು, ನಾಲ್ಕು ಅಥವಾ ಆರು ವರ್ಷಗಳಿಗೊಮ್ಮೆ ಬ್ರಹ್ಮಚರ್ಯ ನಿಯಮವನ್ನು ಭಂಗಮಾಡುವರೊ ಅಂತಹವರು ಕಾಮಾಂಧರಾಗುವುದಿಲ್ಲ. ವೀರ್ಯ ರೂಪವಾದ ಚೇತನಶಕ್ತಿಯು ಅವರಲ್ಲಿ ತುಂಬಿ ತುಳುಕುವಂತಿರುವುದು. ಕೇವಲ ಸಂತಾನೋತ್ಪಾದನೆಗೆ ಮಾತ್ರವೆ ಕಾಮಭೋಗ ಮಾಡುವ ಸ್ತ್ರೀ ಪುರುಷರ ಸಂಖ್ಯೆಯು ಅತ್ಯಲ್ಪವಾಗಿರುವುದು ! ಉಳಿದ ಸಾವಿರಾರು ಮನುಷ್ಯರು ಕೇವಲ ವಿಷಯ ವಾಸನೆಯನ್ನು ತೃಪ್ತಿಗೊಳಿಸುವುದಕ್ಕಾಗಿ ಇಂದ್ರಿಯ ಭೋಗವನ್ನು ಮಾಡುವವರಾಗಿರುವವರು. ಅವರ ಇಚ್ಛೆಗೆ ವಿರುದ್ಧವಾಗಿ ಸಂತತಿಯಾಗುವುದೇ ಅದರ ಪರಿಣಾಮವಾಗಿರುವುದು. ವಿಷಯಾಸಕ್ತಿಯ ಉದ್ರೇಕದ ಸಮಯದಲ್ಲಿ ನಾವು ಅಂಧರಾಗಿ ಮುಂದಿನ ಪರಿಣಾಮವನ್ನು ಕುರಿತು ಆಲೋಚಿಸುವುದೇ ಇಲ್ಲ. ಈ ವಿಚಾರದಲ್ಲಿ ಸ್ತ್ರೀಯರಿಗಿಂತಲೂ ಪುರುಷರೇ ಅಧಿಕ ದೋಷಿಗಳಾಗಿರುವರು. ಬಾಲ್ಯ ವಯಸ್ಸಿನ ಸತಿ ಮತ್ತು ಬಾಲಕ ವರನಿಂದ ಸಂತಾನೋತ್ಪತ್ತಿಯಾದರೆ ನಾವು ಆನಂದದಿಂದ ನರ್ತಿಸುವೆವು. ಇದಕ್ಕಿಂತಲೂ ಅಧಿಕ ಮೂರ್ಖತನವಾವುದಿರುವುದು ? ಹಿಂದೂಸ್ಥಾನದಲ್ಲಾಗಲಿ ಬೇರೆ ದೇಶದಲ್ಲಾಗಲಿ ಅಸಂಖ್ಯಾಕವಾಗಿ ಹುಟ್ಟುವ ನಿರ್ವೀರ್ಯ ಸಂತಾನಗಳಿಂದ ಪ್ರಪಂಚಕ್ಕಾಗಲಿ, ವ್ಯಕ್ತಿಗಾಗಲಿ ಏನಾದರೂ ಲಾಭವಾಗುವಂತಿದೆಯೆ ? ಈ ವಿಷಯದಲ್ಲಿ ನಮಗಿಂತಲೂ ಪಶುವರ್ಗವೆಷ್ಟೋ ಉತ್ತಮಸ್ಥಿತಿಯಲ್ಲಿರುವುದು. ಏಕೆಂದರೆ ಕೇವಲ ಸಂತಾನೋತ್ಪಾದನೆಗಾಗಿ ಮಾತ್ರ ಅವುಗಳಲ್ಲಿ ಗಂಡು ಹೆಣ್ಣುಗಳ ಸಂಯೋಗವಾಗುವುದು. ಸ್ತ್ರೀಪುರುಷರು ಗರ್ಭಧಾರಣೆಯ ದಿನದಿಂದ ಮಗುವು ಮೊಲೆಯುಣ್ಣುವುದನ್ನು ಬಿಡುವವರೆಗೆ ಪ್ರತ್ಯೇಕವಾಗಿ ಮಲಗುವುದು ತಮ್ಮ ಪವಿತ್ರ ಕರ್ತವ್ಯವೆಂದರಿಯಬೇಕು. ಆ ಕಾಲದಲ್ಲಿ ದಂಪತಿಗಳಿಬ್ಬರೂ ಬ್ರಹ್ಮಚರ್ಯ ಪಾಲನೆ ಮಾಡಬೇಕು. ಆದರೆ ಈ ಪವಿತ್ರ ವಿಚಾರವನ್ನೆ ಮರೆತು ವಿನಾಶಕರವಾದ ಭೋಗದಲ್ಲಿ ನಾವು ಮಗ್ನರಾಗುವೆವು ! ಇದು ಮನಸ್ಸಿನ ಅಸಾಧ್ಯವಾದ ರೋಗವು. ಈ ರೋಗವು ನಮಗೆ ಮೃತ್ಯುವಿನ ಭೇಟಿ ಮಾಡಿ

ಸುವುದು ಮತ್ತು ಮರಣಕ್ಕೆ ಮೊದಲು ನಮ್ಮ ಜೀವನವನ್ನು ದುಃಖಮಯವಾಗಿ ಮಾಡುವುದು. ಆದುದರಿಂದ ವಿವಾಹಿತ ಸ್ತ್ರೀಪುರುಷರು ವಿವಾಹದ ನಿಜವಾದ ಅರ್ಥವನ್ನರಿತು, ಕೇವಲ ವಂಶೋದ್ಧಾರಕ್ಕಾಗಿ ಸಂತಾನವನ್ನು ಪಡೆವ ಸಮಯವನ್ನು ಬಿಟ್ಟು ಉಳಿದ ಸಮಯದಲ್ಲಿ ಬ್ರಹ್ಮಚರ್ಯಪಾಲನೆ ಮಾಡುವುದು ತಮ್ಮ ಮುಖ್ಯ ಕರ್ತವ್ಯವೆಂದರಿಯಬೇಕು.

ಈಗಣ ಕರುಣಾಜನಕವಾದ ಪರಿಸ್ಥಿತಿಯಲ್ಲಿ ಹಾಗೆ ಮಾಡುವುದು ಕಠಿಣವಾಗಿದೆ. ಈಗ ನಮ್ಮ ಆಹಾರ, ನಡೆನುಡಿ, ಮಾತುಕಥೆ, ಸುತ್ತಮುತ್ತಣ ಪರಿಸ್ಥಿತಿಗಳೆಲ್ಲ ನಮ್ಮ ವಿಷಯ ವಾಸನೆಗಳನ್ನು ಜಾಗ್ರತಗೊಳಿಸುವವಾಗಿರುವವು. ಪ್ರತಿ ಕ್ಷಣದಲ್ಲಿಯೂ ನಮ್ಮಲ್ಲಿ ವಿಷಯಾಸಕ್ತಿಯು ಉದ್ರೇಕಗೊಳ್ಳುತ್ತಿರುವುದು. ಇಂತಹ ಸ್ಥಿತಿಯಲ್ಲಿ ನಾವು ಈ ರೋಗದಿಂದ ಮುಕ್ತರಾಗುವುದು ಹೇಗೆಂದು ಕೆಲವರು ಸಂಶಯಪಡಬಹುದು. ಆದರೆ ಈ ಸಂಶಯ ಮಾನಸರಿಗಾಗಿ ಈ ಪುಸ್ತಕವನ್ನು ಬರೆದಿಲ್ಲ. ವಿಚಾರ ಯೋಗ್ಯವಾದ ವಿಷಯದಲ್ಲಿ ಉತ್ಸಾಹ ಪೂರ್ಣರಾಗಿ ಆತ್ಮೋದ್ಧಾರಕ್ಕಾಗಿ ಪ್ರಯತ್ನಪಡಲು ಸಿದ್ಧರಾಗಿರುವಂತಹರಿಗಾಗಿ ಈ ಪುಸ್ತಕವನ್ನು ಬರೆಯಲಾಗಿದೆ. ತಮ್ಮ ಈಗಿನ ಹೀನಸ್ಥಿತಿಯಲ್ಲಿಯೆ ಸಂತುಷ್ಟರಾಗಿರುವವರಿಗೆ ಇದನ್ನು ಓದುವುದಕ್ಕೆ ಕೂಡ ಬೇಸರವಾಗಬಹುದು. ತಮ್ಮ ದೀನ ದೆಸೆಯನ್ನರಿತು ಅದರಿಂದ ಬೇಸರಗೊಂಡಿರುವವರಿಗೆ ಸಹಾಯ ಮಾಡುವ ಉದ್ದೇಶ್ಯದಿಂದ ಈ ಪುಸ್ತಕವನ್ನು ಬರೆಯಲಾಗಿದೆ.

ಇದುವರೆಗೆ ಹೇಳಿದ ಸಂಗತಿಗಳಿಂದ, ಇನ್ನೂ ಅವಿವಾಹಿತರಾಗಿರುವವರು ಅವಿವಾಹಿತರಾಗಿಯೆ ಇರುವುದೊಳ್ಳೆಯದೆಂದು ತಿಳಿದುಬರುವುದು. ವಿವಾಹವಾಗದೆ ಇರುವ ಅಥವಾ ವಿವಾಹವಾಗುವ ಸಂದರ್ಭದಲ್ಲಿ ಸಾಧ್ಯವಾದಷ್ಟು ತಡವಾಗಿ ವಿವಾಹವಾಗುವುದೊಳ್ಳೆಯದು. ಯುವಕರು ೨೫-೩೦ ವರುಷ ವಯಸ್ಸಾಗುವವರೆಗೆ ಮದುವೆ ಮಾಡಿಕೊಳ್ಳುವುದಿಲ್ಲವೆಂದು ಪಣವನ್ನು ತೊಡಬೇಕು. ಇದರಿಂದ ಆರೋಗ್ಯ ಲಾಭ ಮಾತ್ರವಲ್ಲದೆ ಆಗುವ ಇತರ ಪ್ರಯೋಜನಗಳ

ವಿಚಾರವನ್ನು ಇಲ್ಲಿ ಪ್ರಸ್ತಾಪಿಸುವುದಿಲ್ಲ. ಬೇಕಾದವರು ತಾವಾಗಿಯೆ ಅವುಗಳ ಅನುಭವವನ್ನು ಪಡೆಯಬಹುದು.

ತಮ್ಮ ಮಕ್ಕಳ ಮೇಲೆ ಬಾಲ್ಯದಲ್ಲಿಯೆ ವಿವಾಹದ ಬೇಡಿಯ ಹೊರೆಯನ್ನು ಹೊರಿಸಕೂಡದೆಂದು ಮಾತಾಪಿತರಲ್ಲಿ ನಾನು ಬಿನ್ನಹ ಮಾಡಿಕೊಳ್ಳುವೆನು. ಅದರಿಂದ ಅವರು ತಮ್ಮ ಮಕ್ಕಳಿಗೆ ಹಿತವನ್ನು ಬಯಸುವುದಕ್ಕೆ ಬದಲಾಗಿ, ಘಾತಕರೆನಿಸಿಕೊಂಡು ತಮ್ಮ ಅಂಥ ಸ್ವಾರ್ಥಕ್ಕೆ ಬಲಿ ಬೀಳುವರು. ಅವರು ದೊಡ್ಡಸ್ತಿಕೆಗಾಗಿ ಅಥವಾ ಬಂಧು ಬಳಗದವರಲ್ಲಿ ಪ್ರತಿಷ್ಠೆಯನ್ನು ಪಡೆವುದಕ್ಕಾಗಿ ವಿವಾಹದ ವಿನೋದವನ್ನು ಹೂಡುವರು. ಇಂತಹ ಕ್ರೂರವಾದ ಮೂರ್ಖ ಕೆಲಸ ವನ್ನೆಂದಿಗೂ ಮಾತಾಪಿತರು ಮಾಡಕೂಡದು. ತಮ್ಮ ಮಕ್ಕಳ ಹಿತ ವನ್ನು ಬಯಸುವವರು ಅವರ ಶಾರೀರಿಕ, ಮಾನಸಿಕ, ನೈತಿಕ ಉನ್ನ ತಿಯ ಕಡೆಗೆ ಗಮನಕೊಡಬೇಕು. ಗೃಹಸ್ಥ ಧರ್ಮದ ಹೊಣೆಯ ಮತ್ತು ಕರ್ತವ್ಯದ ಹೊರೆಯನ್ನು ಬಾಲ್ಯ ವಿವಾಹದ ಮೂಲಕ ತಮ್ಮ ಮಕ್ಕಳಮೇಲೆ ಹೊರಿಸುವುದಕ್ಕಿಂತ ಮತ್ತಾವ ದೊಡ್ಡ ಅಪಕಾರವನ್ನು ಮಾತಾಪಿತರು ಮಾಡಬಲ್ಲರು ?

ಆರೋಗ್ಯ ಶಾಸ್ತ್ರ ನಿಯಮವು ಕೂಡ ವಿವಾಹಿತ ಸ್ತ್ರೀಪುರುಷರು ಪರಸ್ಪರ ವಿಯೋಗವಾದನಂತರ ಎಂದರೆ ಅವರಿಬ್ಬರಲ್ಲಿ ಯಾರು ಮರ ಣವನ್ನೈದಿದರೂ, ಮತ್ತೊಬ್ಬರು ಸಾಯುವವರೆಗೆ ಮದುವೆಮಾಡಿ ಕೊಳ್ಳದೇ ಬ್ರಹ್ಮಚರ್ಯ ಪಾಲನೆ ಮಾಡಬೇಕೆಂದು ಹೇಳುವುದು. ಕೆಲವು ವೈದ್ಯಶಾಸ್ತ್ರಜ್ಞರು ಯುವಕ ಯುವತಿಯರಿಗೆ ವೀರ್ಯಪಾತ ವಾಗುವುದು ಅವಶ್ಯಕವೆಂದು ಹೇಳುವರು. ಈ ರೀತಿಯಾಗಿ ಡಾಕ್ಟರು ಗಳಲ್ಲಿಯೆ ದೊಡ್ಡ ಮತಭೇದವಿರುವುದು. ಇದನ್ನರಿತು ಒಂದು ಪಕ್ಷದ ಡಾಕ್ಟರುಗಳ ವಿಚಾರವು ನಮ್ಮ ವಿಚಾರವನ್ನು ಪೋಷಿಸುವುದೆಂದು ನಾವು ವಿಷಯಾಸಕ್ತಿಯಲ್ಲಿ ಲೀನರಾಗುವುದು ನಿಜವಾಗಿಯೂ ಅನುಚಿತ ವಾಗುವುದು. ನನ್ನ ಸ್ವಂತ ಮತ್ತು ಇತರರ ಅನುಭವದ ಆಧಾರ ಬಲ ದಿಂದ, ಆರೋಗ್ಯ ರಕ್ಷಣೆಗೆ ವಿಷಯ ಭೋಗದ ಆವಶ್ಯಕತೆಯಿಲ್ಲವೆಂದೂ ವಿಷಯ ಭೋಗದಿಂದಾಗುವ ವೀರ್ಯಪಾತದಿಂದ ಆರೋಗ್ಯಕ್ಕೆ ವಿಶೇಷ

ಹಾನಿಯಾಗುವುದೆಂದೂ ನಾನು ಧೈರ್ಯವಾಗಿ ಹೇಳುವೆನು. ಬಹು ಕಾಲದಿಂದ ಸಂಗ್ರಹೀತವಾದ ದೈಹಿಕ ಮಾನಸಿಕ ಶಕ್ತಿಯು, ಒಂದು ಬಾರಿ ವೀರ್ಯಪಾತದಿಂದ ನಾಶವಾಗಿ ಹೋಗುವುದು. ಅದನ್ನು ಸಂಪಾದಿಸುವುದಕ್ಕೆ ವಿಶೇಷ ಕಾಲವು ಬೇಕಾಗುವುದು. ಆಗಲಾದರೂ ಅದನ್ನು ಸಂಪೂರ್ಣವಾಗಿ ಹೊಂದಬಹುದೆಂಬ ಭರವಸೆ ಇರುವುದಿಲ್ಲ. ಒಡೆದ ಕನ್ನಡಿಯನ್ನು ಸೇರಿಸಿ ಕೆಲಸ ನಡೆಯಿಸಿಕೊಳ್ಳಬಹುದು, ಆದರೆ ಆ ಕನ್ನಡಿಯು ಮಾತ್ರ ಒಡೆದ ಕನ್ನಡಿಯೆ ಆಗಿರುವುದು.

ಹಿಂದೆ ಹೇಳಿರುವಂತೆ ಶುದ್ಧವಾದ ಹವೆಯೂ, ನಿರ್ಮಲವಾದ ನೀರೂ, ಹಿತಕರವಾದ ಸ್ವಚ್ಛ ಭೋಜನವೂ, ಪವಿತ್ರ ವಿಚಾರಗಳೂ ವೀರ್ಯರಕ್ಷಣೆಗೆ ಅತ್ಯಾವಶ್ಯಕವಾಗಿವೆ. ಪೂರ್ಣ ಸದಾಚಾರ ಸಂಪನ್ನನಾದ ಮಾನವನೇ ಆರೋಗ್ಯ ಲಾಭವನ್ನು ಹೊಂದಬಲ್ಲನು. ಆಚರಣೆಗೂ ಆರೋಗ್ಯಕ್ಕೂ ಇಷ್ಟು ಘನಸಂಬಂಧವಿರುವುದು. ಎಚ್ಚರವಾದಾಗಲೆ ಬೆಳಗಾಯಿತೆಂದು ಎದ್ದು ಕೆಲಸಮಾಡಲಾರಂಭಿಸುವವರು ಮೇಲೆ ಹೇಳಿದ ವಿಷಯವಾಗಿ ಚೆನ್ನಾಗಿ ಆಲೋಚನೆ ಮಾಡಿ ಅದರಂತೆ ಆಚರಿಸಲಾರಂಭಿಸಿದರೆ, ಅವರಿಗೆ ಪ್ರತ್ಯಕ್ಷ ಅನುಭವಲಾಭವಾಗುವುದು. ಯಾವನು ಸ್ವಲ್ಪಕಾಲದವರೆಗಾದರೂ ಬ್ರಹ್ಮಚರ್ಯಪಾಲನೆ ಮಾಡಿ, ತನ್ನ ಮನಸ್ಸು ಮತ್ತು ಶರೀರದಲ್ಲಿ ಹೆಚ್ಚಿದ ಬಲದ ಅನುಭವವನ್ನು ಹೊಂದಿರುವನೊ ಅವನು ಈ ಸಂಪದವನ್ನು ಪ್ರಾಣಕ್ಕಿಂತಲೂ ಅಧಿಕವಾಗಿ ರಕ್ಷಿಸಿಕೊಳ್ಳುವನು. ನಾನು ಕೂಡ ಹಲವು ಬಾರಿ ದೋಷಗಳಿಗೆ ಗುರಿಯಾಗಿ ಕೂಡಲೆ ಎಚ್ಚೆತ್ತಿರುವೆನು. ಬ್ರಹ್ಮಚರ್ಯೆಯ ಬೆಲೆಯನ್ನರಿತಮೇಲೂ ನಾನು ಹಲವು ಬಾರಿ ತಪ್ಪುಮಾಡಿರುವೆನು ಮತ್ತೆ ಅವುಗಳ ದುಷ್ಫಲಗಳನ್ನು ಅನುಭವಿಸಿಯೂ ಇರುವೆನು. ತಪ್ಪು ಮಾಡುವುದಕ್ಕೆ ನನ್ನ ಮುಂಚಿನ ಸ್ಥಿತಿಯನ್ನೂ ಅನಂತರದ ಅವಸ್ಥೆಯನ್ನು ನಾನು ಸ್ಮರಿಸಿಕೊಂಡಾಗಲೆಲ್ಲ ನನಗೆ ದುಃಖವೂ ಲಜ್ಜೆಯೂ ಉಂಟಾಗುವುದು. ಆದರೆ ನನ್ನ ಹಿಂದಣ ತಪ್ಪುಗಳಿಂದ ಈ ಪಾರಸಿಕ ಮಣಿಯನ್ನು ಸುರಕ್ಷಿತವಾಗಿಡಲು ಕಲಿತಿರುವೆನು. ಇನ್ನು ಮುಂದೆ ಕೂಡ ಇದನ್ನು ಅಖಂಡರೂಪದಿಂದ ಪಾಲಿಸಲು ಭಗವಂತನು ನನಗೆ

ಶಕ್ತಿಯನ್ನೀಯುವನೆಂಬ ಭರವಸೆಯುಳ್ಳವನಾಗಿರುವೆನು. ಆದರೆ ಕಾಮಾಂಧನಾದ ಪುರುಷನು ಸ್ತ್ರೀಯು ದುರ್ಬಲಳೆಂಬುದನ್ನೂ ಅವಳಲ್ಲಿ ಸಂತಾನಪಾಲನೆ ಪೋಷಣೆಯ ಶಕ್ತಿ ಯಿರುವುದಿಲ್ಲವೆಂಬುದನ್ನೂ ಮರೆತುಬಿಡುವನು! ಪಾಶ್ಚಾತ್ಯ ದೇಶಗಳಲ್ಲಂತೂ ಈ ವಿಚಾರದಲ್ಲಿ ಜನರು ಮೇರೆ ಮೀರಿರುವರು. ಅವರು ಭೋಗವಿಲಾಸಗಳಲ್ಲಿ ಮಗ್ನರಾಗಿ, ಸಂತಾನೋತ್ಪಾದನೆಯ ಹೊಣೆಯಿಂದ ಮಾತ್ರ ತಪ್ಪಿಸಿಕೊಳ್ಳಬೇಕೆಂದು ಉಪಾಯಗಳನ್ನು ಹೂಡುವರು. ನಾವು ಈವರೆಗೆ ಈ ಪಾಪದಿಂದ ಮುಕ್ತರಾಗಿರುವೆವು. ಆದರೆ ಈ ತಾಯ್ತನದ ಹೊಣೆಯನ್ನು ನಮ್ಮ ಸ್ತ್ರೀಯರಮೇಲೆ ಹೊರಿಸಲು ನಾವು ಸ್ವಲ್ಪವೂ ಹಿಂಜರಿಯುತ್ತಿಲ್ಲ; ಅಷ್ಟು ಮಾತ್ರವಲ್ಲದೆ ನಮ್ಮ ಸಂತತಿಯು ದುರ್ಬಲವಾಗಿರುವುದೊ, ವೀರ್ಯ ಹೀನವಾಗಿರುವುದೊ ಬುದ್ಧಿಹೀನವಾಗಿರುವುದೊ ಎಂಬುದನ್ನು ಕೂಡ ನಾವು ವಿಚಾರಮಾಡುವುದೇ ಇಲ್ಲ. ಸಂತತಿಯಾದನಂತರ ನಮ್ಮ ದಾರಿದ್ರ್ಯವನ್ನು ಮುಚ್ಚಿಟ್ಟುಕೊಳ್ಳಲು ರಕ್ಷಣೆಗೋಸ್ಕರ ನಾವೂ ದೇವರನ್ನು ಸ್ತುತಿಸಿ ವಂದಿಸುವೆವು. ದುರ್ಬಲರೂ, ಕುಂಟರೂ, ಲಂಪಟರೂ, ನಿಸ್ಸತ್ವವಾದುದೂ ಆದ ಸಂತಾನವನ್ನು ಹೊಂದುವುದು ದೇವರ ಕೋಪದ ಚಿನ್ಹೆಯಲ್ಲವೆ? ೧೨ ವರ್ಷದ ಬಾಲಿಕೆಗೆ ಸಂತಾನ ಹುಟ್ಟಿದರೆ ಅದರಲ್ಲಿ ಆನಂದ ಪಡುವ ಸಂಗತಿಯೇನಿರುವುದು? ೧೨ ವರ್ಷದ ಬಾಲೆಯು ಮಾತೃತ್ವ ಪದವಿಯನ್ನು ಹೊಂದುವುದೆಂದರೆ ದೇವರ ಶಾಪದ ಕುರುಹಲ್ಲವೆ? ಸರಿಯಾಗಿ ಬೆಳೆಯುವುದಕ್ಕೆ ಮುಂಚಿತವಾಗಿ ಫಲವನ್ನು ಬಿಡುವುದರಿಂದ ಗಿಡಕ್ಕೆ ಹಾನಿ ತಟ್ಟುವುದೆಂದು ಎಲ್ಲರಿಗೂ ಗೊತ್ತಿರುವ ವಿಚಾರ. ಅದಕ್ಕೋಸ್ಕರ ಆ ಗಿಡವು ಸರಿಯಾಗಿ ಬೆಳೆಯುವುದಕ್ಕೆ ಮುಂಚಿತವಾಗಿ ಫಲವನ್ನು ಬಿಡಗೊಡುವುದಿಲ್ಲ. ಏಕೆಂದರೆ ಅದರಿಂದಾಗುವ ಶಾರೀರಿಕ ಮತ್ತು ಮಾನಸಿಕ ಲಾಭಗಳ ಅನುಭವವನ್ನು ನಾನು ಪಡೆದಿರುವೆನು. ನನಗೆ ಚಿಕ್ಕ ವಯಸ್ಸಿನಲ್ಲಿಯೇ ಮದುವೆಯಾಯಿತು. ನಾನು ವಿಷಯಾಂಧನಾಗಿ ಯುವಕನಾಗಿರುವಾಗಲೇ ಮಕ್ಕಳ ತಂದೆಯಾದೆನು. ಬಹು ದಿನಗಳವರೆಗೆ ಈ ಬಗೆಯ ಜೀವನವನ್ನನುಸರಿಸಿದನಂತರ ನಾನು ಜೀವನ ನಿಯಮ ವಿಚಾರದಲ್ಲಿ

ಘೋರಾಂಧಕಾರದಲ್ಲಿರುವೆನೆಂಬ ತಿಳಿವಳಿಕೆಯುಂಟಾಯಿತು. ನನ್ನ ತಪ್ಪುಗಳು ಮತ್ತು ಅನುಭವಗಳಿಂದ ಒಬ್ಬ ವ್ಯಕ್ತಿಯಾದರೂ ಎಚ್ಚೆತ್ತು ಸುಧಾರಣೆಯನ್ನು ಹೊಂದಿದರೆ, ನಾನು ಈ ಪ್ರಕರಣವನ್ನು ಬರೆದುದು ಸಾರ್ಥಕವಾಯಿತೆಂದು ಭಾವಿಸುವೆನು. ನನ್ನಲ್ಲಿ ಉತ್ಸಾಹವು ವಿಶೇಷವಾಗಿದೆ. ಅನೇಕರು ಹಾಗೆ ಹೇಳಿರುವರು, ನಾನು ಸಹ ಅದೇ ವಿಶ್ವಾಸವುಳ್ಳವನಾಗಿರುವೆನು. ನನ್ನ ಮನಸ್ಸು ಕೂಡ ದೃಢವಾಗಿರುವುದು, ಆದುದರಿಂದಲೇ ನಾನು ಹಠವಾದಿಯಾಗಿರುವೆನೆಂದು ಕೆಲವರು ಹೇಳುತ್ತಿರುವರು. ನನ್ನ ಶರೀರ ಮತ್ತು ಮನಸ್ಸಿನಲ್ಲಿ ರೋಗವಿದ್ದರೂ ಇತರರೊಂದಿಗೆ ನನ್ನನ್ನು ತುಲನೆಮಾಡಿಕೊಳ್ಳುವಾಗ ನಾನು ಆರೋಗ್ಯಶಾಲಿಯೆಂದು ಹೇಳಿಕೊಳ್ಳಬಹುದು. ಇಪ್ಪತ್ತು ವರುಷಗಳ ಕಾಲ ವಿಷಯಮಗ್ನನಾಗಿದ್ದ ನಂತರ ಬ್ರಹ್ಮಚರ್ಯೆಯ ಮೂಲಕ ಇಂತಹ ಸ್ಥಿತಿಯನ್ನು ಹೊಂದಿರುವಾಗ ಮೊದಲಿನಿಂದಲೂ ನಾನು ಬ್ರಹ್ಮಚರ್ಯವನ್ನಾಚರಿಸಿದ್ದರೆ ನನ್ನ ಸ್ಥಿತಿಯು ಎಷ್ಟು ಚೆನ್ನಾಗಿರುತ್ತಿತ್ತು? ಆಗ ನನ್ನ ಉತ್ಸಾಹಕ್ಕೆ ಪಾರವೇ ಇರುತ್ತಿರಲಿಲ್ಲ. ಆಗ ನನ್ನ ಸ್ವಾರ್ಥವಾದ ಲೋಕಸೇವೆಯಲ್ಲಿ ಆ ಉತ್ಸಾಹವನ್ನು ವಿನಿಯೋಗಿಸಬಹುದಾಗಿದ್ದಿತು. ನನ್ನಂತಹ ಅಪೂರ್ಣ ಬ್ರಹ್ಮಚಾರಿಯೆ ಅದರಿಂದ ಇಷ್ಟು ಲಾಭವನ್ನು ಹೊಂದಿರುವಾಗ, ಅಖಂಡ ಬ್ರಹ್ಮಚರ್ಯವನ್ನು ಪಾಲಿಸಿದವನ ಶಾರೀರಕ, ಮಾನಸಿಕ ಮತ್ತು ನೈತಿಕ ಶಕ್ತಿಯ ವಿಚಾರವನ್ನು ಅದರ ಲಾಭವನ್ನು ಅನುಭವಿಸಿದವರೇ ಮಾಡಬಲ್ಲರು. ಅದನ್ನು ವರ್ಣಿಸುವುದು ಅಸಾಧ್ಯ.

ವಿವಾಹಿತ ಸ್ತ್ರೀಪುರುಷರೂ ವಿಧುರರೂ ವಿಧವೆಯರೂ ಬ್ರಹ್ಮಚರ್ಯವನ್ನಾಚರಿಸಬೇಕಾದ ಆವಶ್ಯಕತೆಯನ್ನು ತೋರಿರುವಾಗ, ನ್ಯಾಯಸಮ್ಮತವಲ್ಲದ ವಿಷಯ ಸೇವನೆಯನ್ನು ಪ್ರತ್ಯೇಕವಾಗಿ ನಿಷೇಧಿಸಬೇಕಾಗಿಲ್ಲ. ವೇಶ್ಯಾವೃತ್ತಿಯ ಮತ್ತು ವ್ಯಭಿಚಾರದಿಂದಾಗುವ ಘೋರ ಪರಿಣಾಮವನ್ನು ಆರೋಗ್ಯ ಸಂಬಂಧವಾದ ಪುಸ್ತಕದಲ್ಲಿ ವಿವರಿಸಲಾಗದು. ಏಕೆಂದರೆ ಅದು ಧರ್ಮಕ್ಕೂ ಸೂಕ್ಷ್ಮನೀತಿಗೂ ಸಂಬಂಧವುಳ್ಳುದಾಗಿದೆ. ಆದರೆ ಅದರಿಂದ ಸಾವಿರಾರು ಜನರು ಗರ್ಮಿ

ಮೊದಲಾದ ಉಚ್ಚರಿಸಲು ಅಯೋಗ್ಯವಾದಂತಹ ಹೆಸರಿನ ರೋಗ ಗಳಿಗೆ ಬಲಿಬಿದ್ದಿರುವರೆಂದು ಇಲ್ಲಿ ಹೇಳಬೇಕಾಗಿದೆ. ಪ್ರಕೃತಿಯ ದರಬಾರಿನಲ್ಲಿ ಅಂತಹವರಿಗೆ ಕೂಡಲೇ ಶಿಕ್ಷೆಯು ವಿಧಿಸಲ್ಪಡುವುದು. ಅದರ ವೇದನೆಗಳಿಗೆ ಔಷಧಿಗಳನ್ನು ಹುಡುಕುತ್ತ ಅಳಲೆಕಾಯಿ ಪಂಡಿತರ ಬಳಿ ಓಡಾಡುವುದರಲ್ಲಿ ಅವರ ಅಲ್ಪಜೀವನಕಾಲವು ಕಳೆದು ಹೋಗುವುದು. ವೇಶ್ಯಾವೃತ್ತಿಯೂ ವ್ಯಭಿಚಾರವೂ ಸಮೂಲವಾಗಿ ನಾಶಗೊಂಡರೆ ಈಗಿರುವ ಡಾಕ್ಟರುಗಳಲ್ಲಿ ೧೦೦ಕ್ಕೆ ೫೦ ಜನರಿಗೆ ಉದ್ಯೋಗವಿಲ್ಲದಂತಾಗುವುದು. ಆ ವೃತ್ತಿಗಳು ಹೀಗೆಯೇ ಮುಂದುವರಿದರೆ, ಅದಕ್ಕಾಗಿ ಔಷಧಗಳನ್ನು ಕಂಡುಹಿಡಿದರೂ ಪ್ರಯೋಜನ ವಿಲ್ಲದಂತಾಗಿ ಕೊನೆಗೆ ಮಾನವ ಜಾತಿಯು ಸ್ತ್ರೀಮೋಹಾದಿ ರೋಗ ಗಳಿಗೆ ತುತ್ತಾಗುವುದೆಂದು ಬುದ್ಧಿವಂತರಾದ ವೈದ್ಯರು ಅಭಿಪ್ರಾಯ ಪಟ್ಟಿರುವರು. ಆ ರೋಗಿಗಳಿಗಾಗಿ ಕೊಡುವ ಔಷಧಗಳು ವಿಷಮಯ ವಾಗಿರುವುವು. ರೋಗಿಗೆ ಅವುಗಳಿಂದ ತಾತ್ಕಾಲಿಕ ಗುಣಸಿಕ್ಕಿದರೂ, ರೋಗವು ಅದರಿಂದ ಪೂರ್ಣ ಗುಣವಾಗದೇ ರೋಗಿಯು ಅದನ್ನು ವಂಶಪಾರಂಪರ್ಯವಾಗುವಂತೆ ಬಿತ್ತಲವಕಾಶವಾಗುವುದು.

ಇನ್ನು ವಿವಾಹಿತ ಸ್ತ್ರೀಪುರುಷರೂ, ಬ್ರಹ್ಮಚರ್ಯಪಾಲನೆಗೆ ಉಪಾಯಗಳನ್ನು ಹೇಳಿ ನಾನು ನಿರೀಕ್ಷಿಸಿದುದಕ್ಕಿಂತಲೂ ದೀರ್ಘವಾಗಿ ಬೆಳೆದ ಈ ಪ್ರಕರಣವನ್ನು ಸಮಾಪ್ತಿಗೊಳಿಸಬೇಕಾಗಿದೆ. ವಿವಾಹಿತ ಸ್ತ್ರೀಪುರುಷರು ಕೇವಲ ಆಹಾರ, ಹವ ಮತ್ತು ನೀರಿನ ನಿಯಮಗಳ ಪಾಲನೆಯಿಂದ ಬ್ರಹ್ಮಚರ್ಯಪಾಲನೆ ಮಾಡಲಾರರು. ದಂಪತಿಗಳಿಬ್ಬರೂ ಏಕಾಂತವಾಸ ಮಾಡಕೂಡದು. ವಿಚಾರಮಾಡಿ ನೋಡಿದಲ್ಲಿ ವಿಷಯ ಭೋಗಕ್ಕೆ ಹೊರತು ಮತ್ತ್ಯಾವುದಕ್ಕೂ ಪತಿಪತ್ನಿಯರಿಗೆ ಏಕಾಂತವಾಸದ ಆವಶ್ಯಕತೆ ಇರುವುದಿಲ್ಲವೆಂದು ಕಂಡುಬರುವುದು. ರಾತ್ರಿ ಕಾಲದಲ್ಲಿ ಸತಿಪತಿಯರಿಬ್ಬರೂ ಬೇರೆ ಬೇರೆ ಕೋಣೆಗಳಲ್ಲಿ ಮಲಗಬೇಕು. ಹಗಲಿನಲ್ಲಿ ಒಳ್ಳೊಳ್ಳೆಯ ವಿಚಾರ ಮತ್ತು ಕಾರ್ಯಗಳಲ್ಲಿ ಮಗ್ನರಾಗಿರಬೇಕು. ಸುವಿಚಾರಗಳಿಗೆ ಉತ್ತೇಜನ ದೊರೆವಂತಹ ಪುಸ್ತಕಗಳನ್ನು ಅವರು ಓದಬೇಕು. ಆದರ್ಶಪುರುಷರ ಜೀವನಚರಿತ್ರೆ

ಗಳನ್ನು ಮನನ ಮಾಡಬೇಕು. ಭೋಗವು ದುಃಖಮೂಲವಾದುದೆಂತಲೂ ಬ್ರಹ್ಮಚರ್ಯೆಯು ಲಾಭದಾಯಕವಾದುದೆಂತಲೂ ಯಾವಾಗಲೂ ಚಿಂತನಮಾಡಬೇಕು. ವಿಷಯೇಚ್ಛೆಯು ಉಂಟಾದಾಗ ತಣ್ಣೀರಿನಲ್ಲಿ ಸ್ನಾನಮಾಡುವುದೊಳ್ಳೆಯದು. ಅದರಿಂದ ಶರೀರದೊಳಗಿರುವ ಮಹಾಗ್ನಿಯು ಬೇರೆ ಒಳ್ಳೆಯ ರೂಪವನ್ನು ಧರಿಸಿ ಸ್ತ್ರೀಪುರುಷರಿಬ್ಬರಿಗೂ ಉಪಕಾರವನ್ನು ಮಾಡಿ, ಅವರ ಸುಖಗಳನ್ನಭಿವೃದ್ಧಿಗೊಳಿಸುವುದು ಇದೆಲ್ಲ ಕಷ್ಟತರವಾದ ಕೆಲಸ. ಆದರೆ ಮಾನವರಾದ ನಾವು ಕಠಿನತೆಯೊಂದಿಗೆ ಹೋರಾಡಿ ಅದನ್ನು ಜಯಿಸುವುದಕ್ಕಾಗಿಯೇ ಹುಟ್ಟಿರುವೆವು. ಹಾಗೆ ಮಾಡಲಾರದವನು ನಿಜವಾದ ಆರೋಗ್ಯಸುಖವನ್ನೆಂದಿಗೂ ಅನುಭವಿಸಲಾರನು.

## ೫. ಆತ್ಮ ಸಂಯಮ

ಬ್ರಹ್ಮಚರ್ಯೆಯ ವಿಚಾರದಲ್ಲಿ ಕೆಲವು ಮಾತುಗಳನ್ನು ಹೇಳಬೇಕೆಂದು ನನ್ನನ್ನು ಕೇಳಿರುವರು. ಈ ವಿಚಾರದಲ್ಲಿ ನಾನು ಭಾಷಣ ಮಾಡದ ಕೆಲವು ವಿಷಯಗಳನ್ನು **ನವಜೀವನ** (ಹಿಂದೀ ಗುಜರಾತೀ) ಪತ್ರಿಕೆಯಲ್ಲಿ ಚರ್ಚಿಸುತ್ತಿರುವೆನು. ಬ್ರಹ್ಮಚರ್ಯೆಯು ಆ ವಿಷಯಗಳಲ್ಲೊಂದಾಗಿದೆ. ನಾನು ಅದರ ವಿಚಾರಮಾಡಿ ಮಾತನಾಡುವುದೇ ಅಪರೂಪ. ಏಕೆಂದರೆ ಅದು ಬಹು ಘನವಾದ ವಿಷಯ, ಅದನ್ನು ಶಬ್ದಗಳಿಂದ ವರ್ಣಿಸಲು ಸಾಧ್ಯವೇ ಇಲ್ಲ. ಎಲ್ಲ ಇಂದ್ರಿಯಗಳನ್ನು ನಿಗ್ರಹಿಸುವುದಕ್ಕೆ ಅರ್ಥನಿಷ್ಪತ್ತಿಯಿಂದ ಬ್ರಹ್ಮಚರ್ಯವೆಂಬ ಹೆಸರಿರುವುದು. ಆದರೆ ಸಾಮಾನ್ಯ ತಿಳಿವಳಿಕೆಯಲ್ಲಿರುವ ಸಂಕುಚಿತಾರ್ಥದಲ್ಲಿಯೂ ಬ್ರಹ್ಮಚರ್ಯೆಯನ್ನು ಕುರಿತು ನಾನು ಮಾತನಾಡಬೇಕೆಂದು ನೀವು ಅಪೇಕ್ಷಿಸುವಿರಿ. ರೂಢ್ಯರ್ಥದಲ್ಲಿರುವ ಬ್ರಹ್ಮಚರ್ಯೆಯನ್ನು ಪಾಲಿಸುವುದು ಕೂಡ ಕಷ್ಟತರವೆಂದು ಶಾಸ್ತ್ರಗಳು ಹೇಳುವವು. ಇದರ

* ಸನ್ ೧೯೨೫ನೆಯ ಫೆಬ್ರವರಿ ೨೬ನೆಯ ತಾರೀಖಿನ ನವಜೀವನದಲ್ಲಿ ಪ್ರಕಟವಾದ, ಭದ್ರನದ ಸೇವಾ ಸಮಾಜದಲ್ಲಿ ಮಾಡಿದ ಗುಜರಾತಿ ಭಾಷಣದ ಅನುವಾದ. ಶ್ರೀ|| ಎ.ಜಿ. ದೇಸಾಯಿಯವರು ಮಾಡಿದುದು.

ಮುಖ್ಯಾಂಶವು ನಿಜವಾದರೂ, ಅದು ಸಾಧ್ಯವೆಂಬುದನ್ನು ತೋರಲು ನಾನು ಕೆಲವು ಸಂಗತಿಗಳನ್ನು ನಿಮಗೆ ತಿಳಿಸಬೇಕೆಂದಿರುವೆನು. ನಾವು ಬೇರೆ ಇಂದ್ರಿಯಗಳ ನಿಗ್ರಹವನ್ನು ಪಾಲಿಸುವುದಿಲ್ಲವಾದುದರಿಂದ, ಬ್ರಹ್ಮಚರ್ಯೆಯೂ ಕಷ್ಟತರವಾಗಿ ತೋರುವುದು. ಉದಾಹರಣೆಗಾಗಿ ಇತರ ಇಂದ್ರಿಯಗಳಿಗೆ ಮಾರ್ಗವನ್ನು ತೋರುವ ರಸನೇಂದ್ರಿಯ ಎಂದರೆ ನಾಲಿಗೆಯನ್ನು ತೆಗೆದುಕೊಳ್ಳುವ. ನಾಲಿಗೆಯನ್ನು ತನ್ನ ಸ್ವಾಧೀನದಲ್ಲಿಟ್ಟುಕೊಳ್ಳುವವನಿಗೆ ಬ್ರಹ್ಮಚರ್ಯೆಯು ಬಹು ಸುಲಭ ಸಾಧ್ಯವಾಗುವುದು. ಮಾನವರಿಗಿಂತಲೂ ನೀಚತರ ಪ್ರಾಣಿಗಳಲ್ಲಿ ಅದರಲ್ಲಿಯೂ ಜಾನುವಾರುಗಳಲ್ಲಿ ಬ್ರಹ್ಮಚರ್ಯೆಯು ಅಧಿಕ ಪರಿಮಾಣದಲ್ಲಿ ಪಾಲಿಸಲ್ಪಡುತ್ತಿರುವುದೆಂದು ಪ್ರಾಣಿಶಾಸ್ತ್ರಜ್ಞರು ಹೇಳುವರು. ಅದು ನಿಜ. ಏಕೆಂದರೆ ಅವುಗಳು ಇಚ್ಛಾಶಕ್ತಿಯಿಲ್ಲದೆ ಕೇವಲ ನಿಸರ್ಗಬೋಧನೆಯ ಬಲದಿಂದಲೇ ನಾಲಿಗೆಯ ಸವಿಯನ್ನು ಸಂಪೂರ್ಣವಾಗಿ ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿರುವವು. ಅವುಗಳು ಕೇವಲ ಮೇವಿನ ಆಧಾರದಿಂದಲೇ ಜೀವಿಸಿರುವವು. ಮತ್ತು ಅದನ್ನು ಕೂಡ ತಮ್ಮ ಪೋಷಣೆಗೆ ಬೇಕಾದಷ್ಟನ್ನೇ ಅವು ತೆಗೆದುಕೊಳ್ಳುವವು. ಅವು ಜೀವಿಸುವುದಕ್ಕಾಗಿ ತಿನ್ನುವುವೇ ಹೊರತು, ತಿನ್ನುವುದಕ್ಕಾಗಿ ಜೀವಿಸಿರುವುದಿಲ್ಲ. ನಮ್ಮ ಜೀವನಕ್ರಮವು ಇದಕ್ಕೆ ವಿರೋಧವಾಗಿರುವುದು. ತಾಯಿಯಾದವಳು ತನ್ನ ಮಗುವನ್ನು ಹಲವು ಬಗೆಯ ತಿನಿಸುಗಳಿಂದ ಸೊಕ್ಕಿಸಲೆತ್ನಿಸುವಳು. ಮಗುವಿಗೆ ಮಿತಿಮೀರಿ ತಿನ್ನಿಸುವುದರ ಮೂಲಕವೇ ತನ್ನ ಪ್ರೇಮವನ್ನು ವ್ಯಕ್ತಪಡಿಸಬಹುದೆಂದು ತಿಳಿದಿರುವಳು. ಹೀಗೆ ಮಾಡುವುದರಿಂದ ಮಗುವಿಗೆ ಆಹಾರದಿಂದಾಗುವ ಸುಖವು ಹೆಚ್ಚುವುದಕ್ಕೆ ಬದಲಾಗಿ ಕೊನೆಗೆ ಎಲ್ಲ ತಿನಿಸುಗಳೂ ಅವನಿಗೆ ರುಚಿಯಿಲ್ಲದವಾಗಿಯೂ ಅಸಹ್ಯವಾಗಿಯೂ ಪರಿಣಮಿಸುವುವು. ರುಚಿಯು ಹಸಿವೆಯನ್ನವಲ್ಲಂಬಿಸಿರುವುದು. ಹಸಿವೆಯಿಲ್ಲದವನಿಗೆ ಎಂತಹ ಸಿಹಿಯಾದ ಭಕ್ಷ್ಯಗಳನ್ನು ಕೊಟ್ಟರೂ, ಹಸಿದಿರುವನಿಗೆ ಒಣಗಿದ ರೊಟ್ಟಿಯ ತುಣುಕು ರುಚಿಸಿದಷ್ಟು ಕೂಡ ರುಚಿಸಲಾರವು. ನಮ್ಮ ಹೊಟ್ಟೆಯನ್ನು ಸಾಧ್ಯವಾದಷ್ಟು ಹೆಚ್ಚಾಗಿ ಭರ್ತಿಮಾಡಲು ನಾವು ಹಲವು ಬಗೆಯ

ಮಸಾಲೆ ಪದಾರ್ಥಗಳನ್ನು ಸೇರಿಸಿ ಆಹಾರವನ್ನು ತಯಾರು ಮಾಡು ವೆವು. ಹೀಗಿರುವಾಗ ಬ್ರಹ್ಮಚರ್ಯಪಾಲನೆಯು ನಮಗೆ ದುಸ್ಸಾಧ್ಯ ವಾಗಿ ಕಾಣುವುದರಲ್ಲಿ ಆಶ್ಚರ್ಯವೇನು ?

ದೇವರು ನಮಗೆ ಅನುಗ್ರಹಿಸಿರುವ ಕಣ್ಣುಗಳನ್ನು ನಾವು ಸರಿ ಯಾಗಿ ಉಪಯೋಗಿಸದೇ ಅವುಗಳನ್ನು ಮಲಿನಗೊಳಿಸುವೆವು. ತಾಯಿ ಯಾದವಳು **ಗಾಯತ್ರಿ** ಮಂತ್ರವನ್ನು ಕಲಿತು ಅದನ್ನು ಮಗುವಿಗೆ ಬೋಧಿಸಬಾರದೇಕೆ! ಅವಳು ಆ **ಮಂತ್ರದ** ಗೂಢಾರ್ಥವನ್ನು ತಿಳಿ ಯುವುದು ಆವಶ್ಯಕವಾಗಿಲ್ಲ. ಅದು ಸೂರ್ಯನ ವಿಚಾರದಲ್ಲಿ ಗೌರವ ವನ್ನು ತೋರಿಸುವುದೆಂದು ತಿಳಿದು, ಅದನ್ನೇ ಮಗುವಿಗೆ ತಿಳಿಸಿದರೆ ಸಾಕಾಗಿದೆ. ಇದು ಆ **ಮಂತ್ರದ** ಸಾಧಾರಣ ಅರ್ಥ. ನಾವು ಸೂರ್ಯ ನನ್ನು ಹೇಗೆ ಪೂಜಿಸಬೇಕು? ಸೂರ್ಯನ ಕಡೆಗೆ ದೃಷ್ಟಿಯನ್ನು ತಿರು ಗಿಸಿ ನಮ್ಮ ಕಣ್ಣುಗಳನ್ನು ಅವನ ಕಿರಣಗಳಲ್ಲಿ ಮಜ್ಜನ ಮಾಡಿಸುವು ದರಿಂದ ಸೂರ್ಯನನ್ನು ಪೂಜಿಸಿದಂತಾಗುವುದು. **ಗಾಯತ್ರಿ** ಮಂತ್ರ ವನ್ನು ರಚಿಸಿದವನು **ಋಷಿ**ಯೂ **ದಾರ್ಶನಿಕ**ನೂ ಆಗಿದ್ದನು. ಸೂರ್ಯೋದಯ ಕಾಲದಲ್ಲಿ ನಮ್ಮ ಕಣ್ಣೆದುರಿನಲ್ಲಿ ಪ್ರತಿನಿತ್ಯವೂ ಅಭಿನಯಿಸಲ್ಪಡುವ ಮನೋಹರವಾದ ನಾಟಕವು ಮತ್ತೆಲ್ಲಿಯೂ ನಮಗೆ ಗೋಚರಿಸಲಾರದೆಂಬುದನ್ನು ಆತನು ಕಲಿಸಿರುವನು. ದೇವರಿ ಗಿಂತಲೂ ದೊಡ್ಡವನಾದ ಮಹಿಮೆಯುಳ್ಳ ಸೂತ್ರಧಾರನು ಬೇರೊಬ್ಬ ನಿಲ್ಲ. ಆಕಾಶಕ್ಕಿಂತಲೂ ಹೆಚ್ಚು ಶೋಭಾಯಮಾನವಾದ ರಂಗಭೂ ಮಿಯು ಮತ್ತೊಂದಿಲ್ಲ. ಆದರೆ ಬೆಳಗಾದ ಕೂಡಲೆ ಮಗುವಿನ ಮುಖ ವನ್ನು ತೊಳೆದು "ಆಕಾಶದ ಸೌಂದರ್ಯವನ್ನು ನೋಡು'' ಎಂದು ಹೇಳುವ ತಾಯಿಯು ಎಲ್ಲಿರುವಳು ? ದುರ್ದೈವದಿಂದ ನಮ್ಮ ದೇಶದ ತಾಯಿಯರು ಬೇರೆ ಕೆಲಸಗಳಲ್ಲಿ ಮಗ್ನರಾಗಿರುವರು. ಪಾಠಶಾಲೆಯಲ್ಲಿ ಅವನಿಗೆ ದೊರೆತ ಶಿಕ್ಷಣ ಸಹಾಯದಿಂದ ಮಗನು ದೊಡ್ಡ ಅಧಿಕಾರಿ ಯಾಗಬಹುದು. ಆದರೆ ಅವನ ವಿದ್ಯಾಭ್ಯಾಸ ಕಾಲದಲ್ಲಿ ಅವನಿಗೆ ಮನೆಯ ವಾತಾವರಣದಿಂದಾಗಬಹುದಾದ ಹೆಚ್ಚಿನ ಪ್ರಯೋಜನ ವಿಚಾರವನ್ನು ಮರೆತುಬಿಡುವೆವು. ಮಕ್ಕಳ ಸೌಂದರ್ಯವನ್ನು

ಹೆಚ್ಚಿಸಬೇಕೆಂಬ ಉದ್ದೇಶ್ಯದಿಂದ ತಂದೆತಾಯಿಯರು ಮಕ್ಕಳಿಗೆ ಉಬ್ಬಸವುಂಟಾಗುವಂತೆ ಉಡುಪುಗಳನ್ನು ತೊಡಿಸುವರು. ದೇಹವನ್ನು ಉಷ್ಣ, ಶೀತಗಳಿಂದ ರಕ್ಷಿಸುವುದಕ್ಕಾಗಿ ಉಡುಪುಗಳನ್ನು ಧರಿಸಬೇಕೆ ವಿನಾ ಅಲಂಕಾರಕ್ಕಾಗಿ ಅಲ್ಲ. ಬಾಲಕನು ಚಳಿಯಿಂದ ನಡುಗುತ್ತಿದ್ದರೆ ಅವನಿಗೆ ಬೆಂಕಿ ಕಾಯಿಸಿಕೊ ಎಂದು ಹೇಳಬೇಕು. ಅಥವಾ 'ಸ್ವಲ್ಪ ಓಡಿ ಬಾ' ಎಂದು ಅವನನ್ನು ಬೀದಿಗೆ ಕಳುಹಿಸಬೇಕು. ಅಥವಾ ಕೆಲಸಮಾಡುವುದಕ್ಕೆ ಹೊಲಕ್ಕೆ ಕಳುಹಿಸಬೇಕು. ಹೀಗೆ ಮಾಡುವುದರಿಂದಲೆ ಅವನ ದೇಹವು ಪುಷ್ಟಿಯಾಗಿ ದೃಢವಾಗಿ ಬೆಳೆಯುವಂತೆ ನಾವು ಸಹಾಯಮಾಡಬಹುದು. ಅವನನ್ನು ಮನೆಯಲ್ಲಿ ಮುಚ್ಚಿಡುವುದರಿಂದ ಶಾಖದ ಒಂದು ಬಗೆಯ ಸುಳ್ಳುಕಲ್ಪನೆಯನ್ನು ನಾವು ಅವನಲ್ಲಿ ಪ್ರೇರಿಸುವೆವು. ಈ ಬಗೆಯಾಗಿ ನಾವು ಅವನ ದೇಹವನ್ನು ಸೂಕ್ಷ್ಮಗೊಳಿಸುವುದರಿಂದ ಅದನ್ನು ಶೀಘ್ರ ನಾಶಕ್ಕೆ ನಾವೇ ಗುರಿಮಾಡುವೆವು.

ಇದು ಉಡುಪಿನ ವಿಚಾರವಾಯಿತು. ಮತ್ತೆ ಮನೆಯಲ್ಲಿ ನಡೆಯುವ ನಿಂದ್ಯವೂ ಕ್ಷುಲ್ಲಕವೂ ಆದ ಸಂಭಾಷಣೆಯಿಂದ ಮಗುವಿನ ಮನಸ್ಸಿನ ಮೇಲೆ ಬಹು ಅಪಾಯಕರವಾದ ಪರಿಣಾಮವುಂಟಾಗುವುದು. ಹಿರಿಯರು ಅದರ ಮದುವೆಯ ವಿಚಾರವಾಗಿ ಮಾತಾಡುವುದೂ, ಅವನ ಸುತ್ತಮುತ್ತಲೂ ಕಾಣುವ ವಸ್ತುಗಳೂ ಅವನ ಮನಸ್ಸನ್ನು ಕೆಡಿಸುವವು. ಇಷ್ಟಾದರೂ ನಾವಿನ್ನೂ ಕಾಡಾಡಿಗಳ ಕೀಳುತನಕ್ಕಿಳಿದಿಲ್ಲವೆಂಬುದೂ ಅಸಾಧ್ಯವಾದ ಪರಿಸ್ಥಿತಿಯಲ್ಲಿ ಕೂಡ ನಾವು ಆಗಾಗ್ಗೆ ಇಂದ್ರಿಯನಿಗ್ರಹ ಮಾಡಿಕೊಳ್ಳುತ್ತಿರುವುದೂ ಆಶ್ಚರ್ಯವನ್ನುಂಟುಮಾಡುವ ವಿಚಾರವಾಗಿದೆ. ಮಾನವನಲ್ಲಿ ದೋಷಗಳು ಅಪಾರವಾಗಿದ್ದರೂ ಅವನ ರಕ್ಷಣೆಯಾಗುವಂತೆ ಪರಮಕಾರುಣಿಕನಾದ ಭಗವಂತನು ಏರ್ಪಾಡು ಮಾಡಿರುವನು. ಬ್ರಹ್ಮಚರ್ಯೆಗೆ ಆತಂಕವನ್ನುಂಡುಮಾಡುವ ಈ ವಿಘ್ನಗಳನ್ನು ನಿವಾರಿಸಿದರೆ, ಅದನ್ನು ಸಾಧಿಸುವುದು ಸಾಧ್ಯವೂ ಅಲ್ಲದೇ ಸುಲಭವೂ ಆಗುವುದು.

ನಾವು ದುರ್ಬಲರಾಗಿದ್ದರೂ ದೈಹಿಕ ದೃಷ್ಟಿಯಿಂದ ನಮಗಿಂತಲೂ ಬಲಿಷ್ಠರಾದವರೊಂದಿಗೆ ಮೇಲಾಟವಾಡಬೇಕಾಗಿದೆ. ಈ ಮೇಲಾಟದಲ್ಲಿ ದೈವಿಕ ಮಾರ್ಗ, ಪೈಶಾಚಿಕ ಮಾರ್ಗವೆಂಬೆರಡೇ ಉಪಾಯಗಳು. ಯಾವ ರೀತಿಯಿಂದಲಾದರೂ ಎಂದರೆ ಮಾಂಸ ಭಕ್ಷಣೆ ಮೊದಲಾದ ವಿಧಾನದಿಂದ ನಮ್ಮ ದೇಹವನ್ನು ಕೊಬ್ಬಿಸುವುದೇ ಪೈಶಾಚಿಕ ವಿಧಾನವಾಗಿರುವುದು. ನಾವು ಇಂಗ್ಲಿಷರನ್ನು ಸಮಾನಬಲದಿಂದ ಎದುರಿಸ ಬೇಕಾದರೆ ಮಾಂಸ ಭಕ್ಷಣೆಯಿಲ್ಲದೆ ನಮ್ಮ ದೇಹಬಲವನ್ನು ಹೆಚ್ಚಿಸಿಕೊಳ್ಳಲಾರೆವೆಂದೂ ಜಪಾನ್ ದೇಶದವರು ಬೇರೆ ಜನಾಂಗಗಳೊಂದಿಗೆ ಹೋರಾಡಬೇಕಾಗಿ ಬಂದಾಗ ಅವರು ಮಾಂಸ ಭಕ್ಷಣೆಯನ್ನಾರಂಭಿಸಿದರೆಂದೂ, ಅವರನ್ನು ಅನುಸರಿಸಿ ನಾವು ದೇಹಬಲವನ್ನು ಹೊಂದಬೇಕಾಗಿದ್ದರೆ ನಾವು ಪೈಶಾಚಿಕ ಮಾರ್ಗದಲ್ಲಡಿಯಿಡಬೇಕೆಂತಲೂ ನನ್ನ ಬಾಲ್ಯ ಸ್ನೇಹಿತನೊಬ್ಬನು ಹೇಳುತ್ತಿದ್ದನು.

ಆದರೆ ನಾವು ದೈವಿಕ ಉಪಾಯದಿಂದ ನಮ್ಮ ದೇಹಗಳನ್ನು ಪುಷ್ಟಿಗೊಳಿಸಬೇಕಾದರೆ ಕೇವಲ ಬ್ರಹ್ಮಚರ್ಯೆಯೊಂದೇ ನಮಗೆ ಉಪಾಯವಾಗಿರುವುದು. ಜನರು ನನ್ನನ್ನು **ನೈಷ್ಠಿಕ** ಬ್ರಹ್ಮಚಾರಿಯೆಂದು ಕರೆವಾಗ ನನಗೇ ವಿಷಾದವಾಗುತ್ತದೆ. ನನ್ನಂತಹ ವಿವಾಹಿತನಾಗಿ ಪುತ್ರವಂತನಾದವನಿಗೆ ಆ ವರ್ಣನೆಯು ಹೇಗೆ ಅನ್ವಯಿಸುವುದು? ನಾನು ನರಳಿದಂತೆ **ನೈಷ್ಠಿಕ** ಬ್ರಹ್ಮಚಾರಿಯಾದವನೆಂದಿಗೂ ಜ್ವರದಿಂದಾಗಲಿ ತಲೆನೋವಿನಿಂದಾಗಲಿ ಕೆಮ್ಮಿನಿಂದಾಗಲಿ ಕರುಳು ರೋಗದಿಂದಾಗಲಿ ನರಳಲಾರನು. ಕಿತ್ತಲೆಹಣ್ಣಿನ ಬೀಜವು ಕರುಳಿನಲ್ಲಿ ಉಳಿಯುವುದರಿಂದ 'ಅಪೆಂಡಿಸೈಟಿಸ್' ಎಂಬ ಕರುಳು ರೋಗವುಂಟಾಗುವುದೆಂದು ವೈದ್ಯರು ಹೇಳುವರು. ಆದರೆ ಪರಿಶುದ್ಧವಾದ ಆರೋಗ್ಯದಿಂದಿರುವ ದೇಹದಲ್ಲಿ ಕಿತ್ತಲೆಹಣ್ಣಿನ ಬೀಜವು ಚಿರಕಾಲ ನಿಲ್ಲಲಾರದು. ನನ್ನ ಕರುಳುಗಳು ಕೂಡ ದುರ್ಬಲವಾಗಿರಬೇಕು. ಅದಕ್ಕಾಗಿಯೆ ನಾನು ಶಸ್ತ್ರಚಿಕಿತ್ಸೆಗೊಳಗಾಗಬೇಕಾಯಿತು. ಮಕ್ಕಳು ಸಿಕ್ಕಿದುದನ್ನೆಲ್ಲ ತಿನ್ನುವರು. ತಾಯಿಯಾದವಳು ಅವರನ್ನು ಯಾವಾ

ಗಲೂ ನೋಡಿಕೊಂಡಿರಲಾಗುವುದಿಲ್ಲ. ಆದಾಗ್ಗೂ ಅವರ ಕರುಳುಗಳು ತಮ್ಮ ಕೆಲಸವನ್ನು ಸರಿಯಾಗಿ ಮಾಡುವುದರಿಂದ ಅವರು ಕರುಳು ರೋಗದಿಂದ ನರಳುತ್ತಿಲ್ಲ. ಆದುದರಿಂದ ನನಗಿಂತಲೂ ದೃಢತರವಾಗಿರುವ **ನೈಷ್ಠಿಕ** ಬ್ರಹ್ಮಚಾರಿಯೆಂಬ ಹೆಸರನ್ನು ನನಗೆ ಕೊಡದಿರಲಿ. ನಾನು ಆದರ್ಶಕ ಬ್ರಹ್ಮಚಾರಿಯಾಗಬೇಕೆಂದು ಆಶಿಸುತ್ತಿರುವೆನು. ಆದರೆ ನಾನಿನ್ನೂ ಆ ಸ್ಥಿತಿಯನ್ನು ಹೊಂದಿಲ್ಲ.

ಯಾವ ಸಂದರ್ಭದಲ್ಲಿಯಾಗಲೀ ಹೆಂಗಸನ್ನು-ತನ್ನ ಸೋದರಿಯನ್ನೂ ಕೂಡ ಸ್ಪರ್ಶಿಸದಿರುವುದು ಮಾತ್ರವೇ ಬ್ರಹ್ಮಚರ್ಯೆ ಎನಿಸಿಕೊಳ್ಳುವುದಿಲ್ಲ. ಆದರೆ ಅಂತಹ ಸ್ಪರ್ಶ ಸಂದರ್ಭಗಳಲ್ಲಿ ನಾವು ಒಂದು ಕಾಗದದ ತುಂಡನ್ನು ಮುಟ್ಟಿದಾಗಿನಂತೆಯೆ ನಮ್ಮ ಮನಸ್ಸನ್ನು ಪ್ರಕೋಪಕ್ಕೊಳಗುಮಾಡದೆ ಶಾಂತವಾಗಿರಿಸುವುದೇ ಬ್ರಹ್ಮಚರ್ಯೆಯೆನಿಸುವುದು. ಕಾಹಿಲೆಯಾದ ತನ್ನ ಭಗಿನಿಯೊಬ್ಬಳಿಗೆ ಔಷಧೋಪಚಾರವನ್ನು ಮಾಡಲು ಮನಸ್ಸು ಓಂಜರಿದರೆ ಆ ಬಗೆಯ ಬ್ರಹ್ಮಚರ್ಯೆಯು ಉಪಯುಕ್ತವಾದುದಲ್ಲ. ಹೆಣವನ್ನು ಮುಟ್ಟಿದಾಗ ಮನಸ್ಸು ಹೇಗೆ ನಿರ್ಲಿಪ್ತವಾಗಿರುವುದೋ ಹಾಗೆಯೇ ಈ ಪೃಥ್ವಿಯಲ್ಲಿ ಅತಿ ಸುಂದರಿಯಾದ ಸ್ತ್ರೀಯನ್ನು ಸ್ಪರ್ಶಿಸಿದಾಗಲೂ ಬ್ರಹ್ಮಚಾರಿಯು ನಿರ್ಲಿಪ್ತಭಾವವನ್ನುಳ್ಳವನಾಗಿರಬೇಕು. ನಿಮ್ಮ ಮಕ್ಕಳಿಗೆ ಅಂತಹ ಬ್ರಹ್ಮಚರ್ಯೆಯು ಲಭಿಸಬೇಕೆಂದು ನಿಮಗೆ ಇಚ್ಛೆಯಾದರೆ, ಆಗ ಅವರ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ಅಪೂರ್ಣವಾಗಿಯಾದರೂ ಸಾಧಕನಾಗಿರುವ ನನ್ನಂತಹ ಬ್ರಹ್ಮಚಾರಿಗೇ ವಹಿಸಬೇಕು.

ಬ್ರಹ್ಮಚಾರಿಯಾದವನು ಸ್ವಾಭಾವಿಕವಾಗಿ **ಸನ್ಯಾಸಿ**ಯಾಗಿರುವನು. **ಬ್ರಹ್ಮಚರ್ಯಾಶ್ರಮವು ಸನ್ಯಾಸ**ಕ್ಕಿಂತಲೂ ಶ್ರೇಷ್ಠವಾದುದು. ಆದರೆ ಅದನ್ನು ಅವನತೆಗೀಡು ಮಾಡಿರುವೆವು. ಆದುದರಿಂದಲೇ **ಗೃಹಸ್ಥಾಶ್ರಮವು** ಈಗ ಅವನತಿಯನ್ನೈದಿ ನಿಜವಾದ **ಸನ್ಯಾಸವೇ** ಲೋಪವಾಗಿರುವುದು. ಇದು ನಮ್ಮ ವಿಷಾದಜನಕ ಸ್ಥಿತಿಯನ್ನು ಸೂಚಿಸುವುದು.

ನಾನು ಹಿಂದೆ ವಿವರಿಸಿರುವ ಪೈಶಾಚಿಕಮಾರ್ಗವನ್ನೇ ಅವಲಂಬಿಸುವುದಾದರೆ ಇನ್ನು ೫೦೦ ವರ್ಷಗಳಾದರೂ ನಾವು ಪಠಾಣರನ್ನು ಎದುರಿಸಲಾಗುವುದಿಲ್ಲ. ಆದರೆ ನಾವು ದೈವಿಕ ಮಾರ್ಗವನ್ನವಲಂಬಿಸಿದರೆ ಅವರನ್ನು ಈ ದಿನವೇ ಎದುರಿಸಬಹುದು. ಈ ಮಾರ್ಗವನ್ನವಲಂಬಿಸಲು ಬೇಕಾದ ಮಾನಸಿಕ ಬದಲಾವಣೆಯು ಒಂದು ಕ್ಷಣದೊಳಗಾಗಿ ಬರಬಹುದು. ಆದರೆ ಮೊದಲನೆಯ (ಪೈಶಾಚಿಕ) ಮಾರ್ಗವನ್ನವಲಂಬಿಸುವುದಕ್ಕೆ ಬೇಕಾದ ದೈಹಿಕ ದಾರ್ಢ್ಯವನ್ನು ಸಂಪಾದಿಸುವುದಕ್ಕೆ ಅನೇಕ ವರುಷಗಳೋ ಯುಗಗಳೋ ಬೇಕಾಗಬಹುದು. ಮುಂದಿನ ಪೀಳಿಗೆಯವರು ಬ್ರಹ್ಮಚರ್ಯವನ್ನಾಚರಿಸುವಂತೆ ಅನುಕೂಲವಾದ ವಾತಾವರಣವನ್ನು ಮಾತಾಪಿತರು ಸಿದ್ಧಗೊಳಿಸಿದರೆ ಭಗವಂತನ ಅನುಗ್ರಹದಿಂದ ನಮ್ಮ ಜನಾಂಗವು ದೈವಿಕ ಮಾರ್ಗವನ್ನೇ ಅವಲಂಬಿಸಬಲ್ಲುದು.

## ೬. ಬ್ರಹ್ಮಚರ್ಯೆ *

**ಈ** ವಿಷಯವಾಗಿ ಬರೆಯುವುದು ಸುಲಭವಲ್ಲ. ಆದರೆ ಈ ವಿಚಾರದಲ್ಲಿ ಸಾಕಾದಷ್ಟು ಅನುಭವವು ನನಗೆ ಲಭಿಸಿರುವುದರಿಂದ ಅದರ ಪರಿಣಾಮವನ್ನು ವಾಚಕರ ಮುಂದಿಡಲು ನಾನು ಯಾವಾಗಲೂ ಅತುರಗೊಂಡಿರುವೆನು. ನನಗೆ ಬಂದ ಕೆಲವು ಪತ್ರಗಳು ನನ್ನಲ್ಲಿ ಈ ಆಸೆಯನ್ನು ಹೆಚ್ಚಿಸಿರುವವು. ಅವುಗಳಲ್ಲಿ ಒಬ್ಬ ಲೇಖಕನು ಹೀಗೆ ಪ್ರಶ್ನಿಸಿರುವನು:—

"ಬ್ರಹ್ಮಚರ್ಯೆಯೆಂದರೇನು ? ಅದನ್ನು ಸಂಪೂರ್ಣವಾಗಿ ಆಚರಿಸುವುದು ಸಾಧ್ಯವೆ ? ಸಾಧ್ಯವಾಗಿದ್ದರೆ ನೀವು ಆ ಸ್ಥಿತಿಯನ್ನು ಹೊಂದಿರುವಿರಾ ?"

ಬ್ರಹ್ಮಚರ್ಯವೆಂಬದರ ಸರಿಯಾದ ಮತ್ತು ಸಂಪೂರ್ಣವಾದ ಅರ್ಥವು ಬ್ರಹ್ಮನನ್ನು ಎಂದರೆ ಭಗವಂತನನ್ನು ಕಾಣುವುದು ಎಂದು

*೧೯೨೪ನೆಯ ಸಾಲಿನ ಮೇ ೨೫ನೆಯ ತಾರೀಖಿನ ನವಜೀವನ ಪತ್ರಿಕೆಯ ಒಂದು ಲೇಖನದ ಅನುವಾದ.

ಅರ್ಥವಾಗುವುದು. ಬ್ರಹ್ಮನು ನಮ್ಮಲ್ಲಿ ಪ್ರತಿಯೊಬ್ಬರಲ್ಲಿಯೂ ವಾಸಿಸುತ್ತಿರುವುದರಿಂದ, ಧ್ಯಾನ ಮತ್ತು ಆತ್ಮಜ್ಞಾನಗಳ ಸಹಾಯ ದಿಂದ **ಅವನನ್ನು** ನಮ್ಮಲ್ಲಿಯೆ ಕಂಡುಕೊಳ್ಳಲು ಪ್ರಯತ್ನಿಸಬೇಕು. ಎಲ್ಲ ಇಂದ್ರಿಯಗಳನ್ನು ಸಂಪೂರ್ಣವಾಗಿ ನಿಗ್ರಹಿಸದೇ ಆತ್ಮಜ್ಞಾನ ವನ್ನು ಪಡೆವುದು ಸಾಧ್ಯವಲ್ಲ. ಆದುದರಿಂದ ಬ್ರಹ್ಮಚರ್ಯೆಯೆಂದರೆ ಮನೋವಾಕ್ ಕ್ರಿಯೆಗಳಿಂದ ಯಾವಾಗಲೂ ಎಂತಹ ಸ್ಥಳದಲ್ಲಿ ಯಾದರೂ ಎಲ್ಲ ಇಂದ್ರಿಯಗಳನ್ನೂ ನಿಗ್ರಹಿಸುವುದೆಂದರ್ಥವಾಗು ವುದು.

ಪೂರ್ಣ ಬ್ರಹ್ಮಚಾರಿಗಳಾದ ಸ್ತ್ರೀಪುರುಷರು ಸಂಪೂರ್ಣವಾಗಿ ಪಾಪಮುಕ್ತರಾಗಿರುವರು. ಆದುದರಿಂದ ಅವರು ಭಗವಂತನಿಗೆ ಸಮೀಪರಾಗಿರುವರು, ಅವರು ದೇವರಂತಿರುವರು. ಬ್ರಹ್ಮಚರ್ಯೆಯ ಅಂತಹ ಪೂರ್ಣಾನುಷ್ಠಾನವು ಸಾಧ್ಯವೆಂಬುದರಲ್ಲಿ ನನಗಾವ ಸಂದೇಹವೂ ಇಲ್ಲ. ಅಂತಹ ಪೂರ್ಣಾವಸ್ಥೆಯನ್ನು ನಾನಿನ್ನೂ ಹೊಂದಿಲ್ಲವೆಂದು ತಿಳಿಸಲು ವಿಷಾದಪಡುತ್ತೇನೆ. ಆದಾಗ್ಗೂ ಈ ಜನ್ಮ ದಲ್ಲಿಯೆ ಅದನ್ನು ಹೊಂದುವ ಆಸೆಯನ್ನು ಬಿಟ್ಟಿಲ್ಲ, ಅದಕ್ಕಾಗಿ ನಾನು ನಿರಂತರವೂ ಪ್ರಯತ್ನಿಸುತ್ತಿರುವೆನು.

ಜಾಗ್ರದಾವಸ್ಥೆಯಲ್ಲಿರುವಾಗ ನಾನು ಬಹು ಜಾಗರೂಕನಾಗಿ ರುವೆನು. ನನ್ನ ದೇಹವನ್ನು ಸಂಪೂರ್ಣವಾಗಿ ನನ್ನ ಸ್ವಾಧೀನದಲ್ಲಿ ಟ್ಟುಕೊಂಡಿರುವೆನು. ನನ್ನ ವಾಚಾಳತ್ವವನ್ನು ಸಾಕಾದಷ್ಟು ಮಟ್ಟಿಗೆ ನನ್ನ ಸಾಧೀನದಲ್ಲಿಟ್ಟುಕೊಂಡಿರುವೆನು. ಆದರೆ ನನ್ನ ಆಲೋಚನೆಯ ವಿಚಾರದಲ್ಲಿ ನಾನಿನ್ನೂ ಹಲವು ಸಾಧನೆಗಳನ್ನು ಮಾಡಬೇಕಾಗಿದೆ. ಆವುದಾದರು ಒಂದು ವಿಶಿಷ್ಟವಿಚಾರದಲ್ಲಿ, ಏಕಾಗ್ರತೆಯನ್ನು ತಳೆಯು ವುದಕ್ಕೆ ಇತರ ಆಲೋಚನೆಗಳು ಬಂದು ಆತಂಕವನ್ನುಂಟುಮಾಡಿ ಪರಸ್ಪರ ವಿರೋಧವನ್ನುಂಟುಮಾಡುವವು. ಆದಾಗ್ಗೂ ನಾನು ಜಾಗ್ರದಾವಸ್ಥೆಯಲ್ಲಿರುವಾಗ ನಾನು ಅಪವಿತ್ರವಾದ ಆಲೋಚನೆ ಗಳಿಂದ ದೂರನಾಗಿರುವ ಸ್ಥಿತಿಯನ್ನು ಹೊಂದಿರುವೆನೆಂದು ಹೇಳ ಬಹುದು. ಆದರೆ ನಾನು ನಿದ್ರಾವಸ್ಥೆಯಲ್ಲಿರುವಾಗ ನನ್ನ ವಿಚಾರ

ತರಂಗಗಳ ಮೇಲಣ ಸ್ವಾಧೀನವು ತಪ್ಪಿಹೋಗುವುದು. ನಿದ್ರೆಯಲ್ಲಿ ಹಲವು ಬಗೆಯ ಆಲೋಚನೆಗಳು ಬರುವವು, ಮತ್ತು ನಾನು ನಿರೀಕ್ಷಿಸದಿರುವ ವಿಚಾರದ ಸ್ವಪ್ನಗಳೂ ಬೀಳುವವು. ಕೆಲವುವೇಳೆ, ನಾನು ಮುಂಚೆ ಭೋಗಿಸಿದ್ದ ಸುಖವನ್ನು ಬಯಸುವ ವಿಚಾರವುಂಟಾಗುವುದು. ಆ ಬಯಕೆಗಳು ಅಪವಿತ್ರವಾಗಿದ್ದರೆ, ಬೀಳುವ ಸ್ವಪ್ನಗಳೂ ಅಪವಿತ್ರವಾಗಿರುವವು. ಈ ಸ್ಥಿತಿಯು ಪಾಪಯುಕ್ತ ಜೀವನವನ್ನು ವ್ಯಕ್ತಪಡಿಸುವುದು.

ನನ್ನ ಅಪವಿತ್ರ ಆಲೋಚನೆಗಳನ್ನು ತಡೆಗಟ್ಟಲಾಗಿದೆಯೆ ವಿನಾ ನಾಶಗೊಳಿಸಲಾಗಿಲ್ಲ. ನನ್ನ ವಿಚಾರ ತರಂಗದಮೇಲೆ ನನಗೆ ಸಂಪೂರ್ಣ ಸ್ವಾಧೀನವಿದ್ದರೆ ಕಳೆದ ೧೦ ವರುಷಕಾಲ ನಾನು ಪಾರ್ಶ್ವಶೂಲೆಯಿಂದಾಗಲಿ, ಆಮಶಂಕೆಯಿಂದಾಗಲಿ, ಕರುಳುಬೇನೆಯಿಂದಾಗಲಿ ನರಳುತ್ತಿರಲಿಲ್ಲ. ಆತ್ಮವು ಪರಿಶುದ್ಧವಾಗಿದ್ದರೆ, ಅದು ವಾಸಿಸುವ ದೇಹವು ಕೂಡ ಆರೋಗ್ಯವಾಗಿರುವುದೆಂದು ನನ್ನ ವಿಶ್ವಾಸ. ಪಾಪಮುಕ್ತ ಮಾರ್ಗದಲ್ಲಿ ಆತ್ಮದ ಗತಿಯ ಪ್ರಗತಿಯುಂಟಾದಂತೆಲ್ಲ ದೇಹವು ಕೂಡ ರೋಗಮುಕ್ತವಾಗುವುದು. ಆದರೆ ಈ ವಿಷಯದಲ್ಲಿ ಆರೋಗ್ಯವಾಗಿರುವ ಶರೀರವೆಂದರೆ ಬಲವಾದ ಶರೀರವೆಂದು ಅರ್ಥವಾಗದು. ಪ್ರಬಲವಾದ ಆತ್ಮವು ದುರ್ಬಲವಾದ ಶರೀರದಲ್ಲಿಯೆ ವಾಸಿಸುವುದು. ಆತ್ಮದ ಬಲವು ಹೆಚ್ಚಾದಹಾಗೆಲ್ಲ ದೇಹವು ಕ್ಷಯಿಸುತ್ತ ಹೋಗುವುದು. ಸಂಪೂರ್ಣ ಆರೋಗ್ಯದಿಂದಿರುವ ಶರೀರವು ಬಹಳ ಕೃಶವಾಗಿರಬಹುದು. ಬಲವಾದ ಶರೀರದಲ್ಲಿ ರೋಗವಿರಲೂಬಹುದು. ರೋಗವಿಲ್ಲದಿದ್ದರೂ ಅಂತಹ ದೇಹವು ಬಲುಬೇಗ ಸುಂಕಿಗೆ (ಸೊಗಡಿಗೆ) ಗುರಿಯಾಗುವುದು. ಸಂಪೂರ್ಣ ಆರೋಗ್ಯದಿಂದಿರುವ ಶರೀರವು ಅದರಿಂದ ಸಂಪೂರ್ಣವಾಗಿ ಮುಕ್ತವಾಗಿರುವುದು. ಪರಿಶುದ್ಧವಾದ ರಕ್ತವು ನಿಂದ್ಯವಾದ ಎಲ್ಲ ಬಗೆಯ ಕ್ರಿಮಿಗಳನ್ನು ಹೊರದೂಡುವ ಶಕ್ತಿಯುಳ್ಳದಾಗಿರುವುದು.

ಈ ಪೂರ್ಣಾವಸ್ಥೆಯನ್ನು ಹೊಂದುವುದು ಕಷ್ಟ. ಇಲ್ಲವಾದರೆ ಈಗಾಗಲೆ ನಾನು ಅದನ್ನು ಹೊಂದಿರುತ್ತಿದ್ದೆನು. ಏಕೆಂದರೆ ಆ ಸ್ಥಿತಿ

ಯನ್ನು ಹೊಂದಲು ಬೇಕಾದ ಪ್ರಯತ್ನಗಳನ್ನು ಮಾಡಲು ನಾನು ದುರ್ಲಕ್ಷಿಸಿಲ್ಲವೆಂದು ದೃಢವಾಗಿ ಹೇಳಬಲ್ಲೆನು. ಬಹಿರಂಗದಲ್ಲಿರುವ ಯಾವ ವಸ್ತುವೂ ನನ್ನ ಧ್ಯೇಯದಿಂದ ನನ್ನನ್ನು ದೂರಪಡಿಸುವಂತಿಲ್ಲ. ಆದರೆ ನಮ್ಮ ಕರ್ಮದ ವಾಸನೆಯನ್ನು ನಾಶಪಡಿಸುವುದು ನಮಗೆ ಸುಲಭವಾಗಿಲ್ಲ. ನನಗೆ ಆ ಪೂರ್ಣಾವಸ್ಥೆಯು ಬರಲು ವಿಳಂಬವಾಗುವುದೆಂದು ನಾನು ನಿರಾಶನಾಗಿಲ್ಲ. ಏಕೆಂದರೆ ನಾನು ಪಾಪಯುಕ್ತವಾದ ಪೂರ್ಣಾವಸ್ಥೆಯನ್ನು ಊಹಿಸಬಲ್ಲೆನು. ಅದರ ಮಿಣುಕನ್ನು ಅಸ್ಪಷ್ಟವಾಗಿ ಕಾಣಬಲ್ಲೆನು. ನನ್ನ ಸಾಧನೆಯಿಂದುಂಟಾಗಿರುವ ಪ್ರಗತಿಯು ನನಗೆ ಭರವಸೆಯನ್ನು ಕೊಡುತ್ತಿರುವುದು. ನನ್ನ ಮನೋರಥವು ಸಿದ್ಧಿಸದೇ ನಾನು ಸತ್ತರೂ ನಾನು ಸೋತೆನೆಂದು ತಿಳಿಯುವುದಿಲ್ಲ. ಈ ಜನ್ಮದಲ್ಲಿರುವಂತೆಯೆ ಮುಂದಣ ಜನ್ಮ ವಿಚಾರದಲ್ಲಿಯೂ ನನಗೆ ದೃಢವಿಶ್ವಾಸವಿರುವುದು. ಆದುದರಿಂದ ಈ ಜನ್ಮದಲ್ಲಿ, ನಾನು ಮಾಡುವ ಎಂತಹ ಅಲ್ಪಪ್ರಯತ್ನವಾದರೂ ವ್ಯರ್ಥವಾಗುವುದಿಲ್ಲವೆಂದು ನಾನು ತಿಳಿದಿರುವೆನು.

ನನಗೆ ಪತ್ರಗಳನ್ನು ಬರೆಯುವವರು ಮತ್ತು ನನ್ನ ಅವಸ್ಥೆಯಲ್ಲಿರುವ ಇತರರು ಇದರಿಂದ ಉತ್ಸಾಹಗೊಂಡು, ಆತ್ಮವಿಶ್ವಾಸಸಾಧನೆಯನ್ನು ಮಾಡಲಾರಂಭಿಸಬೇಕೆಂಬ ಉದ್ದೇಶ್ಯದಿಂದ ನಾನು ಈ ಆತ್ಮಚರಿತ್ರೆಯ ಸೂಕ್ಷ್ಮ ವಿಚಾರಗಳನ್ನು ವಿಶದಪಡಿಸಿರುವೆನು. ನಮ್ಮಲ್ಲಿ ಪ್ರತಿಯೊಬ್ಬನಲ್ಲಿಯೂ ಇರುವ **ಆತ್ಮವು** ಒಂದೇ ಬಗೆಯದಾಗಿರುವುದು. ಎಲ್ಲ ಆತ್ಮಗಳಿಗೂ ಸಮಾನ ಶಕ್ತಿಯಿರುವುದು. ಆದರೆ ಕೆಲವು ಆತ್ಮಗಳು ತಮ್ಮ ಶಕ್ತಿಯನ್ನು ಹೆಚ್ಚಿಸಿಕೊಂಡಿರುವವು. ಮತ್ತೆ ಕೆಲವು ಇನ್ನೂ ನಿದ್ರಿತಾವಸ್ಥೆಯಲ್ಲಿರುವವು. ಇವುಗಳು ಕೂಡ ಪ್ರಯತ್ನಪಟ್ಟರೆ, ಅವುಗಳಿಗೆ ಅದೇ ಅನುಭವವು ಬರುವುದು.

ಇದುವರೆಗೆ ಹೇಳಿದುದರಲ್ಲಿ ಬ್ರಹ್ಮಚರ್ಯೆಯು ವಿಸ್ತೃತಾರ್ಥವನ್ನು ಕುರಿತು ಚರ್ಚಿಸಿರುವೆನು. ಸಾಮಾನ್ಯ ಅಥವಾ ರೂಢಿಯಲ್ಲಿರುವ ಅರ್ಥದಲ್ಲಿ ಬ್ರಹ್ಮಚರ್ಯೆಯೆಂದರೆ ಮನೋವಾಕ್ ಕ್ರಿಯೆಗಳಲ್ಲಿ ವಿಷಯ ವಾಸನೆಯನ್ನು ನಿಗ್ರಹಿಸುವುದೆಂದು ಅರ್ಥವಾಗುವುದು.

ವಿಷಯವಾಸನೆಯ ನಿರೋಧವು ಕಷ್ಟತರವಾದುದರಿಂದ ಈ ಅರ್ಥವೂ ಸರಿಯಾಗಿರುವುದು. ರಸನೇಂದ್ರಿಯ (ನಾಲಿಗೆಯ) ನಿಗ್ರಹ ವಿಚಾರದಲ್ಲಿ ಅದೇ ಕರ್ತವ್ಯಭಾವವನ್ನಿಟ್ಟಿಲ್ಲವಾದುದರಿಂದ ಜನನೇಂದ್ರಿಯ ನಿಗ್ರಹವು ಕಷ್ಟತರವಾಗಿಯೂ ಅಸಾಧ್ಯವಾಗಿರುವಂತೆಯೂ ಕಾಣುತ್ತಿದೆ. ರೋಗದಿಂದ ಕ್ಷಯಿಸಿರುವ ದೇಹದಲ್ಲಿ ವಿಷಯವಾಸನೆಯು ಪ್ರಬಲವಾಗಿರುವುದೆಂದು ವೈದ್ಯಶಾಸ್ತ್ರಜ್ಞರು ಅಭಿಪ್ರಾಯಪಡುವರು. ಆದುದರಿಂದಲೇ ದುರ್ಬಲರಾದ ನಮ್ಮ ಬ್ರಹ್ಮಚರ್ಯ ಸಾಧನೆಯು ಕಷ್ಟತರವಾಗಿ ತೋರುವುದು.

ದುರ್ಬಲವಾಗಿದ್ದರೂ ಆರೋಗ್ಯದಿಂದಿರುವ ಶರೀರವನ್ನು ನಾನು ಹಿಂದೆಯೇ ವರ್ಣಿಸಿರುವೆನು. ಆದುದರಿಂದ ನಮಗೆ ಅಂಗಸಾಧನೆಯ ಆವಶ್ಯಕತೆಯಿಲ್ಲವೆಂದು ತಿಳಿದು ಯಾರೂ ಕುಣಿಯದಿರಲಿ. ಬ್ರಹ್ಮಚರ್ಯೆಯ ಪರಮಾವಸ್ಥೆಯನ್ನು ನಾನು ನನ್ನ ಹರಕುಮುರಕು ಭಾಷೆಯಲ್ಲಿ ವರ್ಣಿಸಿರುವೆನು. ಅದಕ್ಕೆ ಅನೇಕರು ತಪ್ಪು ಅರ್ಥವನ್ನೂ ಕಲ್ಪಿಸಬಹುದು. ಎಲ್ಲ ಇಂದ್ರಿಯಗಳನ್ನೂ ಸಂಪೂರ್ಣ ಸ್ವಾಧೀನದಲ್ಲಿಟ್ಟುಕೊಳ್ಳಲಪೇಕ್ಷಿಸುವವನು ಕೊನೆಗಾದರೂ ದೇಹದೌರ್ಬಲ್ಯಕ್ಕೆ ಸ್ವಾಗತವನ್ನೀಯಲೇಬೇಕು. ದೇಹದ ಮೇಲಣ ಮಮತೆಯಿಂದ ಮುಕ್ತನಾದಮೇಲೆ ದೇಹ ಬಲದ ಆಸೆಯು ಮಾಯವಾಗುವುದು.

ಆದರೆ ಪಾಶವಿಕ ವಿಷಯವಾಸನೆಯನ್ನು ನಿಗ್ರಹಿಸಿರುವ ಬ್ರಹ್ಮಚಾರಿಯ ದೇಹವು ನಿಜವಾಗಿಯೂ ಬಲಿಷ್ಠವಾಗಿಯೂ ಪೂರ್ಣ ಕಳೆಯುಳ್ಳುದಾಗಿಯೂ ಇರಬೇಕು. ಈ ಬಗೆಯ ಸಾಮಾನ್ಯನಿಗ್ರಹದ ಬ್ರಹ್ಮಚರ್ಯೆಯು ಕೂಡ ಆಶ್ಚರ್ಯವನ್ನುಂಟುಮಾಡುವುದು. ಸ್ವಪ್ನದಲ್ಲಿಯೂ ಲಾಂಪಟ್ಯ ವಿಚಾರದಿಂದ ಮುಕ್ತನಾಗಿರುವವನು ಕೂಡ ಪ್ರಪಂಚದ ಗೌರವಕ್ಕೆ ಅರ್ಹನಾಗಿರುವನು. ಅಂತಹವನಿಗೆ ಇತರ ಇಂದ್ರಿಯಗಳ ನಿಗ್ರಹವು ಸುಲಭವಾಗಿರುವುದು.

**ಮತ್ತೊಬ್ಬ ಮಿತ್ರನು ಹೀಗೆ ಬರೆದಿರುವನು.—"ನನ್ನ ಸ್ಥಿತಿಯು ಹೃದಯ, ದ್ರಾವಕವಾಗಿರುವುದು. ಹಗಲಿರುಳೂ, ನಾನು ಕಚೇರಿಯಲ್ಲಿರುವಾಗಲೂ ಮಾರ್ಗದಲ್ಲಿ ಹೋಗುತ್ತಿರುವಾಗಲೂ, ಓದುತ್ತಿರುವಾಗಲೂ, ಕೆಲಸ ಮಾಡುತ್ತಿರು-**

ವಾಗಲೂ, ಪ್ರಾರ್ಥನೆ ಮಾಡುತ್ತಿರುವಾಗ ಕೂಡ ಇದೇ ವಿಚಾರದ ಕೆಟ್ಟ ಆಲೋಚನೆಗಳು ನನ್ನನ್ನು ಪೀಡಿಸುತ್ತಿರುವವು. ನನ್ನ ವಿಚಾರತರಂಗಗಳನ್ನು ಹೇಗೆ ಸ್ವಾಧೀನಪಡಿಸಿಕೊಳ್ಳಬೇಕು ? ಇಂಥ ಸ್ಥಿತಿಯಲ್ಲಿ ಎಲ್ಲ ಸ್ತ್ರೀಯರನ್ನು ನನ್ನ ಸ್ವಂತ ತಾಯಿಯಂತೆ ಹೇಗೆ ಭಾವಿಸಬಲ್ಲೆನು ? ಪವಿತ್ರವಾತ್ಸಲ್ಯದ ವಿನಾ ಮತ್ತಾವ ಭಾವವೂ ಕಣ್ಣಿನಿಂದ ಹೊರಸೂಸದಿರುವುದು ಹೇಗೆ ? ಕೆಟ್ಟ ಆಲೋಚನೆಗಳನ್ನು ನಾನು ಹೇಗೆ ನಿರ್ಮೂಲಗೊಳಿಸಬಲ್ಲೆನು ? ನೀವು ಬ್ರಹ್ಮಚರ್ಯೆಯ ವಿಚಾರವಾಗಿ ಬರೆದ ಲೇಖನವನ್ನು ನನ್ನ ಮುಂದಿಟ್ಟುಕೊಂಡಿರುವೆನು. ಆದರೆ ಅದರಿಂದ ನನಗೇನೂ ಪ್ರಯೋಜನವಾಗುವಂತೆ ಕಾಣೆನು."

ಇದು ನಿಜವಾಗಿಯೂ ಹೃದಯದ್ರಾವಕವಾಗಿದೆ. ನಮ್ಮಲ್ಲಿನ ಸೇಕರು ಇದೇ ಬಗೆಯ ಅನುಸಂಕಟದಲ್ಲಿರುವರು. ಆದರೆ ದುಷ್ಟ ವಿಚಾರಗಳನ್ನು ನಿರ್ಮೂಲಗೊಳಿಸಬೇಕೆಂದು ಮನಸ್ಸಿನಲ್ಲಿ ಹವಣಿಸುತ್ತಿರುವವರೆಗೆ ನಾವು ನಿರಾಶರಾಗಲು ಕಾರಣವೇ ಇಲ್ಲ. ನೋಟದಿಂದ ಪಾಪವಾಗುವುದಾದರೆ ಕಣ್ಣು ಮುಚ್ಚಿಕೊಳ್ಳಬೇಕು, ಕಿವಿಗಳು ಪಾಪ ವಿಚಾರಗಳನ್ನು ಕೇಳುವುದಾದರೆ ಅವುಗಳಲ್ಲಿ ಹತ್ತಿಯನ್ನು ತುರುಕಿ ಮುಚ್ಚಿಬಿಡಬೇಕು. ಯಾವಾಗಲೂ ದೃಷ್ಟಿಯು ಬೇಕಾದತ್ತ ಸಂಚರಿಸಲವಕಾಶವಿರದಂತೆ, ನೆಲದ ಕಡೆ ದೃಷ್ಟಿಯನ್ನಿಟ್ಟು ನಡೆಯುವುದು ಉತ್ತಮವಾದ ಸಾಧನೆಯಾಗಿರುವುದು. ಎಲ್ಲಿಯಾದರೂ ದುಷ್ಟಮಾತುಗಳನ್ನಾಡುತ್ತಿದ್ದರೆ, ಅಪವಿತ್ರವಾದ ಗಾಯನವಾಗುತ್ತಿದ್ದರೆ ಅಂತಹ ಸ್ಥಳವನ್ನು ಬಿಟ್ಟೋಡಬೇಕು.

ರಸನೇಂದ್ರಿಯವನ್ನು ಸಂಪೂರ್ಣವಾಗಿ ಸ್ವಾಧೀನದಲ್ಲಿಟ್ಟುಕೊಳ್ಳಬೇಕು, ಅದನ್ನು ಸ್ವಾಧೀನದಲ್ಲಿಟ್ಟುಕೊಳ್ಳಲಾರದವನು ಕಾಮೇಂದ್ರಿಯವನ್ನು ಕೂಡ ಸ್ವಾಧೀನದಲ್ಲಿಟ್ಟುಕೊಳ್ಳಲಾರನೆಂಬುದು ನನ್ನ ಅನುಭವದ ಮಾತಾಗಿದೆ. ರಸನೇಂದ್ರಿಯವನ್ನು ಸ್ವಾಧೀನಪಡಿಸಿಕೊಳ್ಳುವುದು ಸುಲಭ ಕಾರ್ಯವಲ್ಲ. ಆದರೆ ಕಾಮೇಂದ್ರಿಯ ನಿಗ್ರಹವು ರಸನೇಂದ್ರಿಯ ನಿಗ್ರಹವನ್ನವಲಂಬಿಸಿರುವುದು. ಸಂಪೂರ್ಣವಾಗಿಲ್ಲವಾದರೆ ಸಾಧ್ಯವಿದ್ದಮಟ್ಟಿಗಾದರೂ ಮಸಾಲೆಯನ್ನೂ ಚಟ್ನಿಣಿ ಮೊದಲಾದ ವ್ಯಂಜನ ಪದಾರ್ಥಗಳನ್ನೂ ತ್ಯಜಿಸುವುದು ರಸನೇಂದ್ರಿಯ

ನಿಗ್ರಹದ ಉಪಾಯಗಳಲ್ಲೊಂದಾಗಿರುವುದು. ನಾವು ಕೇವಲ ದೇಹವನ್ನು ಸಂರಕ್ಷಿಸುವುದಕ್ಕೋಸ್ಕರವೇ ಹೊರತು ಎಂದಿಗೂ ರುಚಿಗಾಗಿ ಆಹಾರವನ್ನು ತೆಗೆದುಕೊಳ್ಳುವುದಿಲ್ಲವೆಂಬ ಭಾವನೆಯನ್ನು ಸಾಧನೆಗೆ ತರುವುದು ಮತ್ತೊಂದು ಪರಿಣಾಮಕರವಾದ ಉಪಾಯವಾಗಿರುವುದು. ನಾವು ಗಾಳಿಯನ್ನು ಒಳಗೆ ತೆಗೆದುಕೊಳ್ಳುವುದು ಪ್ರಾಣರಕ್ಷಣೆಗಾಗಿ. ರುಚಿಗಾಗಿಯಲ್ಲ. ಬಾಯಾರಿಕೆಗೋಸ್ಕರ ನೀರು ಕುಡಿಯುವೆವು. ಹಾಗೆಯೇ ಹಸಿವೆಯನ್ನು ಹೋಗಲಾಡಿಸುವುದಕ್ಕೋಸ್ಕರ ಊಟ ಮಾಡುವೆವು. ಆದರೆ ನಮ್ಮ ದೌರ್ಭಾಗ್ಯದಿಂದ ಮಾತಾಪಿತೆರು ಚಿಕ್ಕಂದಿನಿಂದಲೆ ನಮ್ಮಲ್ಲಿ ಇದಕ್ಕೆ ವಿರುದ್ಧವಾಗಿರುವ ಅಭ್ಯಾಸವುಂಟಾಗುವಂತೆ ಮಾಡುವರು. ಪ್ರೇಮವೆಂಬ ಭ್ರಮೆಯಿಂದ ಅವರು ನಮಗೆ ಹಲವು ತಿಂಡಿ ತೀರ್ಥಗಳನ್ನು ಕೊಟ್ಟು ನಮ್ಮನ್ನು ಕೆಡಿಸುವರು. ಅಹಿತ ಕರವಾದೀ ಬಗೆಯ ವಾತಾವರಣದೊಂದಿಗೆ ಹೋರಾಡಲು ನಾವು ಸಿದ್ಧರಾಗಬೇಕು.

**ರಾಮನಾಮ**ವಾಗಲಿ ಅಥವಾ ಅಂತಹದೇ ಬೇರೆ **ಮಂತ್ರ**ವಾಗಲಿ ಕಾಮೇಂದ್ರಿಯವನ್ನು ನಿಗ್ರಹಿಸುವುದರಲ್ಲಿ ನಮಗೆ ಬಲಿಷ್ಠನಾದ ಸ್ನೇಹಿತನಂತೆ ಸಹಾಯ ಮಾಡುವುದಾಗಿರುವುದು. **ದ್ವಾದಶಮಂತ್ರ**ದಿಂದ ಕೂಡ ಈ ಉದ್ದೇಶ್ಯವು ನೆರವೇರುವುದು. ಅವನವನಿಗೆ ಪ್ರಿಯವಾದ **ಮಂತ್ರ**ವನ್ನು ಅವನು ಜಪಿಸಬಹುದು. ನನ್ನ ಬಾಲ್ಯಾವಸ್ಥೆಯಿಂದಲೂ ನಾನು ಜಪಿಸುತ್ತಲಿರುವ ಮತ್ತು ನನ್ನ ಹೋರಾಟಗಳಲ್ಲೆಲ್ಲ ನನಗೆ ಸಹಾಯಕವಾಗಿರುವ **ರಾಮನಾಮವು** ನನಗೆ ಚಿರಪರಿಚಿತವಾದುದರಿಂದ ಅದನ್ನು ನಾನು ಸೂಚಿಸಿರುವೆನು. ಯಾವ **ಮಂತ್ರ**ವನ್ನೆ ಆರಿಸಲಿ, ಅದರ ಧ್ಯಾನದಲ್ಲಿಯೇ ಲೀನವಾಗಿ ಬಿಡಬೇಕು. ಜಪದ ಸಮಯದಲ್ಲಿ ಬೇರೆ ಆಲೋಚನೆಗಳು ಬಂದರೂ ಲಕ್ಷಿಸಕೂಡದು. ಭಕ್ತಿಯಿಂದ ಜಪವನ್ನು ಮುಂದರಿಸುವವನು ಕೊನೆಗೆ ಜಯವನ್ನು ಹೊಂದುವನೆಂದು ನಾನು ದೃಢವಾಗಿ ನಂಬಿರುವೆನು. **ಮಂತ್ರವು ಜೀವನಮಾರ್ಗದರ್ಶಕ ದಂಡವಾಗಿ, ಪ್ರತಿಯೊಂದು ಪರೀಕ್ಷೆಯಿಂದಲೂ ನಾವು ಪಾರಾಗುವಂತೆ ಮಾಡುವುದು.** ಅಂತಹ ಪವಿತ್ರ **ಮಂತ್ರ**

ಗಳಿಂದ ಐಹಿಕ ಲಾಭವನ್ನು ಹೊಂದಲೆತ್ನಿಸಬಾರದು. ನಮ್ಮ ಜೀವನವನ್ನು ಪವಿತ್ರವಾಗಿಡಬೇಕೆಂದೆಚ್ಚರಿಸುವ ಶಕ್ತಿಯು ಈ **ಮಂತ್ರ**ಗಳಲ್ಲಿರುವುದು. ಅವರ ನಿಜವಾದ ಸಾಧಕನಿಗೆ ಅದರ ಅನುಭವವು ಕೂಡಲೇ ಉಂಟಾಗುವುದು. ಮಂತ್ರಗಳನ್ನು ಗಿಣಿಯಂತೆ ಉಚ್ಚರಿಸಕೂಡದೆಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಭಕ್ತಿಪೂರ್ವಕವಾಗಿ, ಮನಃಪೂರ್ವಕವಾಗಿ ನಾವು ಅದರಲ್ಲಿ ಲೀನವಾಗಬೇಕು. ಗಿಣಿಯು ಯಂತ್ರದಂತೆ ಅದನ್ನುಚ್ಚರಿಸುವುದು. ಆದರೆ ನಾವಾದರೊ ನಮ್ಮ ದುರಾಲೋಚನೆಗಳನ್ನು ದೂರಕ್ಕೋಡಿಸುವೆವೆಂಬ ಆಸೆಯಿಂದಲೂ ಹಾಗೆ ಮಾಡುವ ಶಕ್ತಿಯು ಮಂತ್ರವಲ್ಲಿರುವುದೆಂಬ ದೃಢವಾದ ಭಾವನೆಯಿಂದಲೂ ಬುದ್ಧಿಪೂರ್ವಕವಾಗಿ ಅದನ್ನುಚ್ಚರಿಸಬೇಕು.

## ೭. ಸತ್ಯವೂ ಬ್ರಹ್ಮಚರ್ಯೆಯೂ *

**ಒ**ಬ್ಬ ಮಿತ್ರನು ಮಹಾದೇವ ದೇಸಾಯಿಯವರಿಗೆ ಹೀಗೆ ಬರೆದಿರುವನು:-“ ಕೆಲವು ದಿನಗಳ ಹಿಂದೆ ನವಜೀವನದಲ್ಲಿ ಮುದ್ರಿತವಾಗಿ ಯಂಗ್ ಇಂಡಿಯ ಪತ್ರಿಕೆಯಲ್ಲಿ ನಿಮ್ಮ ಅನುವಾದ ರೂಪದಿಂದ ಪ್ರಕಟಗೊಂಡ ಬ್ರಹ್ಮಚರ್ಯೆಯೆಂಬ ಲೇಖನದಲ್ಲಿ ಗಾಂಧಿಜಿಯು ತಮಗಿನ್ನೂ ದುಸ್ವಪ್ನಗಳು ಬೀಳುತ್ತಿರುವವೆಂದು ಒಪ್ಪಿಕೊಂಡಿರುವುದು ನಿಮ್ಮ ನೆನಪಿನಲ್ಲಿರಬಹುದು. ಅದನ್ನು ಓದಿದ ಕೂಡಲೆ, ಅಂತಹ ಒಪ್ಪಿಗೆಯ ಪ್ರಕಟನೆಯಿಂದುಂಟಾಗುವ ಪರಿಣಾಮವು ಹಿತಕರವಾಗಿ ಇರುವುದಿಲ್ಲವೆಂದು ನನಗೆ ತೋರಿತು. ಮುಂದೆ ನನ್ನ ಅನುಮಾನವು ಸರಿಯಾದುದೆಂದು ಕಂಡು ಬಂದಿತು.”

“ನಾನು ನನ್ನ ಸ್ನೇಹಿತರೂ ವಿಲಾಯತಿಯಲ್ಲಿರುವಾಗ ನಮ್ಮ ನಡತೆಯನ್ನು ಎಷ್ಟೊ ಬಗೆಯ ಮೋಹಾಕರ್ಷಣಗಳಿಂದ ಹಾನಿತಟ್ಟದಂತೆ ಪವಿತ್ರವಾಗಿಟ್ಟುಕೊಂಡಿದ್ದೆವು. ನಾವು ಮಾದಕ ದ್ರವ್ಯ (ವೈನ್)

* ೧೯೨೬ನೆಯ ಸಾಲಿನ ಫೆಬ್ರವರಿ ೨೫ನೆಯ ತಾರೀಖಿನ ಯಂಗ್ ಇಂಡಿಯದ ಲೇಖನದ ಅನುವಾದ.

ಸ್ತ್ರೀ ಮತ್ತು ಮಾಂಸಗಳನ್ನು ಮುಟ್ಟಲೇ ಇಲ್ಲ. ಆದರೆ ಗಾಂಧಿಜಿಯ ಲೇಖನವನ್ನು ಓದಿದ ಕೂಡಲೆ ಒಬ್ಬ ಸ್ನೇಹಿತನು ನಿರಾಶೆಯಿಂದ "ಅಂತಹ ಅದ್ಭುತ ಪ್ರಯತ್ನಗಳನ್ನು ಮಾಡಿದ ಗಾಂಧಿಜಿಯವರ ಅವಸ್ಥೆಯೇ ಹಾಗಿರುವಾಗ, ನಮ್ಮಂತಹರ ಪಾಡೇನಾಗಬೇಕು? ಬ್ರಹ್ಮಚರ್ಯೆಯನ್ನಾಚರಿಸಲೆತ್ನಿಸುವುದರಿಂದ ಪ್ರಯೋಜನವಿಲ್ಲ. ಗಾಂಧಿಜಿಯವರ ದೋಷಾನುಸಂಧಾನವು ನನ್ನ ದೃಷ್ಟಿಕೋಣವನ್ನು ಸಂಪೂರ್ಣವಾಗಿ ಬದಲಾಯಿಸಿರುವುದು. ಇಂದಿನಿಂದ ನಾನು ಪತಿತನಾದನೆಂದು ತಿಳಿದುಕೊ'' ಎಂದನು. ನಾನೂ ಸ್ವಲ್ಪ ಹಿಂಜರಿಯುತ್ತ ಅವನೊಂಎಗೆ—ಗಾಂಧಿಯವರಾಗಲಿ ನೀವಾಗಲಿ ವಾದಿಸುವಂತೆ ಹೀಗೆ ವಾದಿಸಿದೆನು—"ಗಾಂಧಿಯವರಿಗೆ ಅದು ಅಷ್ಟು ಕಷ್ಟವಾಗಿರಬೇಕಾದರೆ, ನಮ್ಮಂತಹರಿಗೆ ಹೆಚ್ಚು ಕಷ್ಟತರವಾಗಿರಬೇಕು. ಆದ್ದರಿಂದಲೆ ನಾವು ಅವರಿಗಿಂತ ಎರಡರಷ್ಟು ಪ್ರಯತ್ನಗಳನ್ನು ಮಾಡಬೇಕು.'' ಆದರೆ ಅದೆಲ್ಲ ವ್ಯರ್ಥವಾಯಿತು. ಇದುವರೆಗೆ ನಿಷ್ಕಲಂಕವಾಗಿದ್ದ ಅವನ ಶೀಲವು ಮಣ್ಣುಗೂಡಿತು. ಅವನು ಪತಿತನಾದುದಕ್ಕೆ ಗಾಂಧಿಜಿಯವರೇ ಜವಾಬ್ದಾರರೆಂದು ಯಾರಾದರೂ ಹೇಳಿದರೆ ಗಾಂಧಿಜಿಯಾಗಲಿ ನೀವಾಗಲಿ ಏನುತ್ತರ ಕೊಡುವಿರಿ?

"ಇಂತಹ ಉದಾಹರಣೆಯೊಂದೇ ಇರುವವರೆಗೆ ನಾನು ನಿಮಗೆ ಬರೆಯಲೇ ಇಲ್ಲ. ಏಕೆಂದರೆ ಅದೊಂದು ಅಪೂರ್ವ ಉದಾಹರಣೆಯೆಂದು ಹೇಳಿ ನೀವು ನನ್ನ ಬಾಯಿಮುಚ್ಚಿಬಿಡುತ್ತಿದ್ದಿರಿ. ಆದರೆ ಇಂತಹ ಉದಾಹರಣೆಗಳು ಈಗ ಅನೇಕವಾಗಿ, ನನ್ನ ಅನುಮಾನವು ನಿಜವಾಗಿರುವುದು.

"ಗಾಂಧಿಜಿಗೆ ಕೆಲವು ವಿಚಾರಗಳು ಬಹು ಸುಲಭವಾಗಿದ್ದರೂ ನನಗೆ ಅವು ಅಸಾಧ್ಯವಾಗಿರುವವೆಂದು ಗೊತ್ತಿದೆ. ಆದರೆ ಗಾಂಧಿಜಿಗೆ ದುಸ್ಸಾಧ್ಯವಾಗಿರುವ ಕೆಲವು ವಿಚಾರಗಳು, ದೇವರ ಅನುಗ್ರಹದಿಂದ, ನನಗೆ ಸುಲಭಸಾಧ್ಯವಾಗಿರುವವೆಂದು ನಾನು ಹೇಳಬಲ್ಲೆನು. ಈ ಬಗೆಯ ಭಾವನೆಯು ಅಥವಾ ಗರ್ವವು ನನ್ನನ್ನು ಪತನಮಾರ್ಗದಿಂದ ರಕ್ಷಿಸಿರುವುದು. ಆದಾಗ್ಯೂ ಮೇಲೆ ಹೇಳಿದ ದೋಷಾನುಸಂಧಾನ

ದಿಂದ ನನ್ನ ಭದ್ರತೆಯ ಭಾವನೆಯನ್ನು ಸಂಪೂರ್ಣವಾಗಿ ಚದರಿಸಿರುವುದು.

"ಈ ಸಂಗತಿಯನ್ನು—ಮುಖ್ಯವಾಗಿ ಅವರ ಆತ್ಮಚರಿತ್ರೆಯ ಮಧ್ಯ ಭಾಗವನ್ನು ಬರೆವಾಗ-ಗಾಂಧಿಜಿಗೆ ತಿಳಿಸುವಿರಾ? ಸತ್ಯವನ್ನು ಅದರ ನಿಜ ಸ್ವರೂಪದಲ್ಲಿ ಹೇಳುವುದು ಧೈರ್ಯವೇ ಸರಿ. ಆದರೆ ಪ್ರಪಂಚವೂ ನವಜೀವನ ಮತ್ತು ಯಂಗ್ ಇಂಡಿಯಾ ಪತ್ರಿಕೆಯ ವಾಚಕರೂ ಅವರ ಉದ್ದೇಶ್ಯವನ್ನು ಸರಿಯಾಗಿ ತಿಳಿದುಕೊಳ್ಳಲಾರರು. ಒಬ್ಬನಿಗೆ ಆಹಾರವಾಗಿರುವುದು ಮತ್ತೊಬ್ಬನಿಗೆ ವಿಷವಾಗಿ ಪರಿಣಮಿಸಬಹುದೆಂದು ನನ್ನ ಭಯ.''

ಈ ದೂರಿನಿಂದ ನನಗೆ ಆಶ್ಚರ್ಯವುಂಟಾಗಿಲ್ಲ. ಅಸಹಕಾರ ಚಳವಳವು ಪ್ರಬಲವಾಗಿದ್ದಾಗ ಆ ಹೋರಾಟದ ಮಧ್ಯದಲ್ಲಿ ನನ್ನ ತಿಳಿವಳಿಕೆಯ ಒಂದು ತಪ್ಪು ಭಾವನೆಯನ್ನೊಪ್ಪಿಕೊಂಡಾಗ ಒಬ್ಬ ಸ್ನೇಹಿತನು ಸಹಜವಾಗಿ ನನಗೆ ಹೀಗೆ ಬರೆದನು:—'ಅದು ತಪ್ಪಾಗಿದ್ದರೂ ಅದನ್ನು ನೀವು ಒಪ್ಪಿಕೊಳ್ಳಬಾರದಿತ್ತು. ತಪ್ಪುಮಾಡದವನೊಬ್ಬನಾದರೂ ಇರುವನೆಂಬುದನ್ನು ನಂಬಲು ಜನರಿಗೆ ಉತ್ತೇಜನ ಕೊಡಬೇಕು. ನೀವು ಹಾಗಿರುವಿರೆಂದು ಎಲ್ಲರೂ ಭಾವಿಸಿದ್ದರು. ನಿಮ್ಮ ಈ ತಪ್ಪು ಒಪ್ಪಿಗೆಯು ಈಗ ಅವರನ್ನು ನಿರಾಶೆಗೊಳಿಸುವುದು.'—ಇದನ್ನು ನೋಡಿ ನನಗೆ ನಗೆಯೂ ಬಂದಿತು, ದುಃಖವೂ ಉಂಟಾಯಿತು. ಲೇಖಕನ ಸರಳ ಹೃದಯವನ್ನು ನೋಡಿ ನಗು ಬಂದಿತು. ದೋಷಪೂರ್ಣನಾದ ಮನುಷ್ಯನನ್ನು ದೋಷಾತೀತನೆಂದು ಜನರು ನಂಬಿ ಉತ್ತೇಜನವೀಯಬೇಕೆಂಬ ಆಲೋಚನೆಯನ್ನೆ ನಾನು ಸಹಿಸಲಾರದವನಾದೆನು.

ಮಾನವನ ನಿಜವಾದ ಸ್ವಭಾವದ ಜ್ಞಾನದಿಂದ ಜನರಿಗೆ ಒಳ್ಳೆಯದಾಗುವುದು. ಅದರಿಂದ ಎಂದಿಗೂ ಅಪಾಯವುಂಟಾಗಲಾರದು. ನಾನು ತಪ್ಪುಮಾಡಿದ ಕೂಡಲೆ ಒಪ್ಪಿಕೊಂಡಿರುವ ಉದಾಹರಣೆಗಳಿಂದ ಜನರಿಗೆ ಹಿತವೇ ಆಗುವುದೆಂದು ನಾನು ದೃಢವಾಗಿ ನಂಬಿರುವೆನು. ನನಗಂತೂ ಅದರಿಂದ ವಿಶೇಷ ಹಿತವುಂಟಾಗಿರುವುದು.

ನನ್ನ ದುಸ್ಸ್ವಪ್ನ ವಿಚಾರವನ್ನೊಪ್ಪಿಕೊಂಡಿರುವುದರ ಸಂಬಂಧ ವಾಗಿಯೂ ಅದೇ ಮಾತುಗಳನ್ನು ಹೇಳಬೇಕಾಗಿದೆ. ನಾನು ನಿಜ ವಾಗಿಯೂ ಬ್ರಹ್ಮಚಾರಿಯಾಗಿರದೆ, ಪೂರ್ಣ ಬ್ರಹ್ಮಚಾರಿಯಾಗಿರುವೆ ನೆಂದು ಹೇಳಿಕೊಳ್ಳುವುದರಿಂದ ಪ್ರಪಂಚಕ್ಕೆ ವಿಶೇಷ ಅಪಾಯ ವನ್ನುಂಟು ಮಾಡಿದಂತಾಗುವುದು. ಏಕೆಂದರೆ ಹಾಗೆ ಹೇಳುವುದು ಬ್ರಹ್ಮಚರ್ಯೆಗೆ ಕಳಂಕವನ್ನುಂಟು ಮಾಡುವುದು, ಮತ್ತೆ ಅದು ಸತ್ಯದ ಬೆಳಕನ್ನೆ ಮಲಿನಗೊಳಿಸುವುದು. ತಪ್ಪುತೋರಿಕೆಯಿಂದ ಬ್ರಹ್ಮಚರ್ಯೆಯ ಯೋಗ್ಯತೆಯನ್ನು ನಾನು ತಗ್ಗಿಸಬಲ್ಲೆನೆ? ನಾನು ಸಂಪೂರ್ಣ ಬ್ರಹ್ಮಚಾರಿಯಾಗಿಲ್ಲವಾದುದರಿಂದ ಬ್ರಹ್ಮಚರ್ಯಸಾಧನೆ ಗಾಗಿ ಸಾಕಾದಷ್ಟು, ಸರಿಯಾದ ಮತ್ತು ಪರಿಣಾಮಕರವಾದ ಉಪಾಯ ಗಳನ್ನು ನಾನು ಹೇಳಲಾರದವನಾಗಿರುವೆನೆಂದು ನನಗೇ ತಿಳಿದಿದೆ. ಬ್ರಹ್ಮಚರ್ಯೆಗೆ ರಾಜಮಾರ್ಗವನ್ನು ತೋರಲಾಗದ ನಾನು ಪೂರ್ಣ ಬ್ರಹ್ಮಚಾರಿಯೆಂದು ಪ್ರಪಂಚವು ನಂಬುವಂತೆ ಮಾಡಬೇಕೆಂಬುದು ಎಂತಹ ಭಯಂಕರ ವಿಚಾರ!

ನಾನೊಬ್ಬ ಸಾಧಕನು, ನಾನು ಪೂರ್ಣಜಾಗ್ರತಿಯನ್ನು ಹೊಂದಿ ರುವೆನು. ನಾನು ನಿರಂತರವೂ ಧೈರ್ಯದಿಂದ ಸಾಧನೆಯಲ್ಲಿ ಮಗ್ನ ನಾಗಿರುವೆನು ಎಂಬೀ ವಿಚಾರವು ಪ್ರಪಂಚಕ್ಕೆ ತಿಳಿದರೆ ಸಾಲದೇನು? ಈ ತಿಳಿವಳಿಕೆಯಿಂದ ಇತರರಿಗೆ ಉತ್ತೇಜನವೇಕೆ ದೊರೆಯುವುದಿಲ್ಲ? ತಪ್ಪಾಗಿರುವ ಪೂರ್ವಪಕ್ಷವನ್ನಾಧರಿಸಿ ಮುಂದಾಗುವ ಪರಿಣಾಮವನ್ನು ಊಹಿಸುವುದು ಸರಿಯಲ್ಲ. ಸಿದ್ಧಿ ಹೊಂದಿದ ಕಾರ್ಯಗಳಿಂದ ಅವು ಗಳನ್ನು ತಿಳಿಯುವುದೇ ಸರಿಯಾದ ಮಾರ್ಗ. ನನ್ನಂತೆಹನೇ ದುರಾ ಲೋಚನೆಯಿಂದ ಮುಕ್ತನಾಗಿಲ್ಲವಾದ್ದರಿಂದ ಇತರರೂ ಮುಕ್ತರಾಗ ಲಾರರೆಂದು ವಾದಿಸುವುದೇಕೆ? ಒಂದಾನೊಂದು ಕಾಲದಲ್ಲಿ ಕಾಮುಭಕ್ತ ನಾಗಿದ್ದ ಗಾಂಧಿಯು ಇಂದು ತನ್ನ ಪತ್ನಿಯೊಂದಿಗೆ ಸ್ನೇಹಿತನಂತೆಯೂ ಸೋದರನಂತೆಯೋ ವರ್ತಿಸುತ್ತಿರುವಾಗ, ಎಂತಹ ಸುಂದರಾಂಗಿ ಯನ್ನಾದರೂ ಆತನು ತನ್ನ ಸೋದರಿ ಅಥವಾ ಮಗಳಂತೆ ಭಾವಿಸ ಬಲ್ಲವನಾಗಿರುವಾಗ, ಅವನ ಉದಾಹರಣೆಯಿಂದ ಎಂತಹ ಪತಿತ

ನಾದರೂ ಉದ್ಧಾರವಾಗುವ ಸಂಭವವಿರುವುದೆಂದು ವಾದಿಸಬಾರದೇಕೆ? ಕಾಮಭಕ್ತನಾದವನ ಮೇಲೆ ದೇವರು ಅಷ್ಟು ಕರುಣೆಯನ್ನಿಟ್ಟರೆ, ಇತರರೆಲ್ಲರಮೇಲೂ ಆತನ ದಯೆಯ ಕಿರಣವು ಬಿದ್ದೇಬೀಳಬೇಕು!

ನನ್ನ ಅಪೂರ್ಣತೆಯ ಜ್ಞಾನದಿಂದ ಓಮ್ಮೆಟ್ಟಿದ (ಲೇಖಕ) ಸ್ನೇಹಿತರು ಎಂದಿಗೂ ಮುಂದಕ್ಕೆ ಹೆಜ್ಜೆಯಿಟ್ಟವರಾಗಿರಲಾರರು. ಮೊದಲನೆಯ ಪೆಟ್ಟಿಗೇ ನೆಲಕ್ಕುರುಳುವ ಸದ್ಗುಣವು ನಿಜವಾದುದಲ್ಲ. ಬ್ರಹ್ಮಚರ್ಯ ವಿಚಾರದ ತತ್ವಗಳೂ ಸಾಧನೆಗಳೂ, ಅಂತೆಯೆ ಇತರ ಶಾಶ್ವತ ತತ್ವಸೂತ್ರಗಳೂ ನನ್ನಂತಹ ಅಪೂರ್ಣ ಮನುಷ್ಯರನ್ನವಲಂಬಿಸಿಕೊಂಡಿಲ್ಲ. ಅವುಗಳಿಗಾಗಿ ಹೋರಾಡುತ್ತ, ಅವುಗಳ ಸಂಪೂರ್ಣ ಅನುಷ್ಠಾನದಲ್ಲಿ ಮಗ್ನರಾಗಿದ್ದ ಹಲವರ ತಪಸ್ಸಿನ ದೃಢವಾದ ತಳಹದಿಯಮೇಲೆ ಅವು ನಿಂತಿರುವವು. ಪೂರ್ಣತ್ವವನ್ನೈದಿದ ಆ ಶ್ರೇಷ್ಠಜೀವಿಗಳೊಂದಿಗೆ ನಾನು ನಿಲ್ಲುವ ಯೋಗ್ಯತೆಯು ಬಂದಾಗ ಈಗಿನಗಿಂತಲೂ ನನ್ನ ಭಾಷೆಯಲ್ಲಿ ಹೆಚ್ಚು ದೃಢಸಂಕಲ್ಪವೂ ಶಕ್ತಿಯೂ ಪ್ರವಹಿಸುವುದು. ಯಾವನ ಮನಸ್ಸು ಚಂಚಲವಾಗಿರುವುದಿಲ್ಲವೊ, ದುರಾಲೋಚನೆಯನ್ನು ಮಾಡುವುದಿಲ್ಲವೊ, ಯಾವನು ಸ್ವಪ್ನರಹಿತನಾಗಿ ನಿದ್ರಿಸುವನೊ ನಿದ್ರೆಯಲ್ಲಿಯೂ ಪೂರ್ಣ ಜಾಗ್ರತನಾಗಿರುವನೊ ಅಂತಹನೇ ನಿಜವಾಗಿ ಆರೋಗ್ಯವಂತನೆನ್ನಬೇಕು. ಅವನು ಕ್ವಿನೈನ್ (ಔಷಧಿ) ತೆಗೆದುಕೊಳ್ಳಬೇಕಾಗಿಲ್ಲ. ಅವನಾ ಪರಿಶುದ್ಧವಾದ ರಕ್ತವು ಎಲ್ಲ ಬಗೆಯ ಸೋಂಕು ರೋಗಗಳ ಕ್ರಿಮಿಗಳನ್ನೂ ಎದುರಿಸುವ ಶಕ್ತಿಯುಳ್ಳುದಾಗಿರುವುದು. ನನಗೂ ಅಂತಹ ಪೂರ್ಣಾರೋಗ್ಯದ ದೇಹವೂ ಮನಸ್ಸೂ ಆತ್ಮವೂ ಲಭಿಸಬೇಕೆಂದು ನಾನು ಹೆಣಗಾಡುತ್ತಿರುವೆನು. ಈ ಪ್ರಯತ್ನದಲ್ಲಿ ಸೋಲಿನ ಸೊಲ್ಲೇ ಇಲ್ಲ. ಹಿಂದೆ ಹೇಳಿದ ಲೇಖಕನೂ ವಿಶ್ವಾಸಹೀನರಾದ ಅವನ ಸ್ನೇಹಿತರೂ ಇತರರೂ ಈ ಪ್ರಯತ್ನದಲ್ಲಿ ನನ್ನೊಂದಿಗೆ ಸೇರಬೇಕೆಂದು ಕರೆಯುವೆನು. ಮತ್ತು ಅವರು ಆ ಲೇಖಕನಂತೆ ನನಗಿಂತಲೂ ಜಾಗ್ರತೆಯಾಗಿ ಮುಂದುವರಿಯುವಂತಾಗಲೆಂದು ಹಾರೈಸುತ್ತೇನೆ. ಇನ್ನೂ ಹಿಂದುಳಿದವರಲ್ಲಿ ನನ್ನ ಉದಾಹರಣೆಯಿಂದ ಹೆಚ್ಚು ವಿಶ್ವಾಸಪ್ರೇರಣೆಯಾಗಲಿ!

ನಾನು ಇಷ್ಟು ದುರ್ಬಲನಾಗಿದ್ದರೂ, ಕಾಮದೋಷಕ್ಕೊಳಗಾಗುವವನಾಗಿದ್ದರೂ, ನನ್ನ ನಿರಂತರ ಪ್ರಯತ್ನದಿಂದಲೂ ಭಗವದನುಗ್ರಹದಲ್ಲಿರುವ ಅಪಾರವಾದ ವಿಶ್ವಾಸದಿಂದಲೂ ನನಗೆ ಇಷ್ಟು ಲಾಭವುಂಟಾಗಿದೆ.

ಆದುದರಿಂದ ಯಾರೂ ನಿರಾಶರಾಗಕೂಡದು. ನನ್ನ ಮಹಾತ್ಮಗಿರಿಯು ನಿಷ್ಪ್ರಯೋಜನಕರವಾದುದು. ಅದು ಕೇವಲ ನನ್ನ ಬಹಿರಂಗ ಕ್ರಿಯೆಯಿಂದ, ನನ್ನ ಕರ್ತವ್ಯದ ಒಂದು ಅಲ್ಪ ಭಾಗವಾದ ರಾಜನೀತಿಯಿಂದ ಹುಟ್ಟಿದುದು. ಆದ್ದರಿಂದ ಅದು ಕ್ಷಣಿಕವಾದುದು. ನನ್ನ ಮುಖ್ಯಾಂಗವಾಗಿರುವ ಸತ್ಯ, ಅಹಿಂಸೆ, ಮತ್ತು ಬ್ರಹ್ಮಚರ್ಯ ವಿಚಾರಗಳ ಫಲದ ಬಲವೇ ಶಾಶ್ವತಯೋಗ್ಯತೆಯುಳ್ಳದಾಗಿರುವುದು. ಈ ಶಾಶ್ವತಾಂಗದ ಪರಿಮಾಣವು ಎಷ್ಟು ಅಲ್ಪವಾಗಿದ್ದರೂ ಅದನ್ನು ತಿರಸ್ಕರಿಸಲಾಗದು. ಅದೇ ಸಕಲ ಸಂಪತ್ತು. ವಿಜಯಕ್ಕೆ ಸೋಪಾನದಂತಿರುವ, ಅಪಜಯ ಮತ್ತು ಮಾಯದ ನಿವೃತ್ತಿಗಳನ್ನು ಕೂಡ ನಾನು ವಿಶೇಷವಾಗಿ ಆದರಿಸುವೆನು.

## ೮. ಪವಿತ್ರತೆ

ಬ್ರಹ್ಮಚರ್ಯ ಮತ್ತು ಅದರ ಸಿದ್ಧಿಯ ಉಪಾಯಗಳನ್ನು ಸೂಚಿಸಬೇಕೆಂಬ ವಿಚಾರದಲ್ಲಿ ನನಗೆ ಸಾವಿರಾರು ಪತ್ರಗಳು ಬರುತ್ತಲಿವೆ. ನಾನು ಈ ಮುಂಚೆ ಹೇಳಿದ ಅಥವಾ ಲೇಖನದ ಮೂಲಕ ತಿಳಿಸಿದ ಸಂಗತಿಗಳನ್ನೆ ಬೇರೆ ಶಬ್ದಗಳಿಂದ ವಿವರಿಸುವೆನು. ಬ್ರಹಚರ್ಯೆಯೆಂದರೆ ಕೇವಲ ಯಂತ್ರದಂತೆ ಆಚರಿಸುವ ಕುಮಾರವ್ರತವಲ್ಲ. ಎಲ್ಲ ಇಂದ್ರಿಯಗಳನ್ನು ಸಂಪೂರ್ಣವಾಗಿ ನಿಗ್ರಹಿಸಿ, ಮನೋವಾಕ್‌ಕ್ರಿಯೆಗಳಲ್ಲಿ ಕಾಮುಕ ವಿಚಾರದಿಂದ ಮುಕ್ತವಾಗಿರುವುದೇ ಬ್ರಹ್ಮಚರ್ಯೆಯೆನಿಸುವುದು. ಆದುದರಿಂದ ಬ್ರಹ್ಮಸಿದ್ಧಿ ಅಥವಾ ಆತ್ಮಜ್ಞಾನಕ್ಕೆ ಅದುವೇ ರಾಜಮಾರ್ಗವಾಗಿರುವುದು.

* ೧೯೨೬ನೆಯ ಸಾಲಿನ ಏಪ್ರಿಲ್ ೨೯ನೆಯ ತಾರೀಖಿನ ಯಂಗ್ ಇಂಡಿಯಾ ಪತ್ರಿಕೆಯ ಲೇಖನದ ಅನುವಾದ. ಆಗ ಇದು ಬ್ರಹ್ಮಚರ್ಯೆಯೆಂಬ ಶಿರೋನಾಮದಿಂದ ಪ್ರಕಟವಾಗಿದ್ದಿತು.

ಧ್ಯೇಯಾತ್ಮಕ ಬ್ರಹ್ಮಚಾರಿಯು ಸಂತಾನೋತ್ಪಾದನೆಯ ಆಸೆಯಿಂದಾಗಲಿ, ಸಂಭೋಗೇಚ್ಛೆಯಿಂದಾಗಲಿ ಪೀಡಿತನಾಗಿರುವುದಿಲ್ಲ. ಅದು ಅವನನ್ನೆಂದಿಗೂ ಬಾಧಿಸಲಾರದು. ಸಮಗ್ರ ಪ್ರಪಂಚವೇ ಅವನಿಗೆ ಒಂದು ದೊಡ್ಡ ಆಸೆಯಾಗಿರುವುದು. ಸಂತಾನೋತ್ಪಾದನೆಯ ಆಸೆಯು ಅವನಿಗೆ ರುಚಿಸದು. ಮಾನವ ಜಾತಿಯ ಸಂಕಷ್ಟಗಳನ್ನು ಸಂಪೂರ್ಣವಾಗಿ ಅರಿತವನು ಕಾಮೇಚ್ಛೆಯಿಂದ ಎಂದಿಗೂ ಉದ್ರೇಕಗೊಳ್ಳಲಾರನು. ಅವನು ತನ್ನಲ್ಲಿ ಗುಪ್ತವಾಗಿರುವ ಶಕ್ತಿಮೂಲವನ್ನು ನೈಸರ್ಗಿಕವಾಗಿಯೆ ಕಂಡುಕೊಳ್ಳುವನು. ಅದು ಅಪವಿತ್ರವಾಗದಂತೆ ಕಾಪಾಡಿಕೊಳ್ಳಲು ಅವನು ಯಾವಾಗಲೂ ನಿಷ್ಕಾಮಮಗ್ನನಾಗಿರುವನು. ಅವನ ವಿನಯಸಂಪನ್ನವಾದ ಶಕ್ತಿಯು ಸಮಗ್ರಪ್ರಪಂಚದ ಸನ್ಮಾನವನ್ನು ಹೊಂದುವುದು. ಅವನು ಅಧಿಕಾರಯುಕ್ತನಾದ ಅರಸನಿಗಿಂತಲೂ ಹೆಚ್ಚಾದ ಗೌರವಕ್ಕೆ ಪಾತ್ರನಾಗುವನು.

ಇದು ಸಾಧ್ಯವಾದ ಧ್ಯೇಯವೆಂತಲೂ ಸ್ತ್ರೀಪುರುಷರಲ್ಲಿರುವ ಪರಸ್ಪರ ಆಕರ್ಷಣ ವಿಚಾರವನ್ನು ನಾನು ಗಮನಿಸುತ್ತಿಲ್ಲವೆಂತಲೂ ಜನರು ಹೇಳುತ್ತಿರುವರು. ಆದರೆ ಇಲ್ಲಿ ಹೇಳಿದ ಕಾಮುಕ ವಿಚಾರ ಸಂಬಂಧವು ಸ್ವಾಭಾವಿಕವಾದುದೆಂದು ನಾನು ನಂಬುವುದೇ ಇಲ್ಲ. ಅದು ಸ್ವಾಭಾವಿಕವಾಗಿದ್ದರೆ ಪ್ರಳಯಕಾಲವು ಸಮಿಾಪಿಸಿತೆಂತಲೇ ಹೇಳಬೇಕಾಗುವುದು. ಸ್ತ್ರೀಪುರುಷರ ನೈಸರ್ಗಿಕ ಸಂಬಂಧವು ಸೋದರ ಸೋದರಿ, ತಾಯಿಮಗ ಅಥವಾ ತಂದೆಮಗಳ ಪರಸ್ಪರ ಆಕರ್ಷಣವನ್ನು ಹೋಲುವುದಾಗಿರುವುದಾಗಿರುವುದು. ಈ ಬಗೆಯ ನೈಸರ್ಗಿಕ ಸಂಬಂಧವೇ ಪ್ರಪಂಚವನ್ನು ಸಂರಕ್ಷಿಸುತ್ತಿರುವುದು. ಸ್ತ್ರೀಯರನ್ನೆಲ್ಲ ಸೋದರಿಯರು, ಮಕ್ಕಳು ಅಥವಾ ತಾಯಿಯರೆಂದು ನಾನು ಭಾವಿಸಲಾಗದಿದ್ದರೆ ಜೀವಿಸಿರುವುದಾಗಲಿ ಕೆಲಸಮಾಡುವುದಾಗಲಿ ನನ್ನಿಂದ ಸಾಧ್ಯವಾಗುತ್ತಿರಲಿಲ್ಲ! ಅವರನ್ನು ಕಾಮುಕ ದೃಷ್ಟಿಯಿಂದ ನೋಡಿದರೆ ನಾನು ಖಂಡಿತವಾಗಿಯೂ ಅಧೋಗತಿಯ ಮಾರ್ಗವನ್ನನುಸರಿಸಿದಂತಾಗುವುದು.

ಸಂತಾನೋತ್ಪಾದನೆಯು ಸ್ವಾಭಾವಿಕವಾದ ನೈಸರ್ಗಿಕ ವ್ಯವಹಾರವಾಗಿದೆ. ಆದರೆ ಅದಕ್ಕೂ ಮೇರೆ ಇದೆ. ಆ ಮೇರೆಯನ್ನು ಮೀರಿ ನಡೆದರೆ ಅದರಿಂದ ಸ್ತ್ರೀಜಾತಿಗೆ ಅಪಾಯ ಸಂಭವಿಸುವುದು, ಮಾನವ ಕುಲವು ನಪುಂಸಕತ್ವವನ್ನು ತಳೆಯುವುದು, ರೋಗವು ಬರುವುದು, ದುರಾಚಾರಕ್ಕೆ ಸಂಭಾವನೆ ದೊರೆತು, ಪ್ರಪಂಚವೇ ರಾಕ್ಷಸ ವೃತ್ತಿಯನ್ನು ತಳೆವುದು. ಕಾಮಪ್ರವೃತ್ತಿಯ ಬಲೆಯಲ್ಲಿ ಸಿಕ್ಕಿದವನು ಲಂಗರುಗಳಿಂದ ಮುಕ್ತವಾಗದ ದೋಣಿಯಂತಿರುವನು, ಅಂತಹನು ಸಮಾಜಕ್ಕೆ ಮಾರ್ಗದರ್ಶಕನಾಗಿ ತನ್ನ ಲೇಖನಗಳಿಗೆ ಮಾನವರು ತಲೆಬಾಗಿ ನಡೆದುಕೊಳ್ಳುವಂತೆ ಮಾಡಿದರೆ, ಆಗ ಸಮಾಜದ ಸ್ಥಿತಿಯೇನಾಗುವುದು? ಆದಾಗ್ಯೂ ಈಗ ಅಂತಹ ಸಂಗತಿಯೇ ಸಂಭವಿಸುತ್ತಿರುವುದು. ದೀಪದ ಸುತ್ತಲೂ ಹಾರಾಡುವ ಪತಂಗವು ತನ್ನ ತಾತ್ಕಾಲಿಕ ಆನಂದವನ್ನು ವರ್ಣಿಸಿದರೆ, ನಾವು ಅದೊಂದು ಆದರ್ಶವೆಂದು ಭಾವಿಸಿ ಅನುಕರಣೆ ಮಾಡುವುದಾದರೆ ನಮ್ಮ ಅವಸ್ಥೆಯೇನಾಗುವುದು ? ಸತಿಪತಿಯರ ಕಾಮುಕ ಆಕರ್ಷಣೆಯು ಕೂಡ ಅಸ್ವಾಭಾವಿಕವೆಂದು ನಾನು ನನ್ನಲ್ಲಿರುವ ಶಕ್ತಿಯನ್ನೆಲ್ಲ ಉಪಯೋಗಿಸಿ ಗಟ್ಟಿಯಾಗಿ ಕೂಗಿ, ಸಾರಿ, ಒತ್ತಿ ಹೇಳುವೆನು. ವಿವಾಹವು ದಂಪತಿಗಳ ಹೃದಯದಿಂದ ನಿಕೃಷ್ಟವಾದ ಕಾಮುಕ ವಿಚಾರವನ್ನೋಡಿಸಿ, ಅವರನ್ನು ಭಗವಂತನ ಸಾನ್ನಿಧ್ಯಕ್ಕೊಯ್ಯುವುದು. ಸತಿಪತಿಯರಲ್ಲಿ ಕಾಮುಕ ವಿಚಾರವಿಲ್ಲದಿರುವ ಪ್ರೇಮವಿರುವುದು ಅಸಾಧ್ಯವಲ್ಲ. ಮಾನವನು ಪಶುವಲ್ಲ. ಪಾಶವಿಕ ಸೃಷ್ಟಿಯಲ್ಲಿ ಹಲವು ಜನ್ಮಗಳನ್ನು ತಳೆದು ಅವನು ಈಗಿನ ಉತ್ತಮಸ್ಥಿತಿಯನ್ನು ಹೊಂದಿರುವನು. ಅವನು ಎರಡುಕಾಲಮೇಲೆ ನಿಂತಿರುವಂತೆ ಸೃಷ್ಟಿಸಲ್ಪಟ್ಟಿರುವನು, ನೆಲದಮೇಲೆ ತೆವಳುವುದಕ್ಕಾಲಿ, ಚತುಷ್ಪಾದ ಜೀವಿಯಂತಿರುವುದಕ್ಕಾಗಲಿ ಸೃಷ್ಟಿಸಲ್ಪಟ್ಟಿಲ್ಲ. ಆತ್ಮಕ್ಕೂ ಭೌತಿಕ ವಸ್ತುವಿಗೂ ಇರುವಷ್ಟು ವ್ಯತ್ಯಾಸದಂತೆಯೆ ಮನುಷ್ಯತ್ವಕ್ಕೂ ಕಾಮುಕತ್ವಕ್ಕೂ ವಿಶೇಷ ಅಂತರವಿರುವುದು.

ಅದರ ಸಿದ್ಧಿಗಾಗಿ ಮಾಡಬೇಕಾದ ಸಾಧನೆಗಳನ್ನು ಕುರಿತು ಸಂಕ್ಷಿಪ್ತವಾಗಿ ವರ್ಣಿಸಿ ಈ ಲೇಖನವನ್ನು ಮುಗಿಸುವೆನು.

ಆದರ ಅವಶ್ಯಕತೆಯನ್ನರಿತುಕೊಳ್ಳುವುದೇ ಮೊದಲನೆಯ ಕೆಲಸ ವಾಗಿರುವುದು.

ಕ್ರಮವಾಗಿ ಇಂದ್ರಿಯಗಳನ್ನು ಸ್ವಾಧೀನಪಡಿಸಿಕೊಳ್ಳುವುದೇ ಎರಡನೆಯ ಕೆಲಸವು. ಬ್ರಹ್ಮಚಾರಿಯು ರಸನೇಂದ್ರಿಯವನ್ನು ನಿಗ್ರಹಿಸಲೇಬೇಕು. ಅವನು ಜೀವಿಸಿರುವುದಕ್ಕೆ ಬೇಕಾದಷ್ಟೇ ಆಹಾರ ತೆಗೆದುಕೊಳ್ಳಬೇಕಲ್ಲದೆ ಸುಖಕ್ಕಾಗಿ ತಿನ್ನಬಾರದು. ಅವನು ಕೇವಲ ಪವಿತ್ರ ವಸ್ತುಗಳನ್ನೆ ನೋಡಬೇಕು. ದೃಷ್ಟಿಯನ್ನು ಒಂದು ಕಡೆಯಿಂದ ಮತ್ತೊಂದುಕಡೆಗೆ ತಿರುಗಿಸದಂತೆ ನೆಲವನ್ನೆ ನೋಡುವಂತೆ ದೃಷ್ಟಿಯನ್ನು ತಗ್ಗಿಸಿಕೊಂಡು ನಡೆಯುವುದು ಸಭ್ಯಮರ್ಯಾದೆಯ ಚಿನ್ಹೆಯಾಗಿರುವುದು, ಹಾಗೆಯೆ ಅವಾಚ್ಯವೂ ಅಪವಿತ್ರವೂ ಆದ ಮಾತುಗಳನ್ನು ಕೇಳಕೂಡದು. ಬಲವಾದ ವಾಸನೆಯುಳ್ಳ ಉದ್ರೇಕಕರವಾದ ವಸ್ತುಗಳನ್ನು ಮೂಸಬಾರದು. ಎಲ್ಲ ಬಗೆಯ ಕೃತ್ರಿಮ ಸುಗಂಧದ್ರವ್ಯಗಳ ಸುವಾಸನೆಗಿಂತಲೂ ಶುದ್ಧವಾದ ಮಣ್ಣಿನ ವಾಸನೆಯು ಅಧಿಕ ಮಧುರವಾಗಿರುವುದು. ಬ್ರಹ್ಮಚಾರಿಯಾಗಿರಲು ಅಪೇಕ್ಷಿಸುವವನು ತಾನು ಜಾಗ್ರದಾವಸ್ಥೆಯಲ್ಲಿರುವಾಗ ತನ್ನ ಅವಯವಗಳನ್ನು ಆರೋಗ್ಯದಾಯಕವಾದ ಕಾರ್ಯಗಳಲ್ಲಿ ತೊಡಗಿಸಬೇಕು. ಮತ್ತೆ ಆಗಿಂದಾಗ್ಗೆ ಉಪವಾಸವನ್ನಾಚರಿಸಬೇಕು.

ಸರಳಹೃದಯರಾದ ಒಡನಾಡಿಗಳನ್ನೂ, ಪರಿಶುದ್ಧರಾಗಿರುವ ಸ್ನೇಹಿತರನ್ನೂ ಪವಿತ್ರವಾದ ಪುಸ್ತಕಗಳನ್ನೂ ಸಂಗ್ರಹಿಸುವುದು ಮೂರನೆಯ ಮೆಟ್ಟಿಲಾಗಿರುವುದು.

ಕೊನೆಯ ಮೆಟ್ಟಿಲೆಂದರೆ ಪ್ರಾರ್ಥನೆ. ಪ್ರತಿದಿನವೂ ತಪ್ಪದೇ ಮನಃಪೂರ್ವಕವಾಗಿ ಅವನು ರಾಮನಾಮವನ್ನು ಜಪಿಸಬೇಕು. ಭಗವದನುಗ್ರಹಕ್ಕಾಗಿ ಪ್ರಾರ್ಥಿಸಬೇಕು.

ಈ ಸಾಧನೆಗಳಲ್ಲಿ ಸಾಮಾನ್ಯ ಸ್ತ್ರೀಗಾಗಲಿ ಪುರುಷನಿಗಾಗಲಿ ಅಸಾಧ್ಯವಾದುದಾವುದೂ ಇಲ್ಲ. ಅವುಗಳೆಲ್ಲ ಸರಳತೆಯ ಪ್ರತಿಮೂರ್ತಿಯಂತಿರುವವು. ಆದರೆ ಅವುಗಳ ಅಧಿಕ ಸರಳತೆಯೆ ನಮ್ಮನ್ನು ಗಾಬರಿಪಡಿಸುತ್ತಿರುವುದು. ಮನಸಿದ್ದವರಿಗೆ ಈ ಮಾರ್ಗವು ಸುಲಭಸಾಧ್ಯ

ವಾಗಿದೆ. ಪುರುಷರಿಗೆ ಅದರಲ್ಲಿ ಇಚ್ಛೆಯಿಲ್ಲ. ಆದುದರಿಂದಲೆ ಅವರು ತೆಡವರಿಸುತ್ತಿರುವರು. ಈ ಪ್ರಪಂಚಕ್ಕೆ ಸಾಮಾನ್ಯವಾಗಿ ಬ್ರಹ್ಮಚರ್ಯಸಾಧನೆ ಅಥವಾ ಇಂದ್ರಿಯ ನಿಗ್ರಹವೇ ಆಧಾರವಾಗಿರುವುದೆಂಬ ಸಂಗತಿಯಿಂದ ಅದು (ಬ್ರಹ್ಮಚರ್ಯೆಯು) ಅವಶ್ಯಕವಾದುದೆಂತಲೂ, ಕರ್ತವ್ಯವೆಂತಲೂ, ಸುಸಾಧ್ಯವಾದುದೆಂತಲೂ ತಿಳಿದುಬರುವುದು.

## ೯. ಗುಟ್ಟಿನ ಮಾತುಗಳು *

ಕುಮಾರ ವ್ರತದ ವಿಚಾರವಾಗಿ ನನಗೆ ಅನೇಕ ಪತ್ರಗಳು ಬರುತ್ತಲಿವೆ. ಈ ವಿಚಾರದಲ್ಲಿ ನಾನು ಕೆಲವು ದೃಢವಾದ ಅಭಿಪ್ರಾಯಗಳನ್ನುಳ್ಳವನಾಗಿರುವೆನು. ಈಗ ಅದರಲ್ಲಿಯೂ ಮುಖ್ಯವಾಗಿ ಜನಜೀವನದ ಈಗಿನ ವಿಶೇಷ ವಿಪತ್ಸಮಯದಲ್ಲಿ, ನನ್ನ ಅಭಿಪ್ರಾಯಗಳನ್ನೂ ನನ್ನ ಅನುಭವದ ಫಲಗಳನ್ನೂ ನಾನು **ಯಂಗ್ ಇಂಡಿಯದ** ವಾಚಕರಿಗೆ ತಿಳುಹಿಸದಿರಲಾರೆನು.

ಕುಮಾರವ್ರತಕ್ಕೆ ಬ್ರಹ್ಮಚರ್ಯೆಯೆಂಬ ಮತ್ತೊಂದು ಹೆಸರು ಇರುವುದು. ಮೊದಲನೆಯ ಪದಕ್ಕಿಂತಲೂ ಎರಡನೆಯ ಪದವು ವಿಶೇಷ ಅರ್ಥಗರ್ಭಿತವಾದುದು. ಬ್ರಹ್ಮಚರ್ಯೆಯೆಂದರೆ ಎಲ್ಲ ಇಂದ್ರಿಯ ಮತ್ತು ಅವಯವಗಳನ್ನು ಸಂಪೂರ್ಣ ಸ್ವಾಧೀನದಲ್ಲಿಟ್ಟುಕೊಂಡಿರುವುದೆಂದರ್ಥ. ಅಖಂಡ ಬ್ರಹ್ಮಚಾರಿಗೆ ಅಸಾಧ್ಯವಾದುದಾವುದೂ ಇಲ್ಲ. ಆದರೆ ಅದು ಅಪರೂಪವಾಗಿ ಸಿದ್ಧಿಸುವ ಧ್ಯೇಯಾತ್ಮಕ ಸ್ಥಿತಿಯಾಗಿರುವುದು. ಗಾತ್ರವಿಲ್ಲದೆ ಉದ್ದವಾಗಿ ಎಳೆದು ತೋರಿಸುವ ರೇಖಾಗಣಿತದ ಕಾಲ್ಪನಿಕ ಗೆರೆಯಂತೆಯೆ ಅದು ವರ್ಣನಾತೀತವಾಗಿದೆ. ಆದರೆ ರೇಖಾಗಣಿತದಲ್ಲಿ ರೇಖೆಯ ಮುಖ್ಯವಾದ ಈ ನಿರೂಪಣೆಯಿಂದ ಅನೇಕ ಸಮಸ್ಯೆಗಳನ್ನು ಬಿಡಿಸಲಾಗುವುದು. ಅದರಂತೆಯೆ ಅಖಂಡಬ್ರಹ್ಮಚಾರಿಯೂ ಕಾಲ್ಪನಿಕ ವ್ಯಕ್ತಿಯಾಗಿರಬಹುದು.

* ೧೯೨೦ ನೆಯ ಸಾಲಿನ **ಅಕ್ಟೋಬರ್** ೧೩ ನೆಯ ತಾ|| **ಯಂಗ್ ಇಂಡಿಯ** ಲೇಖನದಿಂದ.

ಆದರೆ ಯಾವಾಗಲೂ ಅವನ ಆದರ್ಶವನ್ನು ನಮ್ಮ ಮನಸ್ಸಿನಲ್ಲಿಟ್ಟುಕೊಂಡಿರದಿದ್ದರೆ ನಾವು ಚುಕ್ಕಾಣಿಯಿಲ್ಲದ ಹಡಗಿನಂತಾಗುವೆವು. ಕಾಲ್ಪನಿಕ ಸ್ಥಿತಿಯನ್ನು ಸಮೀಪಿಸಿದಂತೆಲ್ಲ ಪೂರ್ಣಾವಸ್ಥೆಯೂ ಸಮೀಪಿಸುತ್ತ ಹೋಗುವುದು.

ಆದರೆ ಈಗ ನಾನು ಕುಮಾರ ವ್ರತವೆಂಬ ಅರ್ಥದಲ್ಲಿ ಬ್ರಹ್ಮಚರ್ಯೆಯ ಅನುಷ್ಠಾನವನ್ನು ಕುರಿತು ಬರೆಯುವೆನು. ಆತ್ಮವು ಪೂರ್ಣಾವಸ್ಥೆಯನ್ನೈದುವುದಕ್ಕೆ ಮನೋವಾಕ್‌ಕ್ರಿಯೆಗಳಲ್ಲಿ ಸಂಪೂರ್ಣ ನಿಗ್ರಹವನ್ನಾಚರಿಸುವ ಜೀವನಕ್ರಮವು ಅತ್ಯಾವಶ್ಯಕವೆಂದು ನಾನು ಅಭಿಪ್ರಾಯ ಪಡುವೆನು. ಅಂತಹ ಪುರುಷರಿಲ್ಲದಿರುವ ಜನಾಂಗವು ಆ ಕೊರತೆಯಿಂದ ನ್ಯೂನತೆಯುಳ್ಳುದಾಗಿರುವುದು. ಆದರೆ ಜನಾಂಗದ ಈಗಿನ ಉತ್ಕ್ರಾಂತಿಯ ಅವಸ್ಥೆಯಲ್ಲಿ ಬ್ರಹ್ಮಚರ್ಯೆಯನ್ನು ಅಲ್ಪಕಾಲದವರೆಗಾದರೂ ಆಚರಿಸಬೇಕಾಗಿದೆಯೆಂದು ಸಿದ್ಧಾಂತಪಡಿಸುವುದೇ ನನ್ನ ಉದ್ದೇಶ್ಯವಾಗಿದೆ.

ನಮ್ಮಲ್ಲಿ ರೋಗ, ಕ್ಷಾಮ, ಬಡತನ,—ಮಿಲಿಯಗಟ್ಟಲೆ ಜನರಲ್ಲಿ ಉಪವಾಸ-ಇವೇ ಮುಂತಾದವು ಬೇಕಾದಷ್ಟಿವೆ. ನಮ್ಮ ಗುಲಾಮಗಿರಿಯನ್ನು ನಾವೇ ನಂಬದೇ ತಿರಸ್ಕರಿಸುವಷ್ಟು ಸೂಕ್ಷ್ಮರೀತಿಯಿಂದ ಗುಲಾಮಗಿರಿಯಲ್ಲಿಯೆ ನಮ್ಮ ದೇಹವು ಕ್ಷಯಿಸುತ್ತಿರುವುದು. ಇದನ್ನು, ನಾವು ಒಪ್ಪಿಕೊಳ್ಳದೇ, ಆರ್ಥಿಕ, ಮಾನಸಿಕ ಮತ್ತು ನೈತಿಕ ನಾಶಗಳೆಂಬ ಮೂರು ಶಾಪಗಳಿಗೊಳಗಾಗಿದ್ದರೂ, ನಾವು ಪ್ರಾಗತಿಕ ಸ್ವಾತಂತ್ರ್ಯಾವಸ್ಥೆಯಲ್ಲಿರುವೆವೆಂಬ ಭ್ರಮೆಯಲ್ಲಿ ಮಗ್ನರಾಗಿರುವೆವು. ನಮ್ಮ ದೇಶದಲ್ಲಿ ದಿನದಿನಕ್ಕೂ ಹೆಚ್ಚುತ್ತಿರುವ ಸೈನಿಕ ಖಾತೆಯ ವೆಚ್ಚ, ಲಂಕಾಷೈರ್ ಮತ್ತು ಇತರ ಬ್ರಿಟಿಷ ಸಂಘಗಳ ಹಿತವುಂಟಾಗುವಂತೆ ಉದ್ದೇಶ್ಯ ಪೂರ್ವಕವಾಗಿ ರಚಿಸಲ್ಪಟ್ಟಿರುವ ಅಪಾಯಕರವಾದ ರಾಜಾದಾಯದ ತತ್ವ, ಮತ್ತು ಸರಕಾರದ ಹಲವು ಖಾತೆಗಳನ್ನು ನಡೆಯಿಸುವುದಕ್ಕಾಗಿ ಮಾಡುವ ಸರಕಾರದ ದುಂದು ವೆಚ್ಚ— ಇವುಗಳ ಹೊರೆಯು ದೇಶದಮೇಲೆ ಬಿದ್ದು ಹಿಂದುಸ್ಥಾನದ ಬಡತನವನ್ನು ಹೆಚ್ಚಿಸಿ, ರೋಗಗಳನ್ನೆದುರಿಸುವ ಅದರ ಶಕ್ತಿಯನ್ನು ಹೀರಿಬಿಟ್ಟಿರು

ವುದು. ದಿವಂಗತ ಗೋಖಲೆಯವರ ಮಾತುಗಳಲ್ಲಿ ಹೇಳಬೇಕಾದರೆ ಈ ದೇಶದ ಆಡಳಿತಪದ್ಧತಿಯು, ನಮ್ಮಲ್ಲಿ ಅತಿ ಉದ್ಧವಾದವನು ಕೂಡ ತಲೆ ಬೆನ್ನು ಬಾಗಿಸುವಂತೆ, ನಮ್ಮ ಜನಾಂಗದ ಬೆಳವಣಿಗೆ ಯನ್ನು ಕುಗ್ಗಿಸಿರುವುದು. ಅಮೃತಸರದಲ್ಲಿ ಜನರಲ್ ಡಾಯರನು ನಮ್ಮ ದೇಶದವರನ್ನು ಹೊಟ್ಟೆಯಮೇಲೆ ತೆವಳಿಕೊಂಡು ಹೋಗು ವಂತೆ ಮಾಡಲಿಲ್ಲವೆ! ಬೇಕೆಂದೇ ಮಾಡಿದ ಪಂಜಾಬಿನ ಅವಮಾನವು ನಮ್ಮ ನೈತಿಕನಾಶದ ಈಗಿನ ಉದಾಹರಣೆಯಾಗಿರುವುದು. ಅದ ರಿಂದ ನಮ್ಮಲ್ಲಿರುವ ಆತ್ಮಕ್ಕೆ ಘಾತವುಂಟಾಗುತ್ತಿರುವುದು. ಈ ಬಗೆಯ ಅನ್ಯಾಯಗಳಿಗೆ ನಾವು ತಲೆಬಾಗಿ ನಡೆದರೆ ನಮ್ಮ ಪುರುಷತ್ವವು ಸಂಪೂರ್ಣವಾಗಿ ನಾಶವಾಗುವ ಕಾಲ ಬಂದಿತೆಂದು ಹೇಳಬಹುದು.

ಈಗ ನಾನು ವರ್ಣಿಸಿರುವ ದುಸ್ಥಿತಿಯನ್ನರಿತ ನಾವು ಇಂತಹ ನೀಚವಾತಾವರಣದಲ್ಲಿ ಸಂತಾನೋತ್ಪಾದನೆ ಮಾಡುವುದು ನ್ಯಾಯವೆ? ನಾವು ಅಸಹಾಯರಾಗಿಯೂ, ರೋಗಯುಕ್ತರಾಗಿಯೂ, ಕ್ಷಾಮಪೀಡಿತ ರಾಗಿಯೂ ಇರುವಾಗ ಸಂತಾನೋತ್ಪಾದನೆಯನ್ನು ಮುಂದುವರಿಸಿ ದರೆ ದುರ್ಬಲರ ಮತ್ತು ಗುಲಾಮರ ಸಂಖ್ಯೆಯನ್ನು ನಾವಾಗಿಯೆ ಹೆಚ್ಚಿಸಿದಂತಾಗುವುದಿಲ್ಲವೆ? ಹಿಂದೂದೇಶವು ಸ್ವತಂತ್ರ ಜನಾಂಗವಾ ಗುವವರೆಗೆ, ಈ ದೇಶವು ನಿವಾರಿಸಲು ಸಾಧ್ಯವಾದ ಹಸಿವನ್ನು ತಡೆದು ಕೊಳ್ಳುವ ಶಕ್ತಿಯನ್ನು ಪಡೆಯುವವರೆಗೆ, ಕ್ಷಾಮಕಾಲದಲ್ಲಿ ತನ್ನ ಪೋಷಣೆಮಾಡಿಕೊಳ್ಳುವ ಶಕ್ತಿಯನ್ನು ಹೊಂದುವವರೆಗೆ, ಮಲೇ ರಿಯ, ಕಾಲರಾ (ಪಟಕೀಬೇನೆ), ಇನ್‌ಪ್ಲೂಎಂಝೂ ಮೊದಲಾದ ಸುಂಕುರೋಗಗಳನ್ನು ನಿವಾರಿಸುವ ಜ್ಞಾನವನ್ನು ಹೊಂದುವವರೆಗೆ, ಸಂತಾನೋತ್ಪಾದನೆ ಮಾಡುವ ಹಕ್ಕು ನಮಗಿರುವುದಿಲ್ಲ. ಈ ದೇಶ ದಲ್ಲಿ ಮಕ್ಕಳು ಹುಟ್ಟಿದರು ಎಂದು ಕೇಳಿದ ಕೂಡಲೆ ನನಗಾಗುವ ದುಃಖವನ್ನು ನಾನು ಮುಚ್ಚಿಡಲಾರೆನು. ಆತ್ಮಪ್ರೇರಿತ ನಿರಾಕರಣೆ ಯಿಂದ ಸಂತಾನೋತ್ಪಾದನೆಯನ್ನು ನಿಲ್ಲಿಸುವುದರ ಪ್ರಯೋಜನ ವನ್ನು ಕುರಿತು ಹಲವು ವರ್ಷಗಳಿಂದಲೂ ಚಿಂತಿಸಿರುವೆನು. ಅದರ ಉಪಯುಕ್ತತೆಯ ವಿಚಾರದಲ್ಲಿ ನಾನು ಸಂತುಷ್ಟನಾಗಿರುವೆನು. ಈಗಿ

ರುವ ಜನಸಂಖ್ಯೆಯನ್ನು ಕೂಡ ರಕ್ಷಿಸಿಕೊಳ್ಳಲು ಹಿಂದೂಸ್ಥಾನಕ್ಕೆ ಈಗ ಅನುಕೂಲತೆಯಿಲ್ಲವಾಗಿದೆ. ಇದಕ್ಕೆ ಜನಸಂಖ್ಯೆಯು ಹೆಚ್ಚಾಗಿರುವುದು ಕಾರಣವಾಗಿಲ್ಲ. ಆದರೆ ಈ ದೇಶದ ದ್ರವ್ಯಸಂಪತ್ತಿಯನ್ನು ಅನುಕ್ರಮವಾಗಿ ಲೂಟಿಮಾಡುವ ಉದ್ದೇಶ್ಯದಿಂದ ನಮ್ಮನ್ನಾಳುತ್ತಿರುವ ಪರಕೀಯರ ಆಳಿಕೆಗೆ ಗುರಿಯಾಗಿರುವುದೇ ಇದರ ಕಾರಣವಾಗಿದೆ.

ಸಂತಾನೋತ್ಪಾದನೆಯನ್ನು ವರ್ಜಿಸುವ ಪ್ರಯತ್ನವನ್ನು ಪ್ರಚಾರಪಡಿಸುವುದು ಹೇಗೆ? ಅದನ್ನು ನಿಯಮಪೂರ್ಣವಾದ ಜೀವನಕ್ರಮದಿಂದಲೂ ಆತ್ಮನಿಗ್ರಹದಿಂದಲೂ ಸಾಧಿಸಬೇಕೆ ವಿನಾ ಯೂರೋಪಿನಲ್ಲಿ ಅನುಸರಿಸುತ್ತಿರುವ ಅನೈತಿಕ ಮತ್ತು ಕೃತ್ರಿಮ ಉಪಾಯಗಳಿಂದ ಪ್ರಚಾರಪಡಿಸಕೂಡದು. ಮಕ್ಕಳಿಗೆ ತಂದೆತಾಯಿಯರು ಬ್ರಹ್ಮಚರ್ಯೆ ಸಾಧನೆಯನ್ನು ಹೇಳಿಕೊಡಬೇಕು. ಹಿಂದೂ ಶಾಸ್ತ್ರಾನುಸಾರವಾಗಿ ಬಾಲಕರು ಮದುವೆಯಾಗುವಾಗ ಕನಿಷ್ಠಪಕ್ಷಕ್ಕೆ ೨೫ ವರುಷ ವಯಸ್ಸಾದರೂ ಆಗಿರಬೇಕು. ಹಿಂದೂ ಮಾತೆಯರು ತಮ್ಮ ಬಾಲಕ ಬಾಲಿಕೆಯರನ್ನು ಮದುವೆಗಾಗಿ ತರಬೇತು ಮಾಡುವುದು ಪಾಪಕರವೆಂಬ ಅಭಿಪ್ರಾಯವನ್ನು ದೃಢಪಡಿಸುವುದಾದರೆ ಈಗಿನ ಮದುವೆಗಳ ಸಂಖ್ಯೆಯು ತಾನಾಗಿಯೆ ಅರ್ಧ ಕಡಿಮೆಯಾಗುವುದು. ನಮ್ಮ ದೇಶವು ಉಷ್ಣದೇಶವಾದುದರಿಂದ ಹುಡುಗಿಯರು ಬೇಗ ಋತುಮತಿಯರಾಗುವರೆಂಬ ಭ್ರಮೆಯಲ್ಲಿಯೂ ನಾವು ವಿಶ್ವಾಸವಿಡಕೂಡದು. ಬಾಲ ಋತುಮತಿ ಎನ್ನುವುದಕ್ಕಿಂತಲೂ ಬೇರೊಂದು ದೊಡ್ಡ ಭ್ರಾಂತಭಾವನೆಯು ಇರುವುದೆಂದು ನಾನು ನಂಬುವುದಿಲ್ಲ. ತಾರುಣ್ಯ (ಹರೆಯ) ವು ಆ ಕಾಲದಲ್ಲಿ ಬರುವುದಕ್ಕೆ ನಮ್ಮ ಸಾಂಸಾರಿಕ ಜೀವನದ ಸುತ್ತಮುತ್ತಲಿರುವ ಮಾನಸಿಕ ಮತ್ತು ನೈತಿಕ ವಾತಾವರಣವೇ ಕಾರಣವಾಗಿರುವುದು. ವಯಸ್ಸು ಬಂದ ಕೂಡಲೆ ಅವರಿಗೆ ಮದುವೆಯಾಗುವುದೆಂದು ತಾಯಿಯರೂ ಇತರ ಬಂಧುಗಳೂ ಮಕ್ಕಳಿಗೆ ಬೋಧಿಸುವರು ಅವರು ಶೈಶವಾವಸ್ಥೆಯಲ್ಲಿರುವಾಗಲೆ, ಹಲವೆಡೆಗಳಲ್ಲಿ ಇನ್ನೂ ಕೈಕೂಸುಗಳಾಗಿರುವಾಗಲೆ, ಮದುವೆಯ ನಿಶ್ಚಯ ತಾಂಬೂಲವನ್ನು ಕೊಟ್ಟುಬಿಡು

ವರು ಎಂದರೆ ವಾಜ್ಞಿಶ್ಚಯವನ್ನು ಮಾಡುವದು. ಕಾಮುಕ ವಿಚಾರಗಳನ್ನು ಉದ್ರೇಕಗೊಳಿಸುವುದರಲ್ಲಿ ಮಕ್ಕಳ ಆಹಾರ, ಉಡುಪುಗಳು ಕೂಡ ಕಾರಣವಾಗಿದೆ. ನಮ್ಮ ದೃಷ್ಟಿಸೌಖ್ಯಕ್ಕೂ ಹೆಮ್ಮೆಯನ್ನು ತೋರಿಸುವುದಕ್ಕೂ ನಾವು ಮಕ್ಕಳಿಗೆ ಬೊಂಬೆಯಂತೆ ಉಡುಪು ತೊಡಿಸುವೆವು. ಅವರ ಸುಖ ಅಥವಾ ಹಿತಕ್ಕಾಗಿ ನಾವು ಅವರಿಗೆ ಉಡುಪು ತೊಡಿಸುವುದಿಲ್ಲ. ನಾನು ಕೂಡ ಎಷ್ಟೋ ಮಕ್ಕಳನ್ನು ತರಬೇತು ಮಾಡಿದ್ದೇನೆ. ಅವರಿಗೆ ನಾವು ಯಾವ ಉಡುಪನ್ನು ಕೊಟ್ಟರೂ ಅವರು ಅವಕ್ಕೆ ಸಂತೋಷಪಡುವರು. ನಾವು ಅವರಿಗೆ ಉಷ್ಣಕರವೂ ಉದ್ದೀಪನಕರವೂ ಆದ ಆಹಾರವನ್ನು ಕೊಡುವೆವು. ಕಣ್ಣಿಲ್ಲದ ನಮ್ಮ ಪ್ರೇಮವು ಅವರ ಶಕ್ತಿಯನ್ನು ಲಕ್ಷಿಸುವುದಿಲ್ಲ. ಅದರಿಂದ ಅಕಾಲ ಯೌವನವೂ, ಅಪಕ್ವ ಸಂತಾನಪ್ರಾಪ್ತಿಯೂ, ಅಕಾಲಿಕ ಮರಣವೂ ಪ್ರಾಪ್ತವಾಗುವವು. ಮಕ್ಕಳು ಸುಲಭವಾಗಿ ಗ್ರಹಿಸುವ ವಸ್ತು ವಿವೇಕವನ್ನು ತಂದೆತಾಯಿಯರು ಮಕ್ಕಳಿಗೆ ಕಲಿಸುವರು. ಅವರ ಅಜಾಗರೂಕ ಕಾಮಕ್ರಿಯಮಗ್ನತೆಯಿಂದ ಅವರ ಮಕ್ಕಳು ಸ್ವೇಚ್ಛಾವಿಹಾರದ ಮಾದರಿ ಪಾಠವನ್ನು ಕಲಿತುಕೊಳ್ಳುವರು. ಕುಟುಂಬ ಜನಸಂಖ್ಯೆಯನ್ನು ಹೆಚ್ಚಿಸುವ ಪ್ರತಿಯೊಂದು ಜನನ ಕಾಲದಲ್ಲಿಯೂ ನಾವು ಆನಂದ ವೈಭವ ಯುಕ್ತವಾದ ಹಬ್ಬವನ್ನಾಚರಿಸುವೆವು! ನಮ್ಮ ಸುತ್ತುಮುತ್ತಣ ಪರಿಸ್ಥಿತಿಯು ಹೀಗಿದ್ದರೂ ನಾವು ಈಗಿರುವುದಕ್ಕಿಂತಲೂ ಅಧಿಕ ನಿಗ್ರಹಯುಕ್ತರಾಗಿಲ್ಲವೆಂಬುದೇ ಆಶ್ಚರ್ಯವನ್ನುಂಟುಮಾಡುತ್ತಲಿರುವುದು. ದೇಶಹಿತ ದೃಷ್ಟಿಯಿಂದ ಬಲಿಷ್ಟರೂ ಸುಂದರರೂ ಪೂರ್ಣ ಬೆಳವಣಿಗೆಯುಳ್ಳವರೂ ಆದ ಸ್ತ್ರೀಪುರುಷರಿಂದ ಭಾರತೀಯ ಜನಾಂಗವು ಶೋಭಿಸುವಂತೆ ಮಾಡಬೇಕೆಂದು ವಿವಾಹಿತರಾದವರು ಅಪೇಕ್ಷಿಸುವುದಾದರೆ ಅವರು ಸದ್ಯಕ್ಕೆ ಸಂತಾನೋತ್ಪಾದನೆಯನ್ನು ನಿಲ್ಲಿಸಿ ಸಂಪೂರ್ಣ ಆತ್ಮನಿಗ್ರಹಸಾಧನೆಯಲ್ಲಿ ಮಗ್ನರಾಗಬೇಕು. ಈಗತಾನೆ ಮದುವೆಯಾದವರಿಗೆ ಕೂಡ ನಾನು ಇದೇ ಉಪದೇಶವನ್ನು ಕೊಡುವೆನು. ಕುಡುಕನಾಗಲಿ, ಮಿತವಾಗಿ ಸೇವಿಸುವನಾಗಲಿ ಮಾದಕ ದ್ರವ್ಯ ಸೇವನೆಯನ್ನು ಬಿಟ್ಟು ಬಿಡುವುದಕ್ಕಿಂತಲೂ ಮಧುಪಾನವರ್ಜಕನು

ಉತ್ತೇಜಕ ಪದಾರ್ಥಗಳನ್ನು ಎಂದೂ ಸೇವಿಸದೇ ಇರುವುದು ಸುಲಭ. ಹಾಗೆಯೆ ಯಾವುದಾದರೊಂದು ಅಭ್ಯಾಸವನ್ನಾರಂಭಿಸಿ ಮಧ್ಯದಲ್ಲಿ ಅದನ್ನು ವರ್ಜಿಸಲೆತ್ನಿಸುವುದಕ್ಕಿಂತಲೂ ಅದನ್ನು ಮೊದಲೇ ಪ್ರಾರಂಭಿಸದಿರುವುದೇ ಸುಲಭವೆನಿಸುವುದು. ಕೆಳಗೆ ಬಿದ್ದು ಏಳುವುದಕ್ಕಿಂತಲೂ ಬೀಳದಂತೆ ಮೊದಲೇ ನೇರವಾಗಿ ನಿಂತಿರುವುದು ಸುಲಭವೆನಿಸುವುದು. ಕೇವಲ ಅತಿ ತೃಪ್ತರಾದವರಿಗೆ ಮಾತ್ರ ಇಂದ್ರಿಯ ನಿಗ್ರಹವನ್ನು ಬೋಧಿಸುವುದು ಸುಲಭವೆಂದು ಭಾವಿಸುವುದು ತಪ್ಪು. ಹಾಗೆಯೇ ದುರ್ಬಲಮಾನಸನಿಗೆ ಬ್ರಹ್ಮಚರ್ಯವನ್ನು ಬೋಧಿಸುವುದು ವ್ಯರ್ಥ. ನಾವು ಯುವಕರಾಗಿರಲಿ, ಮುದುಕರಾಗಿರಲಿ; ಅತಿತೃಪ್ತರಾಗಿರಲಿ, ಇಲ್ಲದಿರಲಿ ಈಗಿನ ಕಾಲದಲ್ಲಿ ನಮ್ಮ ಗುಲಾಮ ವಂಶೋದ್ಧಾರಕ್ಕಾಗಿ ಸಂತಾನೋತ್ಪಾದನೆ ,ಮಾಡುವುದನ್ನು ನಿಲ್ಲಿಸಬೇಕೆಂದು ಬೋಧಿಸುವುದೇ ನನ್ನ ಗುರಿಯಾಗಿದೆ. ಅರ್ಧಾಂಗಗಳ ಹಕ್ಕಿನ ವಾದದ ಬಲೆಗೆ ತಂದೆತಾಯಿಯರು ಬೀಳಬಾರದೆಂದು ನಾನು ಸೂಚಿಸುವೆನು. ಇಂದ್ರಿಯ ಭೋಗಕ್ಕೆ ಒಪ್ಪಿಗೆ ಬೇಕು, ನಿಗ್ರಹಕ್ಕೆ ಒಪ್ಪಿಗೆಯ ಆವಶ್ಯಕತೆಯಿಲ್ಲ. ಇದು ಯಥಾರ್ಥವಾದ ಸತ್ಯ.

ಬಲಿಷ್ಠವಾದ ಸರಕಾರದೊಂದಿಗೆ ಹೋರಾಡುತ್ತ ಮೃತ್ಯುಪಾಶದಲ್ಲಿ ಸಿಕ್ಕಿರುವಾಗ ಎಲ್ಲಾ ಬಗೆಯ ದೈಹಿಕ, ಭೌತಿಕ, ನೈತಿಕ ಮತ್ತು ಆಧ್ಯಾತ್ಮಿಕ ಶಕ್ತಿಯನ್ನು ಸಂಗ್ರಹಿಸಬೇಕಾಗಿರುವುದು. ಅದಕ್ಕೆ ಬೇಕಾದ ಒಂದು ವಸ್ತುವನ್ನು ನಾವು ಪ್ರಾಣಕ್ಕಿಂತಲೂ ಅಧಿಕವಾಗಿ ಗೌರವಿಸದ ವಿನಾ ಆ ಶಕ್ತಿಯು ನಮಗೆ ಲಭಿಸಲಾರದು. ಈ ಸ್ವಕೀಯ ಜೀವನದ ಪಾವಿತ್ರ್ಯತೆ ಇಲ್ಲವಾದರೆ ನಾವು ಎಂದೆಂದಿಗೂ ದಾಸ್ಯಜನಾಂಗವಾಗಿಯೆ ಇರಬೇಕಾಗುವುದು. ಸರಕಾರದ ಆಡಳಿತ ಪದ್ಧತಿಯು ಕೀಳಾಗಿರುವುದರಿಂದ ನಮ್ಮ ಸ್ವಕೀಯ ಪಾವಿತ್ರ್ಯತೆಯ ಮೇಲಾಟದಲ್ಲಿ ಇಂಗ್ಲೀಷರು ನಮಗೆ ಆತಂಕವನ್ನುಂಟುಮಾಡುತ್ತಿರುವರೆಂದು ನಾವು ಕಲ್ಪನೆ ಮಾಡಿಕೊಳ್ಳಬಾರದು. ಆ ತಪ್ಪು ಕಲ್ಪನೆಯಿಂದ ನಮ್ಮನ್ನು ನಾವೇ ವಂಚಿಸಿಕೊಳ್ಳಬಾರದು. ಸಾರಭೂತವಾದ ಸದ್ಗುಣಗಳನ್ನು ಆಧ್ಯಾತ್ಮಿಕ ರೀತಿಯಲ್ಲಿ ತೋರದೆ ದೈಹಿಕ ದೃಷ್ಟಿಯಿಂದಲಾದರೂ ಅವರು

ಅದರ ಸಾಧನೆಯನ್ನು ವಿಶೇಷವಾಗಿ ಮಾಡುತ್ತಿರುವರು. ಅವರ ದೇಶದ ರಾಜಕೀಯ ಜೀವನದಲ್ಲಿ ತೊಡಗಿರುವವರಲ್ಲನೇಕರಲ್ಲಿ ಹಲವು ಬ್ರಹ್ಮಚಾರಿಗಳೂ ಬ್ರಹ್ಮಚಾರಿಣಿಯರೂ ಇರುವರು. ನಮ್ಮಲ್ಲಿ ಬ್ರಹ್ಮಚಾರಿಣಿಯರೇ ಇಲ್ಲವೆಂದು ಹೇಳಬಹುದು. ಕ್ರೈಸ್ತ ಮತಬೋಧಕರಾದ 'ನನ್' ಎಂಬ ಬ್ರಹ್ಮಚಾರಿಣಿಯರು ಈ ದೇಶದಲ್ಲಿರುವರು. ಆದರೆ ಅವರಿಂದ ರಾಜಕೀಯ ಜೀವನದ ಮೇಲೆ ಆವ ಪರಿಣಾಮವೂ ಆಗುತ್ತಿಲ್ಲ. ಆದರೆ ಯೂರೋಪ್ ದೇಶದಲ್ಲಿ ಸಾವಿರಾರು ಸ್ತ್ರೀಯರು ಬ್ರಹ್ಮಚರ್ಯೆಯನ್ನು ಸಾಮಾನ್ಯ ಸದ್ಗುಣವಾಗಿ ತಿಳಿದು ಅದರ ಅನುಷ್ಠಾನವನ್ನು ಮಾಡುತ್ತಿರುವರು.

ಈಗ ನನ್ನ ಸ್ನೇಹಿತರ ಮತ್ತು ನನ್ನ ಸ್ವಂತ ಅನುಭವಗಳ ಆಧಾರವುಳ್ಳ ಕೆಲವು ಸರಳ ನಿಯಮಗಳನ್ನು ವಾಚಕರ ಮುಂದಿಡುವೆನು :—

೧. ಮಕ್ಕಳು ನಿರ್ದೋಷಿಗಳಾಗಿರುವರು ಮತ್ತು ಯಾವಾಗಲೂ ಅವರು ಹಾಗಿರಬಹುದೆಂಬ ನಂಬಿಕೆಯಲ್ಲಿಯೆ ಬಾಲಕ ಬಾಲಕಿಯರನ್ನು ಸರಳವೂ ಸ್ವಾಭಾವಿಕವೂ ಆದ ರೀತಿಯಲ್ಲಿ ತರಬೇತು ಮಾಡಬೇಕು.

೨. ಕರಿದ ಪದಾರ್ಥ, ಮಿಠಾಯಿ, ಬಾಳಕಾದಿ ಕೊಬ್ಬಿನ ಪದಾರ್ಥಗಳನ್ನೂ ; ಮೆಣಸಿನಕಾಯಿ, ದಾಲಚಿನ್ನಿ ಮೊದಲಾದ ಮಸಾಲೆಯುಳ್ಳ ಆಹಾರವನ್ನೂ; ಉಷ್ಣಕರವೂ ಉದ್ದೀಪನಕರವೂ ಆದ ಆಹಾರ ಪದಾರ್ಥಗಳನ್ನೂ ಎಲ್ಲರೂ ವರ್ಜಿಸಬೇಕು.

೩. ಸತಿಪತಿಯರು ಬೇರೆಬೇರೆ ಕೋಣೆಗಳಲ್ಲಿ ಮಲಗಬೇಕು. ಏಕಾಂತ ವಾಸವನ್ನು ವರ್ಜಿಸಬೇಕು.

೪. ದೇಹವನ್ನೂ ಮನಸ್ಸನ್ನೂ ಯಾವಾಗಲೂ ಆರೋಗ್ಯಕರ ಕ್ರಿಯೆಯಲ್ಲಿ ತೊಡಗಿಸಿರಬೇಕು.

೫. ಜಾಗ್ರತೆಯಾಗಿ ಮಲಗುವದು, ಜಾಗ್ರತೆಯಾಗಿ ಏಳುವ ನಿಯಮವನ್ನು ಸರಿಯಾಗಿ ಪಾಲಿಸಬೇಕು.

೬. ಅಪವಿತ್ರ ಪುಸ್ತಕಗಳನ್ನು ಓದಕೂಡದು. ಅಪವಿತ್ರ ಭಾವನೆಗಳಿಗೆ ಪವಿತ್ರ ಭಾವನೆಗಳೇ ಮದ್ದು.

೭. ಕಾಮುಕ ವಿಚಾರವನ್ನು ಉದ್ರೇಕಗೊಳಿಸುವ ನಾಟಕಮಂದಿರ, ಸಿನೀಮಾದಿಗಳಿಂದ ದೂರವಾಗಿರಬೇಕು.

೮. ಸ್ವಪ್ನದಲ್ಲಿ ವೀರ್ಯಸ್ರಾವವಾದರೆ ವ್ಯಾಕುಲರಾಗಕೂಡದು. ಅಂತಹ ಸಂದರ್ಭಗಳಲ್ಲಿ ಸಾಮಾನ್ಯ ಬಲಿಷ್ಠನಾಗಿರುವವನು ತಣ್ಣೀರಿನಲ್ಲಿ ಸ್ನಾನ ಮಾಡುವುದೊಳ್ಳೆಯದು. ಆಗಾಗ್ಗೆ ಇಂದ್ರಿಯ ಭೋಗವನ್ನು ಹೊಂದುವುದರಿಂದ ಸ್ವಪ್ನಾವಸ್ಥೆಯಲ್ಲಿ ವೀರ್ಯಸ್ರಾವವಾಗದೆಂದು ತಿಳಿಯುವುದು ತಪ್ಪು.

೯. ದಂಪತಿಗಳು ಬ್ರಹ್ಮಚರ್ಯೆಯನ್ನಾಚರಿಸುವುದು ಸಾಧ್ಯವೆಂದು ಯಾರೂ ಭಾವಿಸಕೂಡದು. ಅದಕ್ಕೆ ಬದಲಾಗಿ ಇಂದ್ರಿಯ ನಿಗ್ರಹವೇ ಸಾಮಾನ್ಯ ಮತ್ತು ಸ್ವಾಭಾವಿಕ ಜೀವನ ಸಾಧನೆಯಾಗಿರುವುದೆಂದು ತಿಳಿಯಬೇಕು.

೧೦. ಪವಿತ್ರತೆಗೋಸುಗ ಪ್ರತಿನಿತ್ಯವೂ ಹೃದಯಪೂರ್ವಕವಾಗಿ ಪ್ರಾರ್ಥಿಸುವುದರಿಂದ ಮಾನವನು ಕಾಲಕ್ರಮದಲ್ಲಿ ಪರಿಶುದ್ಧನಾಗುವನು.